ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಮ್.ಫಿಲ್ ಪದವಿಯ ನಿಬಂಧ

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಥೆಗಳಲ್ಲಿ "ಪ್ರಕೃತಿ ಮತ್ತು ಪರಿಸರ"

ೋಧನ ವಿದ್ಯಾರ್ಥಿನಿ
ತಾರಾಮಣಿ .ಆರ್

ಮಾರ್ಗದರ್ಶಕರು
ಪ್ರೊ. ಕೆ.ಎಸ್. ಮಧುಸೂಧನ್

ಎಂ.ಎ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
2010

ಸಂಪೂರ್ಣ ಸಂ.ಕೆ.೪೫೭.

840

840

ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಮ್.ಫಿಲ್ ಪದವಿಯ ನಿಬಂಧ

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಥೆಗಳಲ್ಲಿ "ಪ್ರಕೃತಿ ಮತ್ತು ಪರಿಸರ"

ಸಂಶೋಧನ ವಿದ್ಯಾರ್ಥಿನಿ
ತಾರಾಮಣಿ .ಆರ್

ಮಾರ್ಗದರ್ಶಕರು
ಪ್ರೊ. ಕೆ.ಎಸ್. ಮಧುಸೂಧನ್

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
2010

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ **೨೦೦೯-೨೦೧೦**ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಕಥೆಗಳಲ್ಲಿ "ಪ್ರಕೃತಿ ಮತ್ತು ಪರಿಸರ"** ಎಂಬ ನಿಬಂಧವನ್ನು ಪ್ರೊ.ಕೆ.ಎಸ್.ಮಧುಸೂದನ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/–

(ತಾರಾಮಣಿ .ಆರ್)
ಸಂಶೋಧನ ವಿಧ್ಯಾರ್ಥಿನಿ

ದಿನಾಂಕ: ೦೬.೦೯.೨೦೧೦
ಸ್ಥಳ : ಬೆಂಗಳೂರು

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ **೨೦೦೯-೨೦೧೦**ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಕಥೆಗಳಲ್ಲಿ "ಪ್ರಕೃತಿ ಮತ್ತು ಪರಿಸರ"** ಎಂಬ ನಿಬಂಧವನ್ನು ತಾರಾಮಣಿ .ಆರ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧ ವಿಧ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/–

(ಪ್ರೊ. ಕೆ.ಎಸ್.ಮಧುಸೂದನ)
ಮಾರ್ಗದರ್ಶಕರು

ದಿನಾಂಕ: ೦೬.೦೯.೨೦೧೦
ಸ್ಥಳ : ಬೆಂಗಳೂರು

ಪರಿವಿಡಿ

ಅಧ್ಯಾಯ-1

1. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಾಹಿತ್ಯ ಮತ್ತು ಪ್ರಕೃತಿಯ ಸಂಬಂಧ ಅಗಾಧವಗಿರುವಂತದ್ದು. ಪ್ರಕೃತಿಯಲ್ಲಿನ ಅನೇಕ ವಿಸ್ಮಯಗಳನ್ನು, ಕುತೂಹಲಗಳನ್ನು, ರಹಸ್ಯಗಳನ್ನು ಹಲವಾರು ಸಾಹಿತಿಗಳು ತಮ್ಮ ಸೃಜನಶೀಲ ಪ್ರತಿಭೆಯ ಮೂಲಕ ಹೊರಗೆಡವಿದ್ದಾರೆ. ಪ್ರಕೃತಿಯ ತನ್ನ ಮಡಿಲಿನಲ್ಲಿ ಅಪಾರವಾದ ರಹಸ್ಯಗಳನ್ನು ಒಳಗೊಂಡಿರುವಂತೆ ಅಪಾರ ಪ್ರತಿಭೆಯುಳ್ಳ ಚೇತನಗಳನ್ನು ಒಳಗೊಂಡಿದೆ. ಅಂತಹ ಪ್ರಮುಖ ಚೇತನಗಳೆಂದರೆ ಕುವೆಂಪು, ಶಿವರಾಮಕಾರಂತರು, ಈ ಇಬ್ಬರು ಅಪೂರ್ವ ಚೇತನಗಳಂತೆಯೇ ತಮ್ಮ ಸೃಜನಶೀಲ ಬರವಣಿಗೆಯ ಮೂಲಕ ಸಹೃದಯರ ಮೈ ಮನಗಳಲ್ಲಿ ತಮ್ಮದೇ ಆದ ಛಾಯೆಯನ್ನು ಮೂಡಿಸಿರುವ ಅದ್ವಿತೀಯ ಪ್ರತಿಭೆ ಪೂರ್ಣಚಂದ್ರ ತೇಜಸ್ವಿ

ಪೂರ್ಣಚಂದ್ರ ತೇಜಸ್ವಿಯವರು ಕನ್ನಡದ ಅತ್ಯುತ್ತಮ ಕತೆಗಾರರಲ್ಲಿ ಒಬ್ಬರು. ನವ್ಯ ಸಾಹಿತ್ಯ ಆಗತಾನೇ ಪ್ರಾರಂಭವಾಗಿದ್ದ ಕಾಲದಲ್ಲಿ ತೇಜಸ್ವಿಯವರು ಸಂಸ್ಕೃತದ ಭಾರವೂ ಇಲ್ಲದ, ಇಂಗ್ಲೀಷಿನ ಭಾರವೂ ಇಲ್ಲದ ಅಚ್ಚಗನ್ನಡದ ಶೈಲಿಯಲ್ಲಿ ಕತೆಯನ್ನು ಬರೆಯಲು ಪ್ರಾರಂಭಿಸಿದರು. ಶ್ರೀ ಸಾಮಾನ್ಯನ ಜೀವನವನ್ನು ಕೇಂದ್ರವಾಗಿಟ್ಟುಕೊಂಡು ಕತೆಯನ್ನು ಹೆಣೆಯುವ ತೇಜಸ್ವಿಯವರು ಮನುಷ್ಯನ ಬದುಕಿನ ಹಿಂದೆ ಇರುವ ನಿಗೂಢತೆಯನ್ನು, ಯಶಸ್ಸು ಮತ್ತು ವೈಫಲ್ಯಗಳನ್ನು ತಮ್ಮ ಕತೆಗಳ ಮೂಲಕ ಚಿತ್ರಿಸುತ್ತ ಬಂದಿದ್ದಾರೆ.

ಸಾಹಿತ್ಯದ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಹೆಗ್ಗುರುತನ್ನು ಸೃಷ್ಟಿಸಿದ ಕುವೆಂಪುರವರ ಪುತ್ರರಾದ ತೇಜಸ್ವಿಯವರ ಲವಲವಿಕೆಯ ಬರವಣಿಗೆ ಅವರ ವೈವಿಧ್ಯಮಯ ಬದುಕಿನಷ್ಟೆ ಸಮೃದ್ಧವಾದುದು. ಶಿವರಾಮಕಾರಂತರನ್ನು ಬಿಟ್ಟರೆ ತೇಜಸ್ವಿಯೊಬ್ಬರೇ ಪ್ರಮುಖ ಸಾಹಿತಿಯಾಗಿಯೂ ಸಾಹಿತ್ಯೇತರ ಚಟುವಟಿಕೆಗಳ ಬಗ್ಗೆಯೂ ಅಷ್ಟೊಂದು ತೀವ್ರವಾದ ಆಸಕ್ತಿ ಇಟ್ಟುಕೊಂಡಿರುವುದು. ತೇಜಸ್ವಿಯವರು ಕತೆಗಳನ್ನು ಬರೆಯುವಷ್ಟೇ ತನ್ಮಯತೆಯಿಂದ ಹಕ್ಕಿಗಳ ಬಗ್ಗೆ, ಕೃಷಿಯ ಬಗ್ಗೆ, ಹಾರಾಡುವ ತಟ್ಟೆಗಳ ಬಗ್ಗೆ, ಬಣ್ಣ ಬಣ್ಣದ ಮೀನುಗಳ ಬಗ್ಗೆ ಬರೆಯಬಲ್ಲರು. ಹಾಗಾಗಿಯೇ ಕನ್ನಡ ಜನತೆ ತೇಜಸ್ವಿಯವರನ್ನು ಸಾಮಾನ್ಯ ಲೇಖಕರೆಂದು ಭಾವಿಸದೆ "ಸಾಂಸ್ಕೃತಿಕ ವ್ಯಕ್ತಿತ್ವ" ವೆಂದು ಭಾವಿಸಿದೆ.

ಸ್ವಾತಂತ್ರ ಜೀವನದ ಹಾದಿಯನ್ನು ಆಯ್ದುಕೊಂಡ ತೇಜಸ್ವಿಯವರು ಸಾಹಿತ್ಯ ಕ್ಷೇತ್ರದಲ್ಲಿಯೂ ತಮ್ಮದೇ ಆದ ಹಾದಿಯನ್ನು ನಿರ್ಮಿಸಿಕೊಂಡು ಹೊರಟವರು ಇವರು ಕವಿತೆ ಕವಿತೆ ಮತ್ತು ನಾಟಕ ಕ್ಷೇತ್ರದಲ್ಲಿ ಕೈ ಆಡಿಸಿದರೂ ಕನ್ನಡದ ಅನನ್ಯ ಕಥೆಗಾರರಾಗಿ, ಕಾದಂಬರಿಕಾರರಾಗಿ ಅನುಭವದ ಹೊಸ ವಲಯಗಳನ್ನು ಶೋಧಿಸುವ ಸಾಧನೆ ಅವರದಾಗಿದೆ. ಯಾವುದೇ ಒಂದು ಪಂಥದ ಸಿದ್ಧಾಂತಗಳಿಗೆ ಕಟ್ಟು ಬೀಳದೆ ಶುದ್ಧ ಸಾಹಿತ್ಯದಲ್ಲಿ ನಂಬಿಕೆಯರಿಸಿ ಮೌಲಿಕ ಕೃತಿಗಳ ರಚನೆಯಿಂದ ರಾಷ್ಟ್ರಮಟ್ಟದ ಗೌರವಾದರಗಳನ್ನು ಗಳಿಸಿಕೊಂಡವರು. ಈ ಎಲ್ಲಾ ಕಾರಣಗಳಿಂದಾಗಿ ತೇಜಸ್ವಿಯವರು ಕನ್ನಡದ ಮಹತ್ವದ ಲೇಖಕರಲ್ಲಿ ಒಬ್ಬರಾಗಿದ್ದಾರೆ.

ಪೂರ್ಣಚಂದ್ರ ತೇಜಸ್ವಿಯವರೇ ಹೇಳಿಕೊಂಡಿರುವಂತೆ ಅವರ ಬರವಣಿಗೆಯ ಮೇಲೆ ಆಳವಾಗಿ ಪ್ರಭಾವ ಬೀರಿರುವುದು ಮೂರು ಅಂಶಗಳು. ಅವುಗಳೆಂದರೆ

ಅ. ಕುವೆಂಪು ಅವರ ಕಲಾಸೃಷ್ಟಿ

ಆ. ಲೋಹಿಯಾ ಅವರ ತತ್ವಚಿಂತನೆ

ಇ. ಕಾರಂತರ ಜೀವನದ ಪ್ರಯೋಗಶೀಲತೆ ಮತ್ತು ಸಾಹಸ

ಜೀವನದಲ್ಲಿ ಕಂಡುಂಡ ಅನುಭವಗಳನ್ನು ಅವರು ತಮ್ಮ ಸಾಹಿತ್ಯದ ಮೂಲಕ ನಮ್ಮೊಡನೆ ಹಂಚಿಕೊಂಡಿದ್ದಾರೆ. ಅವರ ಬರವಣಿಗೆಯಲ್ಲಿ ಒಂದು ಶಿಸ್ತು ಕಾರ್ಯೋನ್ಮುಖವಾಗಿರುವುದು ನಮಗೆ ಕಂಡು ಬರುತ್ತದೆ. ಅವರ ಸಾಹಿತ್ಯದಲ್ಲಿ ಪರಿಸರ ಹಾಗೂ ಸಮಾಜದ ಬಗ್ಗೆ ಅತ್ಯಂತ ಕಾಳಜಿಗಳು ಹಾಗೂ ಪ್ರಗತಿಪರ ಚಿಂತನೆಗಳೊಂದಿಗೆ ನವಿರಾದ ಹಾಸ್ಯ ಪ್ರಜ್ಞೆ, ನಿರೂಪಣೆಯಲ್ಲಿನ ಒಂದು ಬಗೆಯ ನಿರ್ಲಿಪ್ತತೆ ಹಾಗೂ ವಿಸ್ಮಯಕಾರಿ ಅಂಶಗಳು ತೇಜಸ್ವಿಯವರ ಬಹುಮುಖ ಪ್ರತಿಭೆಯನ್ನು ಪರಿಚಯಿಸುತ್ತದೆ.

ದೇಸಿ ತಿಳುವಳಿಕೆಯ ಅಮೂಲ್ಯತೆಯನ್ನು, ಸ್ತ್ರೀ ಶಕ್ತಿಯ ಘನತೆಯನ್ನು, ಪ್ರಕೃತಿಯ ಸಂಕೀರ್ಣತೆಯನ್ನು ತೇಜಸ್ವಿಯವರಷ್ಟು ಅರ್ಥಪೂರ್ಣವಾಗಿ ಅನಾವರಣಗೊಳಿಸಿದವರು ಕನ್ನಡದ ಮಟ್ಟಿಗೆ ಅಪರೂಪ. ಇಂತಹ ಅಪೂರ್ವ ಚೇತನ ತೇಜಸ್ವಿಯವರ ಕತೆಗಳಲ್ಲಿ "ಪ್ರಕೃತಿ ಮತ್ತು ಪರಿಸರ" ಕುರಿತ ವಿಚಾರವನ್ನು ಅಧ್ಯಯನದ ಹಿಂದಿನ ಉದ್ದೇಶ ವ್ಯಾಪ್ತಿ ತಾತ್ವಿಕ ನೆಲೆಗಟ್ಟು ಮತ್ತು ಓದುವಿಕೆಯ ವಿಧಾನಗಳನ್ನು ವಿವರಿಸುವ ಪ್ರಯತ್ನವಿದೆ.

ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟ್ ಆಫೀಸ್, ಕಿರುಗೂರಿನ ಗಯ್ಯಾಳಿಗಳು, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಪಾಕಕ್ರಾಂತಿ ಮತ್ತು ಇತರ ಕತೆಗಳು, ಪರಿಸರದ ಕತೆಗಳು ಹಾಗೂ ಕರ್ವಾಲೋ ಕಾದಂಬರಿಯ ಮಿತಿಯಲ್ಲಿ ತೇಜಸ್ವಿಯವರ ಕತೆಗಳ ವ್ಯಾಪ್ತಿಯಲ್ಲಿ ಮೂಡಿರುವ ಪ್ರಕೃತಿ ಮತ್ತು ಪರಿಸರದ ಅಧ್ಯಯನವನ್ನು ~~ಈ~~ ನಿಬಂಧದಲ್ಲಿ ~~ಮೂಡಿಸುವ ಪ್ರಯತ್ನ ಮಾಡಲಾಗಿದೆ.~~

ಅಧ್ಯಾಯ– 2

ಪ್ರಕೃತಿ ಮತ್ತು ಪರಿಸರದ ಅರ್ಥ ವ್ಯಾಪ್ತಿ

ಪ್ರಕೃತಿಯ ಅರ್ಥ ವ್ಯಾಪ್ತಿ:

ಮಾನವ ನಿರ್ಮಿತವಲ್ಲದ್ದು ಪ್ರಕೃತಿ, ಅದರ ಆರಾಧನೆಯ ಮೂಲಕ ಆದಿ ಮಾನವ ಅದರ ವಿನಾಶವನ್ನು ತಡೆಗಟ್ಟಿದ್ದಾನೆ. ಅದರ ಸಂರಕ್ಷಣೆಗಾಗಿ ಅವನು ದೇವಾನುದೇವತೆಗಳೆಂದು ಪ್ರಕೃತಿಯನ್ನು ಪೂಜಿಸಿದ್ದಾನೆ. ನಮ್ಮ ಸಂಸ್ಕೃತಿಯ ಚರಿತ್ರೆಯನ್ನು ಗಮನಿಸಿದಾಗ ಪ್ರಕೃತಿ ಕವಿಗಳನ್ನೂ ತನ್ನ ಚೆಲುವಿನಿಂದ ಆಕರ್ಷಿಸಿದೆ. ಅಷ್ಟಾದಶವರ್ಣನೆಗಳಲ್ಲಿ ಕವಿ ಸಮಯದ ಒಂದು ಭಾಗವಾಗಿ, ಸೃಜನಶೀಲತೆಯಿಂದ ದೂರಾಗಿ ಕೇವಲ ವರ್ಣನೆಗಾಗಿ, ಅನಿವಾರ್ಯವಾಗಿ ಕಾಣಿಸಿಕೊಂಡ ಪ್ರಕೃತಿ ಬಹುಶಃ ಸಂಸ್ಕೃತದ ಕಾಳಿದಾಸದಲ್ಲಿ ಪೂರ್ಣಪ್ರಮಾಣದ ಕಾವ್ಯ ವಸ್ತುವಾದುದನ್ನು ಗುರುತಿಸಬಹುದು. ಸ್ವಂತ ಅನುಭವದ ಆಧಾರವಿಲ್ಲದ, ಕಾವ್ಯ ಸಂದರ್ಭದಲ್ಲಿ ಯಾವ ತುರ್ತು ಇಲ್ಲದೆ ಬಂದ ಋತುಮಾನಗಳು, ಸಮುದ್ರ, ಪರ್ವತ, ಸೂರ್ಯೋದಯ, ಚಂದ್ರೋದಯಗಳ ವರ್ಣನೆಗಳು ಕಾವ್ಯದ ಅನಿವಾರ್ಯವಾದ ಅಂಗಗಳೆನಿಸಲಿಲ್ಲ. ಕಾವ್ಯದಲ್ಲಿ ಅಂತರ್ಗತ ಸಂಬಂಧಗಳನ್ನು ಪಡೆದುಕೊಳ್ಳಲಿಲ್ಲ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿಯೂ ಈ ಮಾತು ಸುಳ್ಳೇನಲ್ಲ ವರ್ಣನೆಗಾಗಿಯೇ ಬರುವ "ಪ್ರಕೃತಿ" ಯನ್ನು ಪ್ರತಿಭಾನ್ವಿತ ಸೃಜನಶೀಲ ಕವಿಗಳು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಪಂಪನ ಬವಾಸಿಯ ವರ್ಣನೆಗಳಾಗಲಿ, ಹರಿಹರನ ಪುಷ್ಪರಗಳೆಯಾಗಲಿ, ಗಿರಿಜಾಕಲ್ಯಾಣದ ಚಳಿಗಾಲದ ವರ್ಣನೆಗಳಾಗಲಿ ಮನಸೂರೆಗೊಳ್ಳದಿಲ್ಲ. ಕವಿರಾಜಮಾರ್ಗಕಾರನೂ ಕನ್ನಡ ನಾಡುನುಡಿಯ ವರ್ಣನೆಯನ್ನು ಮಾಡಿದ್ದಾನೆ. ವಚನಕಾರರಲ್ಲಿ ಬರುವ ಪ್ರಕೃತಿ ವರ್ಣನೆಯೂ ಕೂಡ ಅರ್ಥವಂತಿಕೆಯ ನೆಲೆಯಲ್ಲಿ ಪರಿಭಾವಿಸಲು ಯೋಗ್ಯವಾಗುತ್ತದೆ. ಅಕ್ಕಮಹಾದೇವಿ ಪ್ರಕೃತಿಯಲ್ಲಿ ಚೈತನ್ಯದ ನೆಲೆ ಗುರುತಿಸಕೊಂಡೇ ಸಂಭಾಷಣೆಗಿಳಿಯುತ್ತಾಳೆ. ಕುಮಾರವ್ಯಾಸ ಪ್ರಕೃತಿ–ಮನುಷ್ಯ ಪ್ರಕೃತಿಯ ನಡುವೆ ಅಭೇಧ ಬಾವ ಕಲ್ಪಿಸಿಬಿಡುತ್ತಾನೆ.

ನವೋದಯ ಕಾವ್ಯ ಸಂದರ್ಭವು ಪ್ರಕೃತಿಯನ್ನು ಕಾವ್ಯದ ಪ್ರಮುಖ ವಸ್ತುವಾಗಿಸಲು ಒತ್ತಾಯಿಸುತ್ತದೆ. ಕುವೆಂಪುರಂತಹ ನವೋದಯ ಕವಿಗಳು ಪ್ರಕೃತಿ ಹಾಗೂ ಚೇತನ ಇವುಗಳ ನಡುವೆ ಹೊಂದಾಣಿಕೆ ಇರಬೇಕು ಎಂದು ಆಶಿಸುತ್ತಾರೆ. ನಿಸರ್ಗವನ್ನು ಮತ್ತೆ ಹತ್ತಿರ

ಮಾಡಿಕೊಳ್ಳುವುದರ ಮೂಲಕ ನಿಸರ್ಗಕ್ಕೂ ಚೇತನಕ್ಕೂ ನಡುವೆ ಇರುವ ಬಿರುಕನ್ನು ತುಂಬಿಕೊಳ್ಳಬೇಕೆಂದು ಬಯಸುತ್ತಾರೆ. ಪ್ರಕೃತಿಯನ್ನು ಆರಾಧನೆಯ ದೃಷ್ಟಿಯಿಂದ ನೋಡಲು ಇದೇ ಬಹಳ ಮುಖ್ಯ ಕಾರಣವಾಗುತ್ತದೆ. ಪ್ರಕೃತಿಯನ್ನು ಆರಾಧಿಸುವುದರ ಮೂಲಕ ಮಣ್ಣಿಗೆ, ಬದುಕಿಗೆ, ಹತ್ತಿರವಾಗುವುದಕ್ಕೆ, ಆ ಮೂಲಕ ಜೀವಂತಿಕೆ ಪಡೆದುಕೊಳ್ಳಬಹುದೆಂದು ಭಾವಿಸುತ್ತಾರೆ. ಆದ್ದರಿಂದಲೇ ಕುವೆಂಪುರವರು ಪ್ರಕೃತಿ ಪ್ರಿಯರಾಗುವುದು, ನಿಸರ್ಗೋಪಾಸಕರಾಗುವುದು, ನಿಸರ್ಗವನ್ನು ದೇವರೆಂದು ಭಾವಿಸುವುದು.

ಪ್ರಕೃತಿಯನ್ನು ಹೆಣ್ಣೆಂದು ಪರಿಕಲ್ಪಿಸಿಕೊಳ್ಳುವ ಅಂಶ ಇವರಲ್ಲಿಯೂ ಕಂಡುಬರುತ್ತದೆ. ಅವಳು ಪೋಷಿಸುವ, ರಕ್ಷಿಸುವ, ಕಾಪಾಡುವ ಜಗನ್ಮಾತೆಯಾಗುತ್ತಾಳೆ. ತನಗೆ ತೀವ್ರ ದುಃಖ, ಒಂಟಿತನ, ಏಕಾಕಿತನಗಳು ಕಾಡಿದರೆ ಅವಳ ಮೊರೆ ಹೋಗುವ ಗುಣ ಕುವೆಂಪುರವರದು.

"ಸೂರ್ಯೋದಯ ಚಂದ್ರೋದಯ ದೇವರ ದಯೆ ಕಾಣೋ" ಪ್ರಕೃತಿಯನ್ನು ಕವಿ ದೈವ ಸೃಷ್ಟಿ ಎಂದು ಕೆಲವೊಮ್ಮೆ ಭಾವಿಸುತ್ತಾ ಮತ್ತೆ ಕೆಲವೊಮ್ಮೆ ಪ್ರಕೃತಿಯೇ ದೇವರು ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ.

ಕುವೆಂಪು ಪ್ರಕೃತಿಯಲ್ಲಿ ದೈವತ್ವವನ್ನು ಗುರುತಿಸಿ ಭಾವ ಸಮಾಧಿಗೆ ತಲುಪುತ್ತಾರೆ ಆದರೆ ತೇಜಸ್ವಿಯವರು ಅದಕ್ಕೆ ವಿರುದ್ಧವಾದ ಪ್ರಕೃತಿಯಲ್ಲಿನ ವಿಚಾರಗಳನ್ನು ವಾಸ್ತವದ ನೆಲೆಯಲ್ಲಿ ಗುರುತಿಸಲು ಪ್ರಯತ್ನಿಸುತ್ತಾರೆ.

ಕುವೆಂಪುರವಂತೆಯೇ ತೇಜಸ್ವಿಯವರು ಪರಿಸರದ ಬಗೆಗೆ ಕಾಳಜಿಯನ್ನು ತಾಳಿ ಅದನ್ನು ತಮ್ಮ ಬರವಣಿಗೆಯ ವಸ್ತುವನ್ನಾಗಿಸಿಕೊಂಡರು. ವಾಸ್ತವದ, ಸತ್ಯದ, ವಿಶ್ಲೇಷಣಾತ್ಮಕ ವಿವರಗಳನ್ನು ಸಹೃದಯರಿಗೆ ನೀಡುತ್ತಾರೆ. ಮೂಲತಃ ಅವರು ನಗರವನ್ನು ಬಿಟ್ಟು ಹಳ್ಳಿಯನ್ನು ಸೇರಿ ವ್ಯವಸಾಯವನ್ನು ತಮ್ಮ ಉದ್ಯೋಗವನ್ನಾಗಿಸಿ ಕೊಂಡದ್ದು ಅವರಿಗೆ ಪ್ರಕೃತಿಯ ಮೇಲೆ ಇದ್ದ ಅಗಾಧವಾದ ಪ್ರೀತಿಯಿಂದ. ತಮ್ಮ ಬಿಡುವಿನ ಸಮಯದಲ್ಲಿ ಕಾಡುಗಳನ್ನಲೆದು ಅಲ್ಲಿನ ಅಭೂತಪೂರ್ವ ಅನುಭವಗಳನ್ನು ಅವರು ಸೆರೆಹಿಡಿಯುವ ಹಾಗೂ ಅದರ ಒಳಹೊಕ್ಕು ಪೂರ್ವಪರಗಳನ್ನು ಪರಿಶೀಲಿಸುವ ದೃಷ್ಟಿಕೋನವನ್ನು ಬಹುಶಃ ನಾವು ತೇಜಸ್ವಿಯವರಲ್ಲಿ ಮಾತ್ರ ಕಾಣಲು ಸಾಧ್ಯವಾಗುತ್ತದೆ. ಇಂತಹ ಪ್ರಕೃತಿಯ ಸಂರಕ್ಷಣೆಯ ಜವಾಬ್ದಾರಿ ಮುಂದಿನ ಪೀಳಿಗೆಯ ಮೇಲಿದೆ ಎಂಬ ವಿಷಯವನ್ನು ತಮ್ಮ ಕೃತಿಗಳ ಮೂಲಕ ಸ್ಪಷ್ಟಪಡಿಸುತ್ತಾರೆ.

ಪ್ರಾಣಿ, ಪಕ್ಷಿ, ಕೀಟ, ಗಿಡ ಮರಗಳನ್ನು ಕುರಿತು ಬರೆಯುವ ಕಾರಣ ತೇಜಸ್ವಿಯವರನ್ನು ಪರಿಸರದ ಲೇಖಕ ಎಂದು ಸಾಮಾನ್ಯವಾಗಿ ಗ್ರಹಿಸಲಾಗಿದೆ. ಅವರಿಗೆ ಬೇಟೆಯ ಸೆಳೆತವಿದೆ. ಮಾಂಸಾಹಾರದ ಬಗ್ಗೆ ತಿರಸ್ಕಾರವಿಲ್ಲ. ಅವರ ಕೃತಿಗಳು ಕಟ್ಟಿಕೊಡುವ ಪರಿಸರದಲ್ಲಿ ಜನ, ಪ್ರಾಣಿ, ಕೀಟ, ಪಕ್ಷಿ, ನದಿ, ಗಿಡ, ಮರ ಎಲ್ಲವೂ ಸೇರಿ ಪರಸ್ಪರ ಸಂಘರ್ಷ ಮತ್ತು ಸಹಬಾಳ್ವೆ ಮಾಡುತ್ತಿರುವ ಹೊಸ ಜೀವನಸತ್ವವೊಂದು ನೆಲೆಸಿದೆ. ಕಾರಂತರ ಜ್ಞಾನಶೋಧ ಹಾಗು ಕುವೆಂಪು ಅವರ ಅದ್ವೈತ ಕಲ್ಪನೆಯನ್ನು ತೇಜಸ್ವಿಯವರು ಹೀಗೆ ರೂಪಿಸಿಕೊಂಡರು.

ತೇಜಸ್ವಿ ಸಾಹಿತ್ಯದಲ್ಲಿ ಸುಲಭವೆಂಬಂತೆ ಪ್ರಕಟವಾಗುವ ಪರ್ಯಾಯವೆಂದರೆ ಈ ಸಮಾಜದ ನಾಶವನ್ನು ಕುರಿತ ಆತಂಕ. ಈ ನಾಶವನ್ನು ಯಾರ ಹಿಡಿತಕ್ಕೂ ಸಿಗದೆ ವಿಜೃಂಭಿಸುವ ನಿಸರ್ಗವೇ ಮಾಡಬೇಕು. ಎಕಾಲಜಿಯ ಆವರ್ತನದಲ್ಲಿ ಪ್ರಕೃತಿಯ ದುರ್ದಮ್ಯ ಪ್ರವೃತ್ತಿ ಪ್ರಕಟವಾಗುತ್ತದೆ. ಭೀಕರ ಗಾಳಿ, ಧಾರಾಕಾರ ಮಳೆ, ನಿಯಂತ್ರಿಸಲಾಗದ ಕಾಳ್ಗಿಚ್ಚು ಇತ್ಯಾದಿ.

ಪರಿಸರದ ಅರ್ಥ ವ್ಯಾಪ್ತಿ:

ನಾವು ಯಾವುದನ್ನು ಪ್ರಕೃತಿ ಅಂತ ಕರೆಯುತ್ತೇವೆಯೋ ಆ ಕಾಡು, ಬೆಟ್ಟ, ಗುಡ್ಡ, ನದಿ, ಸಮುದ್ರ, ಪ್ರಾಣಿ ಸಂಕುಲ, ಸಸ್ಯಜಗತ್ತು ಹೀಗೆ ಕಣ್ಣಿಗೆ ಕಾಣುವ ಕಣ್ಣಿಗೆ ಕಾಣದಿರುವ ಅನೇಕ ಜೀವವೈವಿಧ್ಯಗಳು ನಮ್ಮ ಪ್ರಕೃತಿಯಲ್ಲಿವೆ. ಈ ಎಲ್ಲವುಗಳಂತೆ ಮನುಷ್ಯನು ಕೂಡ ಈ ಪರಿಸರದ ಭಾಗ. ಅಗಾಧವಾದ ಪ್ರಕೃತಿ ಮತ್ತು ಅನಂತವಾದ ಕಾಲಗಳ ಯಾವುದೋ ನಿರ್ದಿಷ್ಟ ಕ್ಷಣದಲ್ಲಿ ನಿಂತಿರುವ ಮನುಷ್ಯನು ಪ್ರಕೃತಿಯೊಂದಿಗೆ ನಾನಾ ನೆಲೆಗಳ ಸಂಬಂಧವನ್ನು ಹೊಂದಿದ್ದಾನೆ. ನಿಸರ್ಗದ ಚೆಲುವನ್ನು ಆರಾಧಿಸುವ, ಅದನ್ನು ದೈವವೆಂದು ಪೂಜಿಸುವ ಅದರ ಮೇಲೆ ಒಡೆತನ ಸ್ಥಾಪಿಸುವ, ದುರಾಶೆಯಿಂದ ಅದನ್ನು ನಾಶ ಪಡಿಸುವ ಸಮತೋಲನವನ್ನು ಕೆಡಿಸುವ ಅಷ್ಟೇ ಅಲ್ಲ ಅದನ್ನು ಕಾಯ್ದುಕೊಳ್ಳುವ ಬಹುಮುಖೀ ಆಯಾಮಗಳಿವೆ. ಪ್ರಕೃತಿಯೊಂದಿಗಿನ ಮಾನವ ಕೋಟಿಯ ಸಂಬಂಧ ಹೇಗಿರುತ್ತದೆಂಬುದರ ಮೇಲೆ ಇಂದಿನ ಉಳಿಯುವಿಕೆ ಮತ್ತು ನಾಳಿನ ಬೆಳೆಯುವಿಕೆಗಳು ನಿಂತಿವೆ. ಆದರೆ ನಾಗರೀಕತೆಗಳು ಬೆಳೆದಂತೆ ಮನುಷ್ಯ ಮತ್ತು ನಿಸರ್ಗದ ನಡುವೆ ಇದ್ದ ಹೊಕ್ಕುಳ ಬಳ್ಳಿಯ ಸಂಬಂಧ ಬದಲಾಗುತ್ತಾ ಬಂದಿದೆ. ಜೀವವುಳ್ಳ ಲೋಕವಾಗಿ ಕಾಣುತ್ತಿದ್ದ ಭೂಮಿ, ಪದಾರ್ಥವಾಗಿ, ಖನಿಜವಾಗಿ, ಸಂಪತ್ತಿನ ಮೂಲ ಎಂದು ವ್ಯವಹರಿಸಲು ಶುರವಾದ ನಂತರ ಭೂಮಿಯೊಡನೆ ಇದ್ದ ತಾಯಿ, ದೇವರು ಎನ್ನುವ ಭಾವನಾತ್ಮಕ

ಸಂಬಂಧಗಳು ಬದಲಾಗಿವೆ. ಈ ಧೋರಣೆಯಿಂದ ನಿಸರ್ಗ ಸಹಜವಾದ ಜೀವನ ಕ್ರಮಗಳಿಂದ ಮನುಷ್ಯ ಲೋಕ ದೂರವಾಗುತ್ತಿದೆ. ಇದರ ಪರಿಣಾಮವಾಗಿ ಸುತ್ತಲ ಜೀವ ಜಾಲವು ಅತಿಕ್ರಮಣಕ್ಕೆ ಒಳಗಾಗಿದೆ. ಬೇಟೆಯಿಂದ ಆರಂಭವಾದ ಅತಿಕ್ರಮಣ ಪ್ರಕ್ರಿಯೆ, ಕಾಡನ್ನು ಕಡಿದು ವ್ಯವಸಾಯದ ಭೂಮಿಯನ್ನಾಗಿ ವಿಸ್ತರಿಸುವ, ಹರಿವ ನದಿಗಳನ್ನು ತಡೆದು ಅಣೆಕಟ್ಟುಗಳನ್ನು ಕಟ್ಟುವ, ಸಮುದ್ರಗಳನ್ನು, ನೀಲಾಕಾಶವನ್ನು ಯುದ್ಧಗಳ ಪ್ರಯೋಗಾಲಯಗಳಾಗಿ ಬಳಿಸಿಕೊಳ್ಳುವವರೆಗೆ ವಿಸ್ತಾರಗೊಂಡಿವೆ. ವಿಜ್ಞಾನ ಪ್ರಯೋಗಗಳ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯ ಮೇಲೆ ನಡೆಸುತ್ತಿರುವ ಅನೇಕ ಪ್ರಯೋಗಗಳ ಪರಿಣಾಮವಾಗಿ ಈಗಾಗಲೇ ಹಲವು ಜೀವ ಸಂಕುಲಗಳು ನಾಶವಾಗಿವೆ. ಕೆಲವು ನಾಶದ ಅಂಚಿನಲ್ಲಿವೆ. ಆದರೆ ಈ ಬೆಳವಣಿಗೆಗಳನ್ನು ಬಹು ದೊಡ್ಡ ಸಾಧನೆಗಳೆಂದು ಕೊಂಡಾಡುತ್ತಿರುವವರು ಇದ್ದಾರೆ. ಮನುಷ್ಯ ಪ್ರಕೃತಿಯನ್ನು ಸ್ವಾಧೀನಪಡಿಸಿಕೊಳ್ಳಲು ನಿರಂತರ ಪೈಪೋಟಿಗೆ ಬಿದ್ದಿರುವುದು ಭೂತದಂತೆ ವರ್ತಮಾನದ ವಿದ್ಯಮಾನವೂ ಆಗಿದೆ.

ತನ್ನ ಮತ್ತು ಪರಿಸರದ ಸಂಬಂಧವನ್ನು ಗುರ್ತಿಸಿಕೊಳ್ಳುವಾಗ್ಯೆ ಎರಡು ರೀತಿಯ ಸಂಬಂಧಗಳನ್ನು ವ್ಯಕ್ತಿ ಕಂಡುಕೊಳ್ಳುತ್ತಾನೆ. ಒಂದು ನೈಸರ್ಗಿಕ ಪರಿಸರದೊಡನೆಯ ಸಂಬಂಧ ಎರಡು ಮಾನವ ನಿರ್ಮಿತ ಸಮಾಜದ ಪರಿಸರದೊಡನೆಯ ಸಂಬಂಧ ಇವುಗಳಲ್ಲಿ ನಿಸರ್ಗದೊಡನೆಯ ಸಂಬಂಧವು ವ್ಯಕ್ತಿ ವಿಶಿಷ್ಟತೆಗೆ ಅನುಗುಣವಾಗಿ ಭಾವನಾತ್ಮಕವಾಗಿ ವೈಚಾರಿಕವಾಗಿ ಅಥವಾ ತಾತ್ವಿಕವಾಗಿ ಕಾಣಲ್ಪಡುತ್ತಿರುತ್ತದೆ. ಸಮಾಜದೊಡನೆಯ ಮನುಷ್ಯನ ಸಂಬಂಧವೂ ನಿಸರ್ಗದೊಡನೆಯ ಸಂಬಂಧದಂತೆಯೇ ಇದ್ದರೂ ಇದರಲ್ಲಿ ಮಾನವೀಯ ಸಂಬಂಧಗಳು ಮುಖ್ಯವಾಗುತ್ತದೆ.

ಈ ಎರಡೂ ಸಂದರ್ಭಗಳಲ್ಲಿ ತನ್ನಿಂದ ಹೊರಗಿನ ಜಗತ್ತಿನ ಸಂಪರ್ಕವನ್ನು ವ್ಯಕ್ತಿ ಹೇಗೆ ಸಾಧಿಸುತ್ತಿದ್ದಾನೆಂಬುದು ಮಹತ್ವದ ಸಂಗತಿಯಾಗಿರುತ್ತದೆ. ಮತ್ತು ಈ ಹಂತದಲ್ಲಿ ಪರಿಸರ ಮತ್ತು ಮನುಷ್ಯನ ನಡುವಿನ ಸಂಬಂಧ ಮುಖ್ಯವಾಗುತ್ತವೆ. ಪರಿಸರ ಮನುಷ್ಯನನ್ನು ರೂಪಿಸುತ್ತಿದೆಯೋ, ಮನುಷ್ಯನೇ ಪರಿಸರವನ್ನು ತನ್ನ ಅಪೇಕ್ಷೆಗೆ ತಕ್ಕಂತೆ ಬದಲಾಯಿಸುತ್ತಿರುತ್ತಾನೋ ಎಂಬುದು ಸರಳವಾಗಿ ನಿರ್ಧಾರವಾಗುವಂತಹ ಅಂಶವಲ್ಲ. ಆದರೆ ಈ ಎರಡರ ಕರ್ಷಣದಲ್ಲಿ ಒಮ್ಮೆ ಪರಿಸರದ ಕೈ ಮೇಲಾದರೆ ಇನ್ನೊಮ್ಮೆ ಮನುಷ್ಯನ ಕೈ ಮೇಲಾಗಬಹುದು, ಆದರೆ ಈ ಎರಡೂ ಮೇಲಾಟಗಳು ತಾತ್ಕಾಲಿಕವೇ, ಮನುಷ್ಯನ ಪ್ರಜ್ಞೆ ಮತ್ತು ಪರಿಸರದ ದ್ವಂದ್ವದಲ್ಲಿ ನಡೆಯುವ ಬದುಕು ಮಾತ್ರ ಮುಖ್ಯವಾಗುತ್ತದೆ.

ಇಂತಹ ಬದುಕು ಕಾಲಕಾಲಕ್ಕೆ ತನ್ನ ಸುತ್ತಲಿನ ಪರಿಸರಕ್ಕೆ ಸ್ಪಂದಿಸುವಾಗ್ಗೆ ರೂಡಿಸಿಕೊಳ್ಳುತ್ತಾ ಸಾಗುವ ತಾತ್ವಿಕತೆಗಳು ಅದು ಭಾವನಾತ್ಮಕವಾಗಿರಲಿ, ವೈಚಾರಿಕವಾಗಿರಲಿ ಒಂದು ಸಮಾಜದ ಬದುಕನ್ನು ಕಟ್ಟುತ್ತಲೋ, ಮುರಿಯುತ್ತಲೋ ಅಥವಾ ಮುರಿಯುತ್ತಿರುವಂತೆಯೇ ಕಟ್ಟುತ್ತಲೋ ಸಾಗುತ್ತಿರುತ್ತವೆ. ಮುರಿಯುವ ಮತ್ತು ಕಟ್ಟುವ ಪ್ರಕ್ರಿಯೆಗಳು ಒಂದೇ ನಾಣ್ಯದ ಎರಡು ಮುಖಗಳಂತೆಯೇ ಇದ್ದರೂ ಸದ್ಯದ ವರ್ತಮಾನವನ್ನು ಯಾವ ದಿಕ್ಕಿನಡೆಗೆ ಈ ಸಂಬಂಧಗಳು ಚಲಿಸುವಂತೆ ಮಾಡುತ್ತವೆ ಎನ್ನುವುದು ಸಂಸ್ಕೃತಿಯ ಚಿಂತನೆಯ ಸಂದರ್ಭದಲ್ಲಿ ಮುಖ್ಯವಾಗುತ್ತದೆ.

ತೇಜಸ್ವಿಯವರ ಪರಿಸರದ ಕತೆಗಳು ಕೃತಿಯಲ್ಲಿ ಹಾವುಗೊಲ್ಲರ ಎಂಗ್ಟ ಸಾರ್ವಜನಿಕ ಪ್ರದರ್ಶನದ ಸಮಯದಲ್ಲಿ ದಾಸರ ಹಾವು ಎಂಗ್ಟನ ಮೈ ಮೇಲೆ ಸುತ್ತಿಕೊಂಡಾಗ ಅದರ ಬಿಗಿ ಮುಷ್ಟಿಯಿಂದ ಪಾರಾಗಲು ಚೂರಿಯಿಂದ ಇರಿಯುತ್ತಾನೆ. ಇದನ್ನು ಸಂಕೇತವಾಗಿ ನೋಡಿದರೆ ಪರಿಸರವನ್ನು ವ್ಯಕ್ತಿ ಹೇಗೆ ಭಾವಿಸುತ್ತಿದ್ದಾನೆ. ಎನ್ನುವುದಕ್ಕೆ ಹೋಲಿಸಬಹುದು. ಸಾಮಾಜಿಕ ಪರಿಸರ ಮತ್ತು ವ್ಯಕ್ತಿ ಪ್ರಜ್ಞೆಯ ಸಂಘರ್ಷದಲ್ಲಿ ಪರಿಸರವು ದಾಸರ ಹಾವಿನಂತೆ ಮೆಲ್ಲಗೆ ಮೈಮೇಲೆ ಹರಿದಾಡುತ್ತಲೇ ಅವನನ್ನು ಉಸಿರು ಕಟ್ಟಿಸಿಬಿಡುವುದನ್ನು ವ್ಯಕ್ತಿ ಪ್ರಜ್ಞೆ ಅರ್ಥೈಸಿಕೊಂಡು ಆ ಪರಿಸರವನ್ನು ಬಿಟ್ಟು ವ್ಯಕ್ತಿನಿಷ್ಠ ನೆಲೆಯಲ್ಲಿ ತನ್ನದೇ ಬದುಕನ್ನು ಕಂಡುಕೊಳ್ಳುವ ಹೊಸ ಧೋರಣೆಯೊಂದು ರೂಪಿತವಾಗುತ್ತಿರುವುದು ಕಾಣಿಸುತ್ತದೆ.

ಪರಿಸರದ ಉಕ್ಕಿನ ಹಿಡಿತ ಕಣ್ಣಿಗೆ ಕಾಣಿಸದಂತೆಯೆ ಬಿಗಿಯುವ ಸಂದರ್ಭದಲ್ಲಿ ನುಣುಚಿಕೊಳ್ಳುವ ಮನುಷ್ಯ ಪ್ರಜ್ಞೆ ಸೃಜನಾತ್ಮಕವಾದುದು. ತೇಜಸ್ವಿ ಈ ಸವಾಲನ್ನು ಎದುರಿಸುವ ಕ್ರಮ ಬಹಳ ಭಿನ್ನ ಸ್ವರೂಪದಿಂದ ಕೂಡಿರುವಂತದ್ದು ಹಾಗೂ ಅವರ ವೈಶಿಷ್ಟತೆಗೆ ಗರಿ ಮೂಡಿಸುವಂತದ್ದು.

ಸಾಮಾಜಿಕ ಪರಿಸರದ ಸವಾಲನ್ನು ತೇಜಸ್ವಿ "ಹುಲಿಯೂರಿನ ಸರಹದ್ದು" ಕತಾಸಂಕಲನದಲ್ಲಿ ಜಾತೀಯತೆಗಾಗಿ, ಸಾಮಾಜಿಕ ಕಟ್ಟುಪಾಡುಗಳಾಗಿ ಕಂಡುಕೊಳ್ಳುತ್ತಾರೆ. ಆವೇಶದ, ಆಕ್ರೋಶದ ಸೋಮು ಜಾತೀಯತೆಯನ್ನು, ಕಟ್ಟುಪಾಡುಗಳನ್ನು ಮೀರುವುದರಲ್ಲಿ ಪ್ರತಿಭಟನೆಯ ಸ್ವರೂಪ ಕಾಣುತ್ತಾನೆ. ನಂತರದ ಹಂತದಲ್ಲಿ ತೇಜಸ್ವಿ ಕಣ್ಣಿಗೆ ಕಾಣಿಸುವ ಕಾಣಿಸದ ಸಮಾಜದ ವಿಧಿನಿಷೇಧಗಳ ನೆಲೆಯಲ್ಲಿ ಮನುಷ್ಯ ಪ್ರಜ್ಞೆಯ ಮೇಲೆ ಸಮಾಜದ ಹಿಡಿತವನ್ನು ಕಂಡುಕೊಳ್ಳುತ್ತಾರೆ. ಇಲ್ಲಿ ಜಾತಿಯ ನೀತಿ ನಿಯಮಗಳ ಕಟ್ಟು ಪಾಡುಗಳಿಗಿಂತ ಸೂಕ್ಷ್ಮವಾದ ಸ್ತರದಲ್ಲಿ ಅದರ ಇರುವಿಕೆಯನ್ನು ಗುರುತಿಸುತ್ತಾರೆ.

ಅವನತಿ, ಅಬಚೂರಿನ ಪೋಸ್ಟಾಫೀಸು, ಕುಬಿ ಮತ್ತು ಇಯಾಲ ಇಂತಹ ಕತೆಗಳು ಮನುಷ್ಯನ ಪ್ರಜ್ಞೆಯ ಮೇಲೆ ಹಾಕುತ್ತಿರುವ ಒತ್ತಡವನ್ನು ಹೇಳುತ್ತವೆ. ಹಾಗೂ ಇಲ್ಲಿ ಪರಿಸರವನ್ನು ಅರ್ಥೈಸಿಕೊಳ್ಳುವ ದೃಷ್ಟಿ ನೇತ್ಯಾತ್ಮಕವಾಗಿದೆ. ಸಾಮಾಜಿಕ ಪರಿಸರವನ್ನಾಗಲಿ ನೈಸರ್ಗಿಕ ಪರಿಸರವನ್ನಾಗಲಿ ಅರ್ಥೈಸಿಕೊಳ್ಳುತ್ತೇವೆ ಎನ್ನುವುದು ಒಂದು ಭ್ರಮೆ, ಇವೆರಡರ ನಡುವಿನ ಹೋರಾಟ ನಿರರ್ಥಕ, ಇದರಲ್ಲಿನ ಗೆಲವು ಅಂತಿಮವಾಗಿ ಪರಿಸರದ್ದೇ ಎನ್ನುವ ಒಳನೋಟ ಕಾಣಿಸುತ್ತದೆ. ತನ್ನ ಅಪೇಕ್ಷೆಗೆ ತಕ್ಕಂತೆ ಬಗ್ಗಿಸಿಕೊಳ್ಳುವ ಸಾಮಾಜಿಕ ಪರಿಸರ ಎಂದು ತನ್ನ ನಿಗೂಡತೆಯನ್ನು ಬಿಟ್ಟುಕೊಡದ ಮನುಷ್ಯನನ್ನು ಒಳಗೊಂಡಂತೆ ಇರುವ ನಿಸರ್ಗ ಇವೆರಡೂ ಮನುಷ್ಯ ಚೈತನ್ಯಕ್ಕೆ ನಿರಂತರವಾಗಿ ಸವಾಲನ್ನು ಒಡ್ಡುತ್ತ ಸವಾಲಿನ ಎದುಕು ಸ್ಪಷ್ಟ ಉತ್ತರ ದೊರಕಿಸಿಕೊಳ್ಳಲಾಗದ ಮನುಷ್ಯನ ನಿರಾಶಾದಾಯಕ ಸ್ಥಿತಿಯನ್ನು ಈ ಕೃತಿಗಳಲ್ಲಿ ಒಡಮೂಡಿಸಲಾಗಿದೆ.

ತೇಜಸ್ವಿಯವರ ಬರವಣಿಗೆಯ ಹಾದಿಯಲ್ಲಿ ಪ್ರಾರಂಭದಲ್ಲಿ ಪರಿಸರದ ಗೆಲವು ಕಂಡುಬಂದರೂ ಕ್ರಮೇಣ ಪರಿಸರವನ್ನು ತನ್ನ ಪ್ರಜ್ಞೆಯ ಸಹಾಯದಿಂದ ಗೆಲ್ಲುವುದರ ಕಡೆಗಿರುವ ಮನುಷ್ಯನ ಚೈತನ್ಯ ಕಾಣಿಸುತ್ತದೆ. ಇಲ್ಲಿ ಗೆಲುವು ಪರಿಸರದ ಮೇಲಿನ ಆಕ್ರಮಣವಲ್ಲ, ಬದಲಿಗೆ ತನ್ನ ಆಸೆಗಳನ್ನು, ಆಕಾಂಕ್ಷೆಗಳನ್ನು ಅತಿಯಾಗಿಸಿಕೊಂಡು ದುರಾಸೆಯ ಮಟ್ಟಕ್ಕೆ ಬೆಳೆಯಲು ಬಿಡದೆ, ಕುತೂಹಲವನ್ನು ಪರಿಸರದ ಪ್ರೀತಿಗೆ ಮಾತ್ರ ಸೀಮಿತಗೊಳಿಸಿಕೊಳ್ಳುವ ಅದರಲ್ಲಿಯೇ ತನ್ನ ಸಂತೋಷ, ತೃಪ್ತಿಕಂಡುಕೊಳ್ಳುವ ಬೆಳವಣಿಗೆಯತ್ತ ಸಾಗುತ್ತದೆ.

"ಪರಿಸರದ ಕತೆಗಳಲ್ಲಿ ಸಸ್ಯ ಮತ್ತು ಪ್ರಾಣಿ ಪರಿಸರದ ಅಗಾಧಗೂಢತೆ ಹಾಗೂ ಗಹನತೆಗಳ ಕಡೆಗೆ ಆಸಕ್ತಿ ಇರುವಂತೆ ಮಾನವ ಪರಿಸರದ ಕ್ಷುದ್ರತೆಯನ್ನು ವಿಸಂಗತಿಯನ್ನು ಸಂವೇದನಾಶೂನ್ಯತೆಯನ್ನು ಚಿತ್ರಿಸುವ ಬಯಕೆ ಕೂಡಾ ಈ ಪ್ರಸಂಗಗಳಿಗಿವೆ"[7] ಆದರೂ ಅತ್ಯಂತ ಕ್ಷುದ್ರವೆನಿಸಿಕೊಳ್ಳುವುದರಲ್ಲಿಯೂ ಇರುವ ವಿಶೇಷತೆಯನ್ನು ಗುರುತಿಸಿಕೊಳ್ಳುವ ಮನೋಧರ್ಮ ಬೆಳೆಸಿಕೊಳ್ಳುವುದು ಮುಖ್ಯವೆನಿಸಿಕೊಳ್ಳುತ್ತದೆ. ಹೀಗೆ ತೇಜಸ್ವಿಯವರು ಪರಿಸರವನ್ನು ನೋಡುವ ಕ್ರಮವನ್ನು ಗುರುತಿಸಬಹುದು.

ಅಡಿಟಿಪ್ಪಣಿ

1. ಕೆ.ವಿ. ನಾರಾಯಣ, ಸಾಹಿತ್ಯ ವಾರ್ಷಿಕ, 1980, ಪು. ಸಂ210, ಇದರ ಉಲ್ಲೇಖ ಎಚ್.ಶಶಿಕಲಾ, ಏಕ – ಅನೇಕ, ಪು. ಸಂ. 294.

ಅಧ್ಯಾಯ- 3

ತೇಜಸ್ವಿಯವರ ಕತೆಗಳಲ್ಲಿ ಪ್ರಕೃತಿ:

ತೇಜಸ್ವಿಯವರ ಬಹುತೇಕ ಬರವಣಿಗೆಗಳು ಪ್ರಕೃತಿ ಮೂಲದ ಬರವಣಿಗೆಗಳೇ ಆಗಿವೆ. ತೇಜಸ್ವಿಯವರು ಪ್ರಕೃತಿಯನ್ನು ತಮ್ಮ ಬರವಣಿಗೆಗೆ ಭಿತ್ತಿಯಾಗಿ ಬಳಸಿಕೊಂಡಿದ್ದಿದೆ. ಅಷ್ಟರಮಟ್ಟಿಗೆ ಪ್ರಕೃತಿಯು ತೇಜಸ್ವಿಯವರನ್ನು ಆವರಿಸಿಕೊಂಡಿರುವ ಮೂಲಸಂಗತಿ. ತೇಜಸ್ವಿಯವರ ಪ್ರಕೃತಿಯ ಮೇಲಿನ ಪ್ರೀತಿಗೆ ಅವರು ಮೈಸೂರಿನಿಂದ ಮಲೆನಾಡಿಗೆ ಹೋಗಿ ನೆಲೆಸಿದ್ದೇ ಕಾರಣ ಎಂದರೆ ಅದು ಸರಳ ಮಾತಷ್ಟೇ ಆಗುತ್ತದೆ.

ತೇಜಸ್ವಿ ಪ್ರಕೃತಿಯ ಅನಂತ ಮುಖಗಳನ್ನು ಕತೆ ಮತ್ತು ಕಾದಂಬರಿಗಳಲ್ಲಿ ಸೆರೆಹಿಡಿದದ್ದಾರೆ. ಪ್ರಕೃತಿಯ ಸೊಬಗನ್ನು ಸೂಕ್ಷ್ಮವಾಗಿ ಗಮನಿಸುವ ಹಾಗೂ ಕ್ಷಣ ಕ್ಷಣಕ್ಕೂ ಬದಲಾಗುವ ಸನ್ನಿವೇಶಗಳನ್ನು ತಮ್ಮದೇ ಶೈಲಿಯಲ್ಲಿ ಓದುಗರಿಗೆ ತಲುಪಿಸುವ ತೇಜಸ್ವಿಯವರ ಕಲೆಗಾರಿಕೆ ಗಮನಾರ್ಹ. ಇವರು ಪ್ರಸಂಗ, ಸನ್ನಿವೇಶ, ವ್ಯಕ್ತಿ ಚಿತ್ರಗಳನ್ನು ಉಪಯೋಗಿಸಿಕೊಂಡು ಅವುಗಳ ಮೂಲಕ ಕತೆಯನ್ನು ಹೇಳುತ್ತಾ ಹೋಗುತ್ತಾರೆ. ಈ ಕತೆಗಳಲ್ಲಿ ಗಿಡ ಬೇರೆ ಅಲ್ಲ ಪ್ರಾಣಿ ಬೇರೆ ಅಲ್ಲ ಅವರೆಲ್ಲರೂ ಒಂದೇ ಕತೆಯ ಸನ್ನಿವೇಶ, ಅಷ್ಟೇ ಏಕೆ ಜೀವನದ ಒಂದು ಸನ್ನಿವೇಶದ ಅಭಿನ್ನ ಭಾಗಗಳಾಗಿದ್ದಾರೆ ಇವರನ್ನು ಬಿಟ್ಟು ಅವರಿಲ್ಲವೆಂಬಂತೆ. ಪ್ರಕೃತಿಯ ಬಾಹುಳ್ಯವನ್ನು ಬಹಳ ಕುತೂಹಲದಿಂದ ಅರಿಯುವ ಅದರ ಆಳ ಅಗಲಗಳನ್ನು ತಿಳಿಯುವ ಕುತೂಹಲ ಅವರಲ್ಲಿರುವುದನ್ನು ಗಮನಿಸಿಬಹುದು.

ತೇಜಸ್ವಿಯವರ ಪರಿಸರದ ಕತೆಗಳು ಸಂಕಲನವು ಪರಿಸರವನ್ನು ಕುರಿತು ತೇಜಸ್ವಿಯವರಲ್ಲಿದ್ದ ತುಡಿತವನ್ನು ಓದುಗರಿಗೆ ಮನದಟ್ಟು ಮಾಡುತ್ತದೆ. ಪರಿಸರದ ಕುರಿತಾಗಿ ಯೋಚಿಸುವವರು ಬಹಳ ಮಂದಿ ಇದ್ದರೂ ಆ ಕುರಿತು ಬರೆದಿರುವವರು ಬಹಳ ಕಡಿಮೆ. ಇಂಥವರ ಸಾಲಿನಲ್ಲಿ ಬರುವ ತೇಜಸ್ವಿ ಪರಿಸರದ ಕೂಸಾಗಿ ಕಂಡ ಸತ್ಯಗಳನ್ನು ಚೈತನ್ಯ ಪೂರ್ಣವಾಗಿ ಹಿಡಿದಿಟ್ಟ ಸಾಹಸದ ಫಲವೇ ಪರಿಸರದ ಕತೆ. ಈ ಸಂಕಲನದ ಮೊಲದ ಕತೆ ಪರಿಸರದ ಕತೆ ತೇಜಸ್ವಿಯವರ ಮನೋಧರ್ಮದಲ್ಲದ ಪಲ್ಲಟಗಳ ಬಗ್ಗೆ ಕೆಲವು ಮಹತ್ವಪೂರ್ಣ ಸೂಚನೆಗಳನ್ನು ನೀಡುತ್ತದೆ. ಏಕೆಂದರೆ ಸ್ವತಃ ತೇಜಸ್ವಿಯವರೇ "ಸ್ವಸ್ಥ, ಸಭ್ಯ, ನಾಗರೀಕ, ವಿದ್ಯಾವಂತ ಸಮಾಜದ ನಿರೀಕ್ಷೆಗಳಿಗೆ ಹೊರತಾದ ಜೀವನದ ಶೈಲಿಯೊಂದನ್ನು ರೂಪಿಸಿಕೊಳ್ಳುತ್ತ ಹಲವರಿಂದ ದೂಷಣೆಗೆ ಒಳಗಾಗಿದ್ದರು.

"ನಾನು ತೋಟ ಮಾಡಲು ಆರಂಭಿಸಿದ ಮೊದಲ ವರ್ಷಗಲಲ್ಲಿ ಕೋವಿ ಹೆಗಲ ಮೇಲ ಹಾಕಿಕೊಂಡು ದಿನವಿಡೀ ಅದರೊಡನೆ ಕಾಡು ಅಲೆಯುವುದೇ ಕೆಲಸವಾಗಿತ್ತು. ಹೀಗೆ ಓದುವುದು, ಬರೆಯುವುದು ಎಲ್ಲದಕ್ಕೂ ತಿಲಾಂಜಲಿಕೊಟ್ಟು ನಿರ್ಜನ ಕಾಡುಗಳಲ್ಲಿ ಗೊತ್ತುಗುರಿಯಿಲ್ಲದೆ ಅಲೆಯುತ್ತಿಯುವ ನನ್ನನ್ನು ನೋಡಿ "ಇವನು ಸಂಪೂರ್ಣ ಹಾಳಾದ" ನೆಂದು ವ್ಯಸನ ಸೂಚಿಸಿದವರೂ ಅನೇಕರಿದ್ದಾರೆ." ಎಂತವರಿಗೆ ಎಂಥಾ ಮಗ" ಎಂದು ವಿಷಾದ ಪಟ್ಟವರೂ ಅನೇಕರಿದ್ದಾರೆ.

ತೇಜಸ್ವಿ ಜೀವಜಗತ್ತಿನ ವಿಸ್ಮಯ ಲೋಕ್ಕೆ ಪ್ರವೇಶ ಪಡೆದಾಗ ಅದಕ್ಕೆ ಮೊದಲ ಪ್ರೇರಣೆ, ಪ್ರೋತ್ಸಾಹ ಮತ್ತು ಶಿಕ್ಷಣ ಪಡೆದದ್ದು ತಮ್ಮ ತಂದೆಯವರಿಂದ ಎಂಬ ಮಾತನ್ನು ಪರಿಸರದ ಕತೆಯಲ್ಲಿ ನೆನಪಿಸಿಕೊಳ್ಳುತ್ತಾರೆ. ತೇಜಸ್ವಿ ತಮ್ಮ ಮನೆ ಕಿಟಕಿ ಬಳಿ ಗೂಡಿನಲ್ಲಿ ಮರಿಮಾಡಿದ ಪಿಕಳಾರ ಹಕ್ಕಿ, ಎಲೆಗಳನ್ನು ಹೊಲಿದು ಗೂಡು ಕಟ್ಟಿದ ಟುವ್ವಿಹಕ್ಕಿ, ನುಗ್ಗೆ ಮರಕ್ಕೆ ಪ್ರತಿ ವರ್ಷ ಹತ್ತಿಕೊಳ್ಳುತ್ತಿದ್ದ ಕಂಬಳಿ ಹುಳುಗಳ ದಂಡು, ತಾವು ಮೈಸವರಿ ಬಿಟ್ಟ ಅಳಿಲು ಮರಿಯನ್ನು ಹೆಂಚಿನ ಮೇಲಿಂದ ಅದರ ತಾಯಿ ಬಂದು ಕಚ್ಚಿ ಕೊಂದದ್ದು ಇವೆಲ್ಲ ನೆನಪುಗಳು, ತಲ್ಲಣಗಳು ಹಾಗೂ ರೋಮಾಂಚನಗಳು ಯಾವುದೇ ತರಗತಿಯ ಪಾಠಗಳು, ವಿಶ್ವವಿದ್ಯಾನಿಲಯದ ಪಠ್ಯಕ್ರಮಗಳು ನೀಡುತ್ತಿದ್ದ ವಿದ್ಯಾಭ್ಯಾಸಕ್ಕಿಂತ ತೀರ ಭೀನ್ನವಾಗಿದ್ದ ಅನುಭವ ಇದು ಎನ್ನುತ್ತಾ ತೇಜಸ್ವಿ ಹೀಗೆ ಬರೆಯುತ್ತಾರೆ.

"ಇವುಗಳೆಲ್ಲದರ ಬಗ್ಗೆ ಅವರು ಹೇಳುತ್ತಿದ್ದ ವ್ಯಾಖ್ಯಾನ, ವಿವರಣೆಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಇವರ ತಾರುಣ್ಯದ ಕಾಡಿನ ಮತ್ತು ಬೇಟೆಯ ರೋಮಾಂಚಕ ಅನುಭವಗಳನ್ನು ಕೇಳಿ ಪ್ರಭಾವಿತನಾದ ನಾನು ನಮ್ಮ ತಂದೆ ಏಕಾದರೂ ಮೈಸೂರಿಗೆ ಪಾಠ ಹೇಳಲು ಮಲೆನಾಡನ್ನು ತೊರೆದು ಬಂದರೋ ಎಂದು ವ್ಯಥೆಪಡುತ್ತಿದ್ದೆ".

ತೇಜಸ್ವಿಯವರು ತಾವು ಮೂಡಿಗೆರೆಯಲ್ಲಿ ಕಾಡು ತೆಗೆದುಕೊಂಡು ಕಾಫಿ ತೋಟ ಮಾಡಲು ನಿರ್ಧರಿಸಿದ್ದು ಅದರಿಂದ ಬರುವ ಲಾಭದ ಬಗೆಗಾಗಲಿ ಆದರ್ಶದ ಸಾಧನೆಗಾಗಲಿ ಅಥವಾ ವ್ಯವಸಾಯದ ಮೇಲಿನ ಪ್ರೀತಿಯಿಂದಾಗಿಯೂ ಇರದೆ ಯಾರ ಹಂಗು ಭಯ ಹಾಗೂ ಕಾಟವಿಲ್ಲದ ಕಾಡು ಮೇಡುಗಳನ್ನು ಅಲೆದು ಅಲ್ಲಿ ಸಿಗುವಂತಹ ಸುಖವನ್ನು ಆನಂದಿಸುವ

ಆಸ್ವಾದಿಸುವ, ಪ್ರಕೃತಿಯಲ್ಲಿನ ರೋಮಾಂಚನವನ್ನು ಹೊಂದುವ ಹಾಗೂ ಇವೆಲ್ಲಕ್ಕಿಂತ ಮುಖ್ಯವಾಗಿ ಪ್ರಕೃತಿಯಲ್ಲಿನ ರಹಸ್ಯ ನಿಗೂಢತೆಗಳನ್ನು ಅರಿಯುವ ಉದ್ದೇಶದಿಂದ, ಅವರು ಕಿವಿ ಮುದಿಯಾಗಿ ಸಾಯುವವರೆಗೂ ಕಾಡು ಮೇಡುಗಳನ್ನು ತಿರುಗಿದ್ದನ್ನು ನಾವು ಗುರುತಿಸಬಹುದು.

ಪರಿಸರದ ಕತೆಯಲ್ಲಿನ ಪರಿಸರದ ಪ್ರಜ್ಞೆ ಕೇವಲ ಅಂಕಿ ಅಂಶಗಳಿಗಷ್ಟೇ ಸೀಮಿತವಾಗಿಲ್ಲ. ಅದಕ್ಕೂ ಮಿಗಿಲಾದ ಪ್ರಕೃತಿಯೊಂದಿಗಿನ ಒಡನಾಟ, ಸೆಣಸಾಟ, ವಾದ-ಸಂವಾದ ಹೃದ್ ವೇದ್ಯವಾಗಿದೆ. ನಿತ್ಯ ಜೀವನದಲ್ಲಿ ಕಂಡ ಸಾಮಾನ್ಯ ವಿಷಯಗಳನ್ನೇ ಅಸಮಾನ್ಯವಾಗಿ ಚಿತ್ರಿಸಿ ಓದುಗರನ್ನು ಅಚ್ಚರಿಗೀಡುಮಾಡುವ ಕಲೆ ತೇಜಸ್ವಿಯವರಿಗೆ ಕರಗತವಾಗಿದೆ. ಎಂಬುದು ಈ ಕೃತಿಯ ಮೂಲಕ ಸ್ಪಷ್ಟವಾಗುತ್ತದೆ. ಸೂಕ್ಷ್ಮವಾಗಿ ಹೇಳುವುದಾದರೆ ತೇಜಸ್ವಿ ಕತೆಗಾರರಾಗಿ, ಕಾದಂಬರಿಕಾರರಾಗಿ ಬೆಳೆದು ಬಂದಿರುವ ಹಾದಿ ಈ ಕೃತಿಯಿಂದ ಸ್ಪಷ್ಟವಾಗುತ್ತದೆ. ಕರ್ವಾಲೋ ಕಾದಂಬರಿಗೂ, ಪರಿಸರದ ಕತೆಗೂ ಇರುವ ಸಾಧೃಶ್ಯ ಬೆರಗು ಹುಟ್ಟಿಸುವಂತಿದೆ. ಪರಿಸರದ ಕತೆಯನ್ನು ಕಥಾಸಂಕಲನವನ್ನಾಗಿ, ಅಷ್ಟೇ ಅಲ್ಲ ಸಡಿಲ ಬಂಧದ ಕಾದಂಬರಿಯಾಗಿ ಓದಿ ಆನಂದಿಸಬಹುದು. ತೇಜಸ್ವಿಯವರೇ ಹೇಳುವಂತೆ.

"ನಾನು ಕಾಡು ಕಂಡ ನಂತರದ ಎಷ್ಟೋ ಅನುಭವಗಳನ್ನು ಗೆಳೆಯರೊಡನೆ ಹಂಚುತ್ತಾ ಕ್ವಚ್ಚಿತ್ತಾಗಿ ಹೇಳಿದ್ದೇನೆ. ಆದರೆ ಅವುಗಳನ್ನೆಲ್ಲ ಬರೆಯಬೇಕೆಂಬುದು ಈವರೆಗೂ ನನಗೆ ಅನಿಸಿರಲಿಲ್ಲ. ಏಕೆಂದರೆ ಅವು ಯಾವುವು ಉಲ್ಲೇಖಾರ್ಹವಾದ ಅಸಾಧಾರಣ ಅನುಭವಗಳಾಗಿರಲಿಲ್ಲ. ಆದರೆ ಪರಿಸರದ ಬಗ್ಗೆ ಆಸ್ಥೆ, ಕುತೂಹಲಗಳು ಮೂಡಿದ ನಾನೊಬ್ಬ ಪರಿಸರವಾದಿಯಾಗಿ ರೂಪುಗೊಂಡ ಹಾದಿ ಇದು. ಪರಿಸರ ಸಂರಕ್ಷಣೆಯ ಬಗ್ಗೆ ವೈಜ್ಞಾನಿಕ ಪಾಠಗಳಷ್ಟೇ ಈ ನಡೆದು ಬಂದ ದಾರಿಯನ್ನು ತಿಳಿಯವುದು ಅಗತ್ಯವೆನಿಸುತ್ತದೆ. ನಾನು ಹೇಳಿರುವ ಈ ಚಿಕ್ಕ ಚಿಕ್ಕ ಘಟನಗಳಿಗೂ, ಪರಿಸರಕ್ಕೂ ಯಾವುದೇ ನೇರ ಸಂಬಂಧವನ್ನು ತೋರಿಸಲಾರೆ. ಆದರೆ ಇದು ನಾನು ನಡೆದ ದಾರಿ ಎಂದು ಮಾತ್ರ ಹೇಳಬಲ್ಲೆ"[3].

ತೇಜಸ್ವಿಯವರ ಕತೆಗಳಲ್ಲಿನ ಪ್ರಾಕೃತಿಕ ಅಂಶಗಳನ್ನು ಹಂತಹಂತವಾಗಿ ನೋಡುವ ಕ್ರಮ ಈ ನಿಬಂಧದಲ್ಲಿದೆ ಅದೆಂದರೆ:

ಅ. ಪ್ರಾಣಿ ಪ್ರಪಂಚ
ಆ. ಪಕ್ಷಿ ಪ್ರಪಂಚ
ಇ. ಕೀಟ ಪ್ರಪಂಚ
ಈ. ಜಲಚರ ಹಾಗೂ ಸರಿಸೃಪಗಳ ಪ್ರಪಂಚ
ಉ. ಕಾಡು, ಬೆಟ್ಟ, ಹೊಳೆ . . . . ಇತ್ಯಾದಿ.

ಅ. ಪ್ರಾಣಿ ಪ್ರಪಂಚ:

ತೇಜಸ್ವಿಯವರ ಕತೆಗಳಲ್ಲಿ ಬರುವ ಪ್ರಾಣಿಗಳ ಬಗೆಗೆ ಪರಿಚಯ ಪಡೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ತೇಜಸ್ವಿಯವರ ಆಪ್ತ ಸಾಕು ಪ್ರಾಣಿ ಕಿವಿಯ ಬಗೆಗೆ ಮೊದಲಿಗೆ ತಿಳಿದುಕೊಳ್ಳುವುದು ಅಗತ್ಯವೆಂಬುದು ನನ್ನ ಅನಿಸಿಕೆ.

ಕಿವಿ ಸ್ಪಾನಿಯಲ್ ಜಾತಿಯ ಅಸಾಧಾರಣ ಬುದ್ಧಿಯ ಶಿಕಾರಿ ನಾಯಿ, ಸ್ಪಾನಿಯಲ್ ಜಾತಿಯ ನಾಯಾದ ಕಾರಣ ಅದರ ಕಿವಿ ಸುಮಾರು ಅರ್ಧ ಅಡಿಗಿಂತ ಉದ್ದ ಇದ್ದು ತಲೆಯ ಪಕ್ಕದಲ್ಲಿ ವಿಸ್ತಾರವಾಗಿ ಇಳಿ ಬಿದ್ದಿದ್ದರಿಂದ ಅದಕ್ಕೆ ಕಿವಿ ಎಂಬ ಹೆಸರು ಬಂದಿತೆಂದು ತೇಜಸ್ವಿ ಹೇಳುತ್ತಾರೆ. ಕಿವಿ ತೇಜಸ್ವಿಯವರ ಮನೆಯ ಸದಸ್ಯರಲ್ಲಿ ಒಂದೆಂಬಂತೆ ಇತ್ತು. ತೇಜಸ್ವಿ ತೋಟ ಮಾಡಲು ಮೂಡಿಗೆರೆಗೆ ಬಂದು ನೆಲೆಸಿದ ಮೇಲೆ ತಮ್ಮ ಬಿಡುವಿನ ವೇಳೆಯಲ್ಲಿ ಕೋವಿಯನ್ನು ಹಿಡಿದು ದಿನವಿಡೀ ಕಿವಿಯೊಡನೆ ಕಾಡು ಅಲೆಯುತ್ತಿದ್ದರಿಂದ ಇದನ್ನು ಕಂಡಂತಹ ಹಲವಾರು ಮಂದಿ ಈ ನಾಯಿಯ ದೆಸೆಯಿಂದ ಇವನು ಸಂಪೂರ್ಣ ಹಾಳಾದನೆಂದು ವ್ಯಸನ ಪಟ್ಟಿದ್ದಿದೆ. ಈ ನಾಯಿಯ ದೆಸೆಯಿಂದಲೇ ಇವನು ಹಾಳದ ಎಂದು ಕಿವಿಯನ್ನು ದೂಷಿಸಿದವರೂ ಇದ್ದಾರೆ.

ಕಿವಿ ಮತ್ತು ತೇಜಸ್ವಿ ಸೇರಿ ಅನೇಕ ಪ್ರಾಣಿಗಳನ್ನು ಶಿಕಾರಿ ಮಾಡಿ ಸ್ವಾಹಾ ಮಾಡಿದ್ದೇವೆಂದು ತೇಜಸ್ವಿ ತಮ್ಮ ಪರಿಸರದ ಕತೆಯಲ್ಲಿ ತಿಳಿಸುತ್ತಾರೆ. ಕಿವಿ ಒಮ್ಮೆ ಬೊಗಳಲು ಶುರು ಮಾಡಿದರೆ ಅದಕ್ಕೆ ಏನೋ ಕಾರಣವಿರಲೇ ಬೇಕೆಂದು ಬಗೆದು ಅದನ್ನು ತೇಜಸ್ವಿ ಹಿಂಬಾಲಿಸುತ್ತಿದ್ದರು. ಸಾಧಾರಣವಾಗಿ ನಾಯಿಗಳು ನಮಗೆ ಎಚ್ಚರಿಕೆ ಕೊಡಲೋ ಅಥವಾ ನಮ್ಮ ಗಮನ ಸೆಳೆದು ಕರೆಯಲ್ಲೋ ಬೊಗಳುತ್ತವೆ ಎಂದೇ ಕಿವಿ ಬೊಗಳಿದಾಗಿ ತಾನು ನಿರ್ಲಕ್ಷಿಸದೆ ಅದನ್ನು ಹಿಂಬಾಲಿಸುತ್ತಿದ್ದುದಾಗಿ ತಿಳಿಸುತ್ತಾರೆ.

ಕಿವಿ ಒಮ್ಮೆ ಶಿಕಾರಿಯ ಬೆನ್ನತ್ತಿತೆಂದರೆ ಅದನ್ನು ಪಡೆಯದ ಹೊರತು ಅದು ಹಿಂತಿರುಗುತ್ತಿರಲಿಲ್ಲವೆಂಬುದು ಪರಿಸರದ ಕತೆಯಲ್ಲಿ ಬರುವ "ಮಾನಿಟರ್" ಹಾಗೂ ಕಿವಿಯೊಡನೆ ಒಂದು ದಿನ ಕತೆಯಲ್ಲಿ ಗಮನಿಸಬಹುದು.

ಒಮ್ಮೆ ತಮ್ಮ ಮನೆಯ ಹಿಂದಿದ್ದ ದಟ್ಟವಾದ ಕಾಡಿನಲ್ಲಿ, ಕಗ್ಗತ್ತಲ ರಾತ್ರಿಯಲ್ಲಿ ಕಿವಿ ಜೋರಾಗಿ ಬೊಗಳುತ್ತಿದ್ದುದನ್ನು ಗಮನಿಸಿದ ತೇಜಸ್ವಿ ಅದನ್ನು ಬಯ್ಯುತ್ತ ಅದು ಬೊಗಳುತ್ತಿದ್ದ ದಿಕ್ಕನ್ನು ಅನುಸರಿಸಿ ಹೋದಾಗ ಅಲ್ಲಿ ಅವರಿಗೆ ಎದುರಾದುದು ಕಿವಿಯು ಅಡ್ಡಗಟ್ಟಿ ನಿಂತಿರುವ ಉಡ ಅದನ್ನು ಹಿಡಿದು ತಂದು ತಮ್ಮ ಮನೆಯ ಬಳಿಯಿದ್ದ ಮರವೊಂದಕ್ಕೆ ಕಟ್ಟಿ ಹಾಕಿ ಅದರಿಂದ ನಾನಾ ಅವಾಂತರಗಳಿಗೆ ಗುರಿಯಾದ ಸಂಗತಿಯನ್ನು ಮಾನೀಟರ್ ಕತೆಯಲ್ಲಿ ತೇಜಸ್ವಿ ತಿಳಿಸುತ್ತಾರೆ.

ತೇಜಸ್ವಿಯವರಿಗೆ ಕಿವಿಯ ಮೇಲಿದ್ದಂತಹ ಆತ್ಮೀಯತೆ ಹಾಗೂ ಪ್ರೀತಿಯನ್ನು ಅವರ ಮಾತುಗಳಲ್ಲೇ ಹೀಗೆ ಹೇಳಬಹುದು.

"ಕಿವಿ ಎಷ್ಟಾದರೂ ಬೊಗಳಿಕೊಳ್ಳಲಿ ನಾನು ಮಾತ್ರ ಈ ಕಗ್ಗತ್ತಲ ರಾತ್ರಿಯಲ್ಲಿ ಕಾಡಿನೊಳಗೆ ಹೋಗುವುದಿಲ್ಲ ಎಂದು ತೀರ್ಮಾನಿಸಿ ಮನೆಯೊಳಗೆ ಬಂದೆ, ಕೆಲವು ನಿಮಿಷ ಕಳೆಯಿತ್ತು. ಕಿವಿ ಬೊಗಳುವುದು ಮುಂದುವರಿದೇ ಇತ್ತು. ಏನಾದರಾಗಲಿ ಎಂದು ಮನೆಯೊಳಗೆ ಬಂದರೂ ನನಗೆ ಸಮಾಧಾನದಿಂದ ಕೂರಲಾಗಲಿಲ್ಲ. ಏಕೆಂದರೆ ಕಾಡು ಪ್ರಾಣಿಗಳನ್ನು ಅಟ್ಟಿಸಿಕೊಂಡು ಒಮ್ಮೊಮ್ಮೆ ಬೇಟೆ ನಾಯಿಗಳು ಮೈಲುಗಟ್ಟಲೆ ದೂರ ಹೋಗಿ ಬಿಡುತ್ತವೆ. ಎಷ್ಟು ದೂರ ಎಂದರೆ ಹಿಂದಿರುಗಿ ಬರಲು ದಾರಿ ಗೊತ್ತಾಗದಷ್ಟು ದೂರ, ಕಿವಿ ಸಹ ಒಮ್ಮೆ ಕಾಡಿನಲ್ಲಿ ಮಂಗಗಳ ಗುಂಪೊಂದನ್ನು ಅಟ್ಟಿಸಿಕೊಂಡು ಕಳೆದೇ ಹೋದಷ್ಟು ದೂರ ಹೋಗಿತ್ತು. ಅವು ಬರ್ರೋ ಟರ್ರೋ ಎಂದು ಕೂಗುತ್ತಾ ಮರದಿಂದ ಮರಕ್ಕೆ ನೆಗೆಯುತ್ತಾ ಮುಂದೆ ಮುಂದೆ ಹೋದಂತೆ ಇದು ಕಾಡೊಳಗೆ ಬೊಗಳುತ್ತಾ ಅನೇಕ ಮೈಲುಗಳು ಹೋಗಿ ಅದನ್ನು ಹುಡುಕಿ ಕರೆತರಲು ನನಗೆ ಒಂದು ದಿನವೇ ಹಿಡಿದಿತ್ತು"[9].

ಕಿವಿಯೊಡನೆ ಒಂದು ದಿನ ಕತೆಯಲ್ಲಿ ತೇಜಸ್ವಿ ಅವರ ಸ್ನೇಹಿತ ಶ್ರೀರಾಮ ಇಬ್ಬರೂ ಶಿಖಾರಿಗೆ ಹೋಗಿ ಅಲ್ಲಿ ಹಂದಿಯನ್ನು ಬೇಟೆಯಾಡಿದರೂ ಅದು ಅವರ ಕೈವಶವಾಗದ ಕಾರಣ ಬೇಸರಿಸುತ್ತಾ ಹೆಜ್ಜೆ ಹಾಕುತ್ತಿದ್ದಾಗ ಕಿವಿ ಆ ಗಾಯಗೊಂಡ ಹಂದಿಯನ್ನು ಹಿಂಬಾಲಿಸಿ ಹಂದಿ ಸತ್ತು ಬಿದ್ದಿರುವ ಜಾಗವನ್ನು ಪತ್ತೆ ಹಚ್ಚಿ ಬೊಗಳಲಾರಂಬಿಸಿತು. ಅದರ ಶಬ್ದವನ್ನು ಹಿಂಬಾಲಿಸಿ ಬಂದು ನೋಡಿದರೆ ಅದು ಸತ್ತು ಬಿದ್ದದ್ದನ್ನು ಕಂಡು ಸಂತೋಷಗೊಂಡ ಹಾಗೂ ಅದನ್ನು ಶ್ರೀರಾಮು ತಮ್ಮ ಹೆಗಲ ಹೊತ್ತುಕೊಂಡು ಕಿವಿಯೊಡನೆ ಮಾಯವಾದರು.

ತೇಜಸ್ವಿಯವರು ತಮ್ಮ ನಾಯಿ 'ಕಿವಿಯೊಂದಿಗೆ ಇಟ್ಟುಕೊಂಡಿರುವ ಸಂಬಂಧಕ್ಕೂ ಬೈರ ಮತ್ತು ಮಾಸ್ತಿ ತಮ್ಮ ನಾಯಿ 'ರಾಮನೊಂದಿಗೆ ಇಟ್ಟುಕೊಂಡಿರುವ ಸಂಬಂಧಕ್ಕು ಇರುವ ವ್ಯತ್ಯಾಸ ಕುತೂಹಲಕಾರಿಯಾಗಿದೆ.

"ಬೈರನೂ ಮಾಸ್ತಿಯೂ ಅವರ ಶಿಖಾರಿ ನಾಯನ್ನು ನಡೆಸಿಕೊಳ್ಳುವ ರೀತಿ ನೋಡಿದರೆ ತುಂಬಾ ಕ್ರೂರಿಗಳೂ ನಿರ್ದಯಿಗಳೂ ಎಂದೆನಿಸುತ್ತಿತ್ತು. ಅವರೊಡನೆ ಅದೂ ಕಾಡು ತಿರುಗಿ ಶಿಕಾರಿಯಲ್ಲಿ ಸಹಾಯ ಮಾಡಿದರೂ ಅದರ ಬಗ್ಗೆ ಕೊಂಚವಾದರೂ ಕರುಣೆ, ಕೃತಜ್ಞತೆ ತೋರಿಸುವುದಿಲ್ಲವಲ್ಲ ಎಂದು ವ್ಯಸನವಾಗುತ್ತಿತ್ತು. ಆದರೆ ಈಗನ್ನಿಸುತ್ತೆ, ಅವರು ನಾಯಿಗೆ ಮಾನವೀಯ ವ್ಯಕ್ತಿತ್ವವನ್ನು ಆರೋಪಿಸುತ್ತಿರಲಿಲ್ಲ ಎಂದು. ನಾಯನ್ನು ನಾಯಿಯಂತೆಯೂ, ಮನುಷ್ಯರನ್ನು ಮನುಷ್ಯರಂತೆಯೂ, ಪ್ರಾಣಿಗಳನ್ನು ಪ್ರಾಣಿಗಳಂತೆಯೂ ನೋಡುತ್ತಿದ್ದರಷ್ಟೆ ನಾಯಿಗೆ ನಾವು ಮಾಡುವಂತೆ ಮಾನವೀಯ ವ್ಯಕ್ತಿತ್ವವನ್ನು ಆರೋಪಿಸಿ ನಮ್ಮಂತೆಯೇ ಅದು ಎಂದು ನೋಡುವುದರಿಂದ ಅದಕ್ಕೆ ಸಂತೋಷವಾಗಲೀ, ಪ್ರಯೋಜನವಾಗಲೀ ಉಂಟೇ? ಎಂದು ನನಗೆ ಅನುಮಾನ"[7].

ಆದರೆ ರಾಮ ಸತ್ತಾಗ ಬೈರನ ಪ್ರತಿಕ್ರಿಯೆಯ ಸಂಕೀರ್ಣತೆಯನ್ನು ಹಿಡಿಯುವಲ್ಲಿ ಲೇಖಕರ ಗ್ರಹಿಕೆಯ ಆಳಗಳೂ ಪರಿಚಯವಾಗುತ್ತವೆ. ಶಿಕಾರಿಗೆ ಇಟ್ಟಿದ್ದ ಮದ್ದಿನ ಉಂಡೆಗೆ ಬಾಯಿ ಹಾಕಿ ನಾಯಿಯ ಮೂತಿ ಛಿದ್ರ ಛಿದ್ರವಾದಾಗ ಬೈರ " ಥೂ ಇದ್ದದ್ದು ಒಂದು ಉಂಡೇನೂ ಹಾಳಾಯ್ತು ಎಂದು ನಾಯನ್ನೇ ಶಪಿಸುತ್ತಾನೆ. ಅದರ ಸಂಸ್ಕಾರದ ಬಗ್ಗೆ ಲೇಖಕರು ಪ್ರಶ್ನಿಸಿದಾಗ ಸತ್ತೋದ್ಮೇಲೆ ಅದ್ಕೇನು ಗೊತ್ತಾಗ್ತದೆ. ನಾಯೋ ನರಿನೋ ತಿನ್ಕೊತದೆ ನಡೀರಿ ಅನ್ನುತ್ತಾನೆ.

ಒಮ್ಮೆ ಕೆರೆಯ ದಡದಲ್ಲಿ ಕುಳಿತಿರುವಾಗ ದಡದಲ್ಲಿದ್ದ ಕಪ್ಪೆಯನ್ನು ಹಿಡಿಯಲು ಹೋಗಿ ಅವಾಂತರಕ್ಕೆ ಸಿಕ್ಕಿಕೊಂಡ ಕಿವಿಯ ಬಗೆಗೆ ತೇಜಸ್ವಿ ಹಾಸ್ಯಾಸ್ಪದವಾಗಿ ಬರೆಯುತ್ತಾರೆ.

ಮಾಯಾಮೃಗ ಕತೆಯಲ್ಲಿ ನಿರೂಪಕ ಮತ್ತು ಅವರ ಸ್ನೇಹಿತ ಇಬ್ಬರೂ ಕೂಡಿ ದೆವ್ವದ ಅನ್ವೇಷಣೆಗೆ ಸ್ಮಶಾನಕ್ಕೆ ಹೋಗುತ್ತಾರೆ. ಅಲ್ಲಿ ನಾಯಿ ಮರಿ ಮಾಯಾಮೃಗದಂತೆ ಇವರ ಬೆನ್ನು

ಹತ್ತಿ ಬರುತ್ತದೆ. ಓಡಿಸಿದರೂ ಮರಳಿ ಮರಳಿ ಬೆನ್ನು ಹತ್ತುವ ನಾಯಿ ದೆವ್ವವೇ ಆಗಿರಬಹುದೆಂದು ಭಾವಿಸಿದಾಗ, ನಿರೂಪಕ "ಅವೆಲ್ಲ ನನ್ನ ಕತೆಗಳಲ್ಲಿ ಕಣ್ರಿ ಸಿಂಬಲ್‌ಗಳ ಗೋಳು. ಇದು ಡೆತ್ತೂ ಅಲ್ಲ, ಸಾವೂ ಅಲ್ಲ, ದೆವ್ವವೂ ಅಲ್ಲ, ಕೇವಲ ನಾಯಿಮರಿ ಎಂದು ಹೇಳುತ್ತಾರೆ. ಬೆದರಿಸಿದರೂ ಬಿಡದಂತೆ ಬೆನ್ನು ಹತ್ತುವ ನಾಯಿಯ ಮರಿಯನ್ನು ಹಿಡಿದು ಒಂದು ಮನೆಯ ಕಾಂಪೌಂಡಿನಲ್ಲಿ ಹಾಕುತ್ತಾರೆ. ಅದು ಕುಂಯ್ ಗುಟ್ಟಿ ಒದರುವ ಸದ್ದು ಕಿರಿಕಿರಿಯಾಗಿ ಮನೆಯ ಮಾಲೀಕ ಅದನ್ನು ಗೇಟಿನಿಂದಾಚೆ ಓಡಿಸುತ್ತಾರೆ. ಈ ಕ್ರಮ ನಾಲ್ಕಾರು ಸಲ ಪುನರಾವೃತ್ತಿಗೊಂಡಾಗ ಹೊರ ಹಾಕಿದ ಪ್ರತಿ ಸಂದರ್ಭದಲ್ಲೂ ಗೇಟಿನೊಳಗೆ ನುಸುಳುವ ಈ ನಾಯಿ ದೆವ್ವ ಅಥವಾ ಮೋಹಿನಿಯೇ ಇರಬೇಕೆಂದು ಭಾವಿಸಿದ ಆ ಮನೆಯ ಮಾಲೀಕ ಹೆದರಿ ಸತ್ತೇ ಹೋಗುತ್ತಾನೆ. ಲೇಖಕರು ಮತ್ತು ಅವರ ಸಂಗಡಿಗನ ಬೆನ್ನು ಹತ್ತಿ ಬಂದು, ದಢೂತಿ ಕಾಯನೊಬ್ಬನ ಸಾವಿಗೆ ಕಾರಣವಾಗುವ ನಾಯಿ ಸಾವಿನ ಸಂಕೇತವೇ ಆಗಿ ಪರಿಣಮಿಸುತ್ತದೆ.

ಕೃಷ್ಣೇಗೌಡನ ಆನೆ ಕಥೆಯಲ್ಲಿ ಮೂಡಗೇರಿಯಲ್ಲಿ ಆಗುವ ಯಾವುದೇ ಅನಾಹುತಗಳಿಗೆ ಕೃಷ್ಣೇಗೌಡನ ಆನೆಯೇ ಕಾರಣವಾಗುತ್ತದೆ. ಕೃಷ್ಣೇಗೌಡನ ಆನೆ ಮೂಲತಃ ಘಟ್ಟದ ಕೆಳಗಿನ ಗೂಳೂರು ಮಠದ ಆನೆ. ಈಗ ಅದು ಕೃಷ್ಣೇಗೌಡನ ಜೀತದ ಆನೆ. ಅದು ಬೆಳಿದಿದ್ದೆಲ್ಲ ಊರಿನ ಮಧ್ಯೆ ಒಂದು ಸಾಕು ಪ್ರಾಣಿಯಂತೆ. ಆನೆಯಿಂದ ಆರ್ಥಿಕವಾಗಿ ಲಾಭ ಪಡೆದ ಕೃಷ್ಣೇಗೌಡ ಅದನ್ನು ತನ್ನ ಅನುಕೂಲಕ್ಕಾಗಿ ಸಮೃದ್ಧವಾಗಿ ಬೆಳೆಸಿದ. ಆದರೆ ಆನೆಯ ಕಿತಾಪತಿಗಳು ಊರಿನ ಜನಕ್ಕೆ ಬೇಸರ ಹುಟ್ಟಿಸಹತ್ತಿದವು. ಪ್ರತಿ ಬೇಸಿಗೆಯಲ್ಲೂ ಈ ಆನೆಯದೊಂದು ಹೊಸ ರಾದ್ಧಾಂತ ನಡೆಯುತ್ತಿತ್ತು.

ಮೂಡಿಗೆರೆಯ ಸಾಮಾಜಿಕ ಜೀವನದ ಎಲ್ಲ ಗೋಜಲುಗಳೊಂದಿಗೆ ಈ ಆನೆಯೂ ಸೇರಿ ಪರಿಸ್ಥಿತಿ ಇನ್ನಷ್ಟು ವಿಚಿತ್ರವಾಗುತ್ತದೆ. ಆನೆ ಅವನ ಊರಿನಲ್ಲಿ ಹಲವಾರು ಅವಾಂತರಗಳಿಗೆ ಕಾರಣವಾಗುತ್ತದೆ. ಮೇಲಾಯುಧನೂ ಸೇರಿದಂತೆ ಅನೇಕರು ಅದರ ಪ್ರತಾಪಗಳಿಂದಾಗಿ ಜೀವ ಕಳೆದುಕೊಳ್ಳುತ್ತಾರೆ. ಹಾಗೂ ಆಧುನಿಕತೆಯ ಪರಿಣಾಮವಾಗಿ ಊರಿನಲ್ಲಿ ಹುಟ್ಟಿಕೊಂಡ ಎಲೆಕ್ಟ್ರಿಕ್ ಸಿಟಿ, ಟಲಿಪೋನ್, ವನ್ಯ ಉತ್ಪಾದನೆಗಳ ಕಳ್ಳದಂದೆ ಇಂತಹ ಉದ್ಯೋಗಗಳಲ್ಲಿ ತೊಡಗಿದವರಲ್ಲಿ ಸಂಘರ್ಷ ಹುಟ್ಟಿಕೊಳ್ಳುತ್ತದೆ. "ಆನೆ ನಿಧಾನವಾಗಿ ಅಪರಾಧಿಯಾಗುತ್ತಾ ಹೋಯ್ತು". ಇದರಿಂದ ಸಾಂದರ್ಭಿಕವಾಗಿ ಕೆಲವರಿಗೆ ಅನುಕೂಲವಾಗುತ್ತದೆ. ಕಾಣೆಯಾದ ಆನೆಯನ್ನು ಶೂಟ್

ಮಾಡಲೆಂದು ಹೋದ ನಾಗರಾಜು ಹೇಳ ಹೆಸರಿಲ್ಲದವನಾಗುತ್ತಾನೆ. ಇಷ್ಟೆಲ್ಲಾ ಗೊಂದಲಕ್ಕೆ ಕಾರಣವಾದ ಆನೆ ಹಳೆಕೊಪ್ಪದ ಸುಬ್ಬಣ್ಣನ ಕೊಟ್ಟಿಗೆ ಕೆಡವಿದ್ದು ಎತ್ತ ಹೋಯಿತು? ಎಲ್ಲಿ ಅಡಗಿತು? ಯಾರಿಗೂ ತಿಳಿಯದಂತಹ ಸ್ಥಿತಿ. ನಾಗರಾಜ ಕೂಡ ಸತ್ತಿದ್ದಾನೋ ಬದುಕಿದ್ದಾನೋ ಎಂಬುದು ಜನರ ಕಳವಳವಾದರೆ ಆನೆ ಮರಳಿ ಬಂದರೆ ಹೇಗೆ ಎಂದು ಕೃಷ್ಣೇಗೌಡ ಚಿಂತಾಕ್ರಾಂತನಾಗಿರುವಂತ ಸಂದಿಗ್ದತೆಯಲ್ಲಿ ಕಥೆ ಮುಗಿಯುತ್ತದೆ.

ಒಂದು ಆನೆಯ ಮೂಲಕ ಒಂದು ಅತ್ಯಂತ ವಾಸ್ತವವಾದ ಹಾಗೂ ಸಮಕಾಲಿನವಾದ ಸಾಮಾಜಿಕ ಪರಿಸರದ ಸಾಕ್ಷಾತ್ಕಾರವನ್ನೂ ಮನುಷ್ಯ ತನ್ನ ಬೇಜವಾಬ್ದಾರಿಯನ್ನು ಅಸಹಾಯಕತೆಯನ್ನು ಮುಚ್ಚಿಕೊಳ್ಳುವುದಕ್ಕಾಗಿ ಅದನ್ನೆಲ್ಲ ಬೇರೊಂದರ ಮೇಲೆ ಆರೋಪಿಸಿ, ತಾನು ಮತ್ತೆ ಕರ್ತವ್ಯದ ವೃತ್ತದಿಂದ ಹೊರಗುಳಿಯುವ ವಸ್ತು ಸ್ಥಿತಿಯನ್ನು ಕೃಷ್ಣೇಗೌಡನ ಆನೆ ವಸ್ತುವಾಗಿಸಿಕೊಂಡಿದೆ. ಮನುಷ್ಯನ ಸಣ್ಣತನ ಹಾಗೂ ಸ್ವಾರ್ಥಗಳಿಗೆ ಮನುಷ್ಯನ ಬದುಕೇ ಕಾರಣ ಆದರೂ ಈ ಕಥೆಯಲ್ಲಿ ನಡೆಯುವ ವೈರುದ್ಯ ಹಾಗು ದುರಂತಗಳಿಗೆ ಆನೆಯೇ ಅಪರಾಧಿಯಾಗುವುದು ದುರಂತ ವ್ಯಂಗ್ಯ.

ತೇಜಸ್ವಿಯವರು ತಮ್ಮ ಕಥೆಗಳಲ್ಲಿನ ಪಾತ್ರಗಳು ಅಭಿಪ್ರಾಯಗಳನ್ನು ಅಭಿವೃದ್ಧಿಸಲು ಸಂಕೇತಗಳ ರೂಪದಲ್ಲಿ ಪ್ರಾಣಿಗಳನ್ನು ಸಾಧನಗಳನ್ನಾಗಿಸಿಕೊಳ್ಳುತ್ತಿರುವುದು ಕಾಣಬಹುದಾಗಿದೆ.

ಕಾಡಿನಲ್ಲಿ ಕಿವಿಯೊಂದಿಗೆ ಅಡ್ಡಾಡ ಬೇಕಾದರೆ ಮಳೆ ಬಂದ ಪ್ರಯುಕ್ತ ಮನೆಯನ್ನು ತಲುಪಲು ಸಾಧ್ಯವಾಗದೆ ಮಾಲೆ ಮೇಸ್ತ್ರಿ ಮನೆ ಹುಲ್ಲು ಗುಡಿಸಲಿನಡಿ ನಿಲ್ಲಬೇಕಾಯ್ತು. ಮೇಸ್ತ್ರಿ ಹೆಂಡತಿ ಅಕ್ಕಮ್ಮನ ಪರಿಚಯವಾಗಿ ದೂರದಲ್ಲಿ ಕಾಣುತ್ತಿದ್ದ ಸಿದ್ದೇಗೌಡರ ಮನೆಯ ಶ್ರೀಮಂತಿಕೆ ಬಗೆಗೆ ಒಬ್ಬೊಬ್ಬರು ಒಂದೊಂದು ಕಲ್ಪನೆಯನ್ನು ಹರಿಯ ಬಿಟ್ಟಿದ್ದು ಕೇಳಿದ್ದೆ. ಅಕ್ಕಮ್ಮನ ಮನದಲ್ಲಿ ಸಿದ್ದೇಗೌಡರ ಶ್ರೀಮಂತಿಕೆಯ ಬಗ್ಗೆ ಏನಾದರೂ ಅಸೂಯೆಯ ಮಾತುಗಳು ಬರಬಹುದೆಂದರೆ, ಅದಕ್ಕೆ ತದ್ವಿರುದ್ದವಾಗಿ ಸಿದ್ದೇಗೌಡರ ಮೇಲಿದ್ದ ಊಹಾಪೋಹಗಳನ್ನೆಲ್ಲಾ ಆಕೆ ಅಲ್ಲಗಳೆದಳು. ಸಿದ್ದೇಗೌಡರ ತಾಯಿಯ ಶುದ್ಧ ಮನಸ್ಸಿನಿಂದಾಗಿ ಅವರ ಮನೆ ಮುಂದುವರೆಯುತ್ತಿದೆಯೆಂದು ಒಂದು ಘಟನೆಯನ್ನು ವಿವರಿಸತೊಡಗಿದಳು. ಒಮ್ಮೆ ಕಾಡಿನ ಜಿಂಕೆಯೊಂದನ್ನು ಶಿಕಾರಿ ಮಾಡುತ್ತ ಜೇನು ಬೈಲು ಕಡೆಯೋರು ಮುದ್ರೆ ಮನೆ ಕಾಡಿಗೆ ಹೋಗಿದ್ದಾಗ, ಅವರ ಹತ್ತಿರವಿದ್ದ ಶಿಖಾರಿ ನಾಯಿಯಿಂದ ಕಣ್ತಪ್ಪಿಸಿ ಒಂದು ಜಿಂಕೆ ಅವರ ಮನೆ ಬಂದು ಸೇರಿತು. ಅಷ್ಟರಲ್ಲಿ ಜಿಂಕೆಯನ್ನು

ಹುಡುಕಿಕೊಂಡು ಶಿಖಾರಿಗಳೆಲ್ಲ ಮನೆಯ ಮುಂದೆ ಬಂದು ಸೇರಿದರು. ಅವರು ಜಿಂಕೆಯನ್ನು ಹೊರಗಳಿಸುವಂತೆ ಹೇಳಿ ಕೋವಿಯನ್ನು ಸಿದ್ದಪಡಿಸಿಕೊಂಡಾಗ ಮಂಜಮ್ಮ ಹೇಳಿದ್ದು ಒಂದೇ ಮಾತು.

"ನನಗೆ ಗುಂಡು ಹೊಡೆದು ಆಮೇಲೆ ನನ್ನ ಮನೆ ಒಳಗಿರೋ ಜಿಂಕೆಗೆ ಗುಂಡು ಹಾಕಬೇಕು ಜೀವ ಉಳಿಸಿ ಅಂತ ಬಂದಿರೋದನ್ನ ನಿಮ್ಮ ಕೈಲಿ ಹೊಡೆಸಿದರೆ ಅದರ ಶಾಪ ತಟ್ಟದೆ ಇರುತ್ತಾ? ಯಾರ ಮನೆ ಹಾಳ್ಮಾಡಬೇಕಂತ ಇದೀರ ಎಂದು ಜೋರು ಮಾಡಿದರು".

ಮಂಜಮ್ಮ ಪಟ್ಟು ಹಿಡಿದು ನಿಂತ ಪ್ರಯುಕ್ತ ಕೊನೆಗೆ ಎಲ್ಲರೂ ಅಲ್ಲಿಂದ ಹೊರಟು ಹೋದ ಮೇಲೆ ಜಿಂಕೇನೂ ಜಿಂಕೆ ಮರೀನೂ ಹೊಸಿಲು ದಾಟಿಸಿ ಕಾಡಿನ ಕಡೆಗೆ ಓಡಿಸಿದಳು. ತಾಯಿ ಜಿಂಕೆ ಅವಳನ್ನು ಹರಸಿತೆಂದು ತಿಳಿಯುತ್ತದೆ ಅಂದಿನಿಂದ ಅವರು ಮುಟ್ಟಿದ್ದೆಲ್ಲಾ ಚಿನ್ನ, ಬಿತ್ತಿದ್ದೆಲ್ಲಾ ಬಂಗಾರವಾಯ್ತು ಎಂದಳು.

ಪ್ರಾಣಿಯೊಂದು ತನ್ನನ್ನು ರಕ್ಷಿಸಿದವಳನ್ನು ಹರಸಿದ ಪ್ರಯುಕ್ತ ಆ ಮನೆತನಕ್ಕೆ ಏಳಿಗೆ ಲಭಿಸಿತೆಂಬುದನ್ನು ಕಾಣಬಹುದು.

ಪ್ರಾಣಿಗಳಿಂದ ತಮಗೆ ಸಂಚಕಾರ ಹಾಗೂ ಪ್ರಾಣಭಯವುಂಟೆಂದು ಭಾವಿಸುವ ಮನುಷ್ಯನ ಮನಸ್ಸಿನಲ್ಲಿನ ಕತ್ತಲನ್ನು, ಅಜ್ಞಾನವನ್ನು ತೊಡೆದು ಹಾಕುವಂತಹ ಶೈಲಿಯನ್ನು ಈ ಕಥೆಯಲ್ಲಿ ಕಾಣಬಹುದು.

ಪ್ರಾಣಿಗಳು ಭೂಮಿಯ ಮೇಲೆ ನಡೆದಾಡುತ್ತಲೇ ತಮಗೆ ಬರುವ ಆಪತ್ತಿನಿಂದ ತಪ್ಪಿಸಿಕೊಳ್ಳಬೇಕು. ಅರಣ್ಯದಲ್ಲಿ ಒಂದೇ ಎಡೆ ಎಲ್ಲ ಪ್ರಾಣಿಗಳೂ ಬದುಕುತ್ತಾ ಅವು ತಮ್ಮ ಎಲ್ಲ ಭಯಗಳೊಡನೆ, ಪ್ರಾಣಾಪಾಯಗಳೊಡನೆ ಬದುಕುತ್ತವೆ. ಇಲ್ಲಿಯೂ ಪ್ರಾಣಿಗಳದೇ ಒಂದು ವಿಸ್ಮಯ ಲೋಕವಿದೆ. ಅವುಗಳದೇ ಲೆಕ್ಕಾಚಾರದ ಬದುಕಿದೆ. ಭಯವಿದ್ದು ಅವು ನಿರ್ಭಯದಿಂದ ಬದುಕುತ್ತವೆ ಮನುಷ್ಯರಂತೆ ಅಲ್ಲ. ಎಲ್ಲವೂ ತನಗೇ ಬೇಕು ಎಂಬ ಧಾವಂತದಲ್ಲಿ ನೆಮ್ಮದಿಯಿಲ್ಲದೆ ಸುತ್ತಮುತ್ತ ತನ್ನ ಕ್ರೂರ ದೃಷ್ಟಿಯನ್ನು ಬೀರುತ್ತಲೇ ಇರುತ್ತಾನೆ. ಹುಲಿ, ಜಿಂಕೆಯೊಂದನ್ನು ಒಮ್ಮೆ ಬೇಟೆಯಾಡಿದರೆ ಅದು ಎಂಟು ದಿನ ಬೇಟೆಯ ಕಡೆ ಕಣ್ಣು ಹಾಯಿಸುವುದಿಲ್ಲ. ಅನತಿ

ದೂರದಲ್ಲಿಯೇ ಜಿಂಕೆಯ ಸಮೂಹ ಹಾರುತ್ತಿದ್ದರೂ ಹುಲಿ ಎದ್ದು ಬೇಟೆಯಾಡಲಾರದಷ್ಟು ಸೋಮಾರಿತನವನ್ನೂ, ಹೊಟ್ಟೆ ತುಂಬಿರುವುದರ ಆನಂದದಲ್ಲಿಯೂ ಆಯಾಗಿ ತನ್ನದೇ ಹಸನಾದ ಕಳ್ಳಗತ್ತಿನಲ್ಲಿ ಬಿದ್ದುಕೊಂಡಿರುತ್ತದೆ. ಆದರೆ ಪ್ರಾಣಿ ಸಂಕುಲದ ಬೇಟೆಯ ಮನರಂಜನೆಯಿಂದ ತಾನು ಕ್ಷೇಮವಾಗಿಯೂ,ಶ್ರೀಮಂತನಾಗಿಯೂ ಬದುಕಬಹುದೆಂಬ ಭ್ರಮೆಯಿಂದ ಮನುಷ್ಯನಿರುವಂತೆ ತೋರುತ್ತದೆ.

ಆ. ಪಕ್ಷಿಗಳ ಪ್ರಪಂಚ

ತೇಜಸ್ವಿಯವರ ಬಹುತೇಕ ಹವ್ಯಾಸಗಳಲ್ಲಿ ಪಕ್ಷಿ ವೀಕ್ಷಣೆಯೂ ಒಂದು ಉತ್ತಮ ಛಾಯಾಗ್ರಾಹಕರಾದ ತೇಜಸ್ವಿ ತಮ್ಮ ಕ್ಯಾಮೆರಾದಲ್ಲಿ ಹಲವಾರು ವರ್ಣ ರಂಜಿತ ಹಕ್ಕಿಗಳನ್ನು ಸೆರೆಹಿಡಿದಿರುವುದನ್ನು ಕಾಣುತ್ತೇವೆ. ಮಲೆನಾಡಿನ ಹಕ್ಕಿಗಳು, ಪ್ರಕೃತಿ ಸೌಂದರ್ಯ ಅವರ ಛಾಯಾ ಚಿತ್ರಗಳಲ್ಲಿ ಸೆರೆಹಿಡಿಯಲ್ಪಟ್ಟಿವೆ. ಕಾಡಿನ ಸಂಪರ್ಕದ ಮಧ್ಯೆ ವಾಸಿಸುವ ತೇಜಸ್ವಿಯವರು ವಿವಿಧ ಬಗೆಯ ಪ್ರಾಣಿಗಳ, ಪಕ್ಷಿಗಳ ಚಲನವಲನಗಳನ್ನು ಅತಿ ಸಮೀಪದಿಂದ ವೀಕ್ಷಿಸುತ್ತಾರೆ. ಹಾಗಾಗಿ ಪಕ್ಷಿಗಳ ಪ್ರಾಣಿಗಳ ಸ್ವಭಾವ ಹಾಗು ಅವುಗಳ ವಿಶಿಷ್ಟ ಅನುಭವಗಳನ್ನು ಸಹಜವಾಗಿ ನಿರೂಪಿಸುತ್ತಾರೆ.

ತೇಜಸ್ವಿಯವರಿಗೆ ಹಕ್ಕಿಗಳ ಬಗ್ಗೆ ಬಾಲ್ಯದಿಂದಲೂ ಆಸಕ್ತಿ. ಅದಕ್ಕೆ ಕಾರಾಣ ಮೈಸೂರಿನ ಅವರ ಮನೆಯ ಆವರಣದಲ್ಲಿ ಸೀಬೆ, ಪನ್ನೇರಿಳೆ, ಸಪೋಟ ಮರಗಳಿದ್ದು, ಹಕ್ಕಿಗಳಿಗೆ ಅದೊಂದು ನೆಚ್ಚಿನ ತಾಣವಾಗಿತ್ತು. ಅವುಗಳ ಹೆಸರು, ಅವುಗಳನ್ನು ಗುರುತಿಸುವ ಬಗೆ, ಅವುಗಳ ಜೀವನ ಕ್ರಮ, ಅವುಗಳು ಗೂಡು ಕಟ್ಟುವ ರೀತಿ ಇವುಗಳ ಬಗ್ಗೆ ತಂದೆಯಿಂದ ಅವರಿಗೆ ವಿಪುಲವಾದ ಮಾಹಿತಿ ದೊರೆತಿತ್ತು.

"ಕೆರೆಯ ದಡದಲ್ಲಿ ಕಥೆಯಲ್ಲಿ ತೇಜಸ್ವಿ ತೋಟಕ್ಕೆ ರಜವಿದ್ದಾಗ ಬಿಡುವಿನ ವೇಳೆಯನ್ನು ಕಳೆಯುವುದು ಹೇಗಪ್ಪಾ ಎನ್ನದೆ ಕಿವಿಯೊಡನೆ ಮಲೆನಾಡಿನ ನಿತ್ಯಹರಿದ್ವರ್ಣದ ಕಾಡುಗಳಲ್ಲಿ ಅಲೆದು ಅಲ್ಲಿನ ರೋಮಾಂಚನ ಸನ್ನಿವೇಶಗಳನ್ನು ಸೆರೆಹಿಡಿಯುತ್ತಿದ್ದರು. ಅವರಿಗೆ ಕಾಲ ಕಳೆಯುವುದು ಹೇಗೆ ಎಂಬುದಕ್ಕಿಂತ ಕಾಲ ಕಳೆದುಹೋಗುತ್ತದಲ್ಲ ಎಂಬ ಚಿಂತೆ ಕಾಡುತ್ತಿತ್ತು.

ತಮ್ಮ ತೋಟದ ಬಲಕ್ಕೆ ಇದ್ದ ಹಳೇ ಕೆರೆಯ ಬಳಿ ಹೋಗುತ್ತಿದ್ದಾಗ ಮರಕುಟುಕನ ಹಕ್ಕಿಯೊಂದು ಒಣಗಿದ ಮರದ ಕೊಂಬೆಗೆ ಢಮ ಢಮ ಢಮ ಶಬ್ದ ಮಾಡಿದ್ದು ಕೇಳಿ ಅದನ್ನು ನೋಡುತ್ತಿದ್ದರು. ಆ ಮರಕುಟುಕನ ಹಕ್ಕಿ ಎಷ್ಟು ವೇಗವಾಗಿ ಮರವನ್ನು ಕುಟ್ಟುತ್ತಿತ್ತೆಂದರೆ ಅದರ ತಲೆ, ಕುತ್ತಿಗೆಗಳು ಕಣ್ಣಿಗೆ ಕಾಣದಷ್ಟು ವೇಗವಾಗಿತ್ತು. ತಲೆಯನ್ನು ಸುತ್ತಿಗೆಯಂತೆ ಉಪಯೋಗಿಸಿದ್ದನ್ನು ಕಂಡು ಅವರಿಗೆ ಮನೆ ಬಾಗಿಲು ತಲೆಗೆ ತಾಕಿದ್ದಕ್ಕೆ ತಲೆಸುತ್ತು ಬಂದಂತಾದ ಸನ್ನಿವೇಶ ಜ್ಞಾಪಕವಾಯಿತು. ಆ ಹಕ್ಕಿಯ ಚತುರತೆಯನ್ನು ಕಂಡು ಆಶ್ಚರ್ಯಗೊಂಡು ಅದು ತನ್ನ ಆಹಾರ ಇಂತಲ್ಲಿಯೇ ಇದೆ ಎಂದು ಹೇಗೆ ಪತ್ತೆ ಹಚ್ಚುತ್ತದೆ. ಎಂದು ಯೋಚಿಸುತ್ತಿದ್ದಂತೆಯೇ ಅವರಿಗೆ ಸುತ್ತಲಿನ ಪ್ರಪಂಚ ರಹಸ್ಯಮಯವಾಗಿ ಕಾಣತೊಡಗಿತ್ತು.

ಪುಕವೋಕಾ ಹೇಳಿದ ಹಾಗೆ ಇದನ್ನೆಲ್ಲಾ ಸಂಪೂರ್ಣ ತಿಳಿಯುತ್ತೇನೆಂದು ಹೋಗುವುದು ಮೂರ್ಖ ತನವೇ ಸರಿ. ಅಗತ್ಯವಿದ್ದಷ್ಟನ್ನು ತಿಳಿದುಕೊಂಡು ಮಿಕ್ಕವುಗಳ ಬಗೆಗೆ ಅಚ್ಚರಿಪಡುತ್ತಾ ಅವುಗಳ ಶೋಧನೆಗೆ ಹೋಗದಿರುವುದೇ ಒಳ್ಳೆಯದು. ಮರಕುಟುಕನ ಹಕ್ಕಿಯ ತಲೆಯೊಳಗೆ ಏನೇನು ಉಪಕರಣಗಳಿವೆಯೋ ಹೇಗೆ ರಚನೆಯಾಗಿದೆಯೋ ಯಾರಿಗೆ ಗೊತ್ತು. ಈ ದೃಷ್ಟಿಯ ರಚನೆಯಲ್ಲಿ ಯಾವುದು ಹೇಗೆ ರಚನೆಯಾಗಿದೆಯೆಂದು ತಿಳಿಯದಿರುವುದೇ ಲೇಸು ಅದರಿಂದ ಸಿಗುವ ಆನಂದವನ್ನಷ್ಟೇ ನಾವು ಪಡೆಯಬೇಕಾಗುತ್ತದೆ.

ತೇಜಸ್ವಿಯವರು ಒಮ್ಮೆ ಲಂಕೇಶ್ ಪತ್ರಿಕೆಯಲ್ಲಿ ಮರಕುಟುಕನ ಹಕ್ಕಿಯ ಬಗ್ಗೆ ಸಂಗ್ರಹಿಸಿ ಬರೆದಿದ್ದ ಒಂದು ಜನಪದ ಕಥೆ ಇಲ್ಲಿ ನೆನಪಾಗುತ್ತದೆ. "ಪಾರ್ವತಿ ಪರಮೇಶ್ವರರು ಲೋಕಸಂಚಾರ ಹೊರಟಿದ್ದರು. ಪರಮೇಶ್ವರನಿಗೆ ಭೂಮಿಯ ಮೇಲಣ ಒಂದು ಮರದಲ್ಲಿ ಶಿವ ಮರದ ಬಳಿಗೆ ಬಂದರೆ ಮರದ ಕೊಂಬೆಯನ್ನು ಸದ್ದು ಕೇಳಿಬಂತು. ಕುತೂಹಲವೆನಿಸಿ ಶಿವ ಮರದ ಬಳಿಗೆ ಬಂದರೆ ಮರದ ಕೊಂಬೆಯನ್ನು ಕುಟ್ಟುತ್ತಿದ್ದು ಮರಕ ಕುಟಿಗನ ಹಕ್ಕಿ ಶಿವನಿಗೆ ಆ ಹಕ್ಕಿಯ ಕುಟ್ಟುವಿಕೆಗೆ ಸರಿಸಮನಾಗಿ ತಾನು ನೃತ್ಯ ಮಾಡಬೇಕೆನಿಸಿತು. ಮಾಡಿದ. ಹಕ್ಕಿಯ ಕುಟ್ಟುವಿಕೆ ಏರಿತು. ಶಿವನೂ ತನ್ನ ಕುಣಿತವನ್ನು ಏರಿಸಿದ. ಹಕ್ಕಿ ಕುಟ್ಟುವುದು ತೀವ್ರವಾಯಿತು. ಶಿವನಿಗೆ ಕುಣಿಯಲಾಗಲಿಲ್ಲ. ಸಿಟ್ಟು ಏರಿತು ಹೀಗೆಯೇ ಮರ ಕುಟ್ಟಿಕೊಂಡು ಹುಳು ಹುಪ್ಪಟೆ ತಿಂದುಕೊಂಡು ಕಾಲ ಕಳೆ ಎಂದು ಶಿವ ಹಕ್ಕಿಗೆ ಶಾಪಕೊಟ್ಟು ಕೈಲಾಸ ಸೇರಿದನಂತೆ". ತೇಜಸ್ವಿಯವರು ಸಂಗ್ರಹಿಸಿದ ಈ ಕಥೆ ಒಂದು ಮಟ್ಟ ಹಕ್ಕಿಯ ಎದುರು. ಲೋಕದ ಯಜಮಾನನಾದ ಶಿವನನ್ನು ಒಂದು ಹಿಡಿಯಷ್ಟು ಮಾಡಿ ನೋಡಿದಂತಾಗಿದೆ. ಅಂದರೆ ಹಕ್ಕಿಯ

ಮನಸ್ಸಿಗಿಂತಲೂ, ಅದರ ಕಾಯಕ ಶ್ರಮಕ್ಕಿಂತಲೂ ಶಿವನ ಲೋಕ ಸಂಚಾರ, ನೃತ್ಯ ಮಹಿಮೆ ದೊಡ್ಡದಲ್ಲ. ಬಹುಶಃ ತೇಜಸ್ವಿಯವರ ಪ್ರಕೃತಿ ಭಾವ ಇದೆ. ಸಾವಿರಾರು ವರ್ಷಗಳಿಂದ ಹೇಳಿಕೊಂಡು ಬಂದಿರುವ ನೂರಾರು ದೇವತೆಗಳನ್ನು ಕುರಿತು ಚರ್ವಿತ ಚರ್ವಣ ಅಲೌಕಿಕ ಸಂಗತಿಗಳಿಗಿಂತ ಕಣ್ಣ ಮುಂದೆ ಕಾಣುವ ಪ್ರಾಕೃತಿಕ ವಿವರಗಳು ತೇಜಸ್ವಿಯವರಿಗೆ ಮುಖ್ಯವಾಗುತ್ತದೆ.

ಕೆರೆಯ ದಡದಲ್ಲಿ ಕುಳಿತಿರುವಾಗ ದಡದಲ್ಲಿ ನಡೆಯುವ ನೂರಾರು ಚಟುವಟಿಕೆಗಳನ್ನು ನೋಡುತ್ತಿದ್ದರು. ಅಲ್ಲಿಗೆ ಹೋದ ಕೂಡಲೆ ಕಿವಿ ದಡದಲ್ಲಿ ಕುಳಿತಿದ್ದ ಕೊಕ್ಕರೆಗಳನ್ನು ಅಟ್ಟಿಸಿಕೊಂಡು ಹೋಗುತ್ತಿತ್ತು. ಕಿವಿಯ ಈ ಚೇಷ್ಟೆಯನ್ನು ತುಂಬಾ ದಿನಗಳಿಂದ ನೋಡಿ ಅಭ್ಯಾಸವಾಗಿದ್ದ ಕೊಕ್ಕರೆಗಳು ಗಾಬರಿಗೊಳ್ಳದೆ ಹಾರಿ ಎದುರಿನ ದಡಕ್ಕೆ ಹೋಗಿ ಮೀನುಗಳನ್ನು ಹಿಡಿಯುತ್ತಿದ್ದವು. ಮೀನುಗಳನ್ನು ಅವು ಹಿಡಿಯುವ ಪರಿ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ಏಕೆಂದರೆ ಎರಡು ಕೈ ಹತ್ತು ಬೆರಳುಗಳಿರುವ ಮನುಷ್ಯನಿಗೆ ಮೀನುಗಳನ್ನು ನೀರಿನಲ್ಲಿ ಹಿಡಿಯಲು ಸಾಧ್ಯವಾಗದಿರುವಾಗ, ಅಷ್ಟೊಂದು ನುಣುಪಾದ, ಮುಟ್ಟಿದರೆ ಜಾರಿಕೊಳ್ಳುವ ಮೀನುಗಳನ್ನು ಕೊಕ್ಕರೆ ಹಿಡಿಯಲು ಬಳಸುತ್ತಿದ್ದ ಆಯುಧವೆಂದರೆ ಅದರ ಚಿಮ್ಮಟದಂತಿರುವ ಕೊಕ್ಕು. ಮನುಷ್ಯ ಚಿಮ್ಮಟವನ್ನು ಉಪಯೋಗಿ ಜೀವಮಾನವೆಲ್ಲ ಪ್ರಯತ್ನಿಸಿದರೂ ಒಂದು ಮೀನನ್ನೂ ಹಿಡಿಯಲಾಗುವುದಿಲ್ಲ. ಜೀವವಿರುವ ಮೀನುಗಳನ್ನು ಹಿಡಿಯುವುದಿರಿಲಿ, ಸತ್ತ ಮೀನುಗಳನ್ನು ಸಹ ಚಿಮಟದಿಂದ ಹಿಡಿಯಲು ಸಾಧ್ಯವಾಗದಿರುವಾಗ ಕೊಕ್ಕರೆಗಳು ಹಿಡಿಯುವ ಪರಿಯು ಅತ್ಯಾಶ್ಚರ್ಯವನ್ನುಂಟು ಮಾಡುತ್ತವೆ. ಪ್ರಕೃತಿಯಲ್ಲಿನ ಪ್ರತಿಯೊಂದು ಜೀವಿಯ ರಚನೆಯಲ್ಲಿ ಅವುಗಳ ಸ್ವಭಾವ, ಆಹಾರ ಸಂಪಾದನೆ ಇನ್ನು ಹಲವಾರು ಕ್ರಿಯೆಗಳಲ್ಲಿ ಭಿನ್ನತೆಯಿರುವುದನ್ನು ಈ ಅಂಶವು ಸೂಚಿಸುತ್ತದೆ.

ತೇಜಸ್ವಿಯವರ ಹಕ್ಕಿಗಳ ಹೆಜ್ಜೆ ಮೂಡದ ಹಾದಿ ಕತೆಯ ಪಕ್ಷಿಗಳ ವಿಸ್ಮಯ ಲೋಕದ ಪರಿಚಯ ಮಾಡಿಸುತ್ತದೆ. ಹೆಜ್ಜೆ ಮೂಡದ ಹಾದಿಯನ್ನು ಗುರುತಿಸುವ ಸಂದರ್ಭವೂ ರೋಚಕವಾದುದೇ!

"ನಮ್ಮ ದೈನಂದಿನ ಜೀವನದಲ್ಲಿ ಕಾಣುವ ಅನೇಕ ಚಿಕ್ಕ ಪುಟ್ಟ ಹಕ್ಕಿಗಳು ಎಲ್ಲಿಂದ ಬಂದಿವೆ? ಎಲ್ಲಿ ಹೋಗುತ್ತವೆ ಎನ್ನುವುದರ ಬಗ್ಗೆ ಎಲ್ಲೋ ಹಲವು ಪಕ್ಷಿ ಶಾಸ್ತ್ರಜ್ಞರಿಗೆ ಮಾತ್ರ ತಿಳಿದಿದೆಯೇ ಹೊರತು ಜನಸಾಮಾನ್ಯರಿಗೆ ಹೆಚ್ಚಿಗೆ ಗೊತ್ತಿಲ್ಲ"[2].

ಯೂರೋಪಿನಿಂದ ವಲಸೆ ಬರುವ ವ್ಯಾಬ್ಲರ್ ಹಕ್ಕಿ, ಹಿಮಾಲಯದಿಂದ ಸಹ್ಯಾದ್ರಿಗೆ ಯಾತ್ರೆ ಬರುವ ಇಂಡಿಯನ್ ಪಿಟ್ಟ, ಪೂರ್ವ ಯೂರೋಪಿನಿಂದ ಇಲ್ಲಿಗೆ ಬರುವ ಕುಂಡೆಕುಸ್ಕ, ಸೈಬೀರಿಯಾದಿಂದ ಇಲ್ಲಿಗೆ ಬರುವ ಸ್ಕೈಲಾರ್ಕ್ ಹಕ್ಕಿಗಳು ಸಹಸ್ರಾರು ಮೈಲಿ ಹಾರಿಕೊಂಡು

ಹಾರಿಕೊಂಡು ಇಲ್ಲಿಗೆ ಬಂದು ಗೂಡು ಕಟ್ಟಿ ಮರಿ ಮಾಡಿ ಮತ್ತೆ ಹಿಂತಿರುಗುತ್ತವೆ. ಪ್ರಪಂಚದಲ್ಲಿ ಪಕ್ಷಿಗಳು ತಮ್ಮ ಜೀವಿತಾವಧಿಯಲ್ಲಿ ಖಂಡಾಂತರ ಪ್ರವಾಸ ಮಾಡುತ್ತವೆ. ಈ ಖಂಡಾಂತರ ಯಾನದ ಮೊತ್ತ ಮೊದಲ ಅದ್ಭುತ ಪ್ರಯೋಗ ಬ್ರಿಟನ್ನಿನ ವೇಲ್ಸ್‌ನಲ್ಲಿ ಸಮುದ್ರ ತೀರದಲ್ಲಿರುವ ಪ್ರಪಾತಗಳಲ್ಲಿ ಗೂಡು ಕಟ್ಟಿಕೊಂಡಿದ್ದ ಸೀಗಲ್ ರೀತಿಯ ಮ್ಯಾಕ್ಸ್‌ಪರ್ ವಾಟರ್ ಹಕ್ಕಿಯ ಮೇಲೆ ನಡೆಸಿದ್ದು, ಈ ಹಕ್ಕಿಯನ್ನು ಅದರ ಗೂಡಿನಿಂದ ತೆಗೆದುಕೊಂಡು ವಿಮಾನದ ಮೂಲಕ ಅಮೇರಿಕಾದ ಬೋಸ್ಟನ್ನಿಗೆ ಒಯ್ದರು. ಅಲ್ಲಿ ಅದನ್ನು 1952ನೇ ಇಸ್ವಿ ಜೂನ್ ನಾಲ್ಕನೇ ತಾರೀಖು ಬಿಡುಗಡೆ ಮಾಡಲಾಯ್ತು. ಅದನ್ನು ಹಾರಿ ಬಿಟ್ಟಾಗ ಮಧ್ಯಾಹ್ನ ಒಂದುವರೆ ಗಂಟೆ ಆ ಹಕ್ಕಿ ವೇಲ್ಸ್‌ನ ತನ್ನ ಗೂಡಿಗೆ ಜೂನ್ ಹದಿನಾರನೇ ತಾರೀಖು ಸರಿಯಾಗಿ ಹಿಂತಿರುಗಿ ಬಂತು ಅದು ಮೂರು ಸಾವಿರದ ಐವತ್ತು ಮೈಲಿಗಳನ್ನು ಹನ್ನೆರಡುವರೆ ದಿನಗಳಲ್ಲಿ ಹಾರಿ ತನ್ನ ಗೂಡಿಗೆ ಹಿಂತಿರುಗಿತ್ತು, ವಿಜ್ಞಾನಿಗಳೆಲ್ಲ ಅವಕ್ಕಾಗಿ ತಲೆ ಕೆರೆದುಕೊಳ್ಳ ತೊಡಗಿದರು. ಅನಂತರದ ದಿನಗಳಲ್ಲಿ ಇದಕ್ಕಿಂತ ಅದ್ಭುತವಾದ ಉದಾಹರಣೆಗಳು ವಿಜ್ಞಾನಿಗಳಿಗೆ ಹಾರುವ ಶಕ್ತಿ ಸಾಮರ್ಥ್ಯಗಳ ಬಗೆಗೆ ದೊರೆಯ ತೊಡಗಿತು. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಪಕ್ಷಿಗಳು ಯಾವುದರ ಆಧಾರದ ಮೇಲೆ ದಿಕ್ಕುಗಳನ್ನು ಕಂಡು ಕೊಳ್ಳುತ್ತದೆ ಎಂಬುದು. ಸೂರ್ಯನನ್ನು ಆಧರಿಸಿಯೇ ? ಚಂದ್ರನ ದಿಕ್ಕನ್ನು ಕಂಡುಕೊಂಡೇ ? ಅವು ಮೂಡುವ ಮುಳುಗುವ ದಿಕ್ಕನ್ನು ಆಧರಿಸಿಯೇ? ಬೀಸುವ ಗಾಳಿಯ ಆಧಾರದ ಮೇಲೋ? ಹಕ್ಕಿಗಳ ತಲೆಯ ಪುಟ್ಟ ಮೆದುಳು ಅದೆಷ್ಟು ಕರಾರುವಕ್ಕಾಗಿ ಕೆಲಸ ಮಾಡುತ್ತದೆ ಎಂಬುದು ಪರಮಾಶ್ಚರ್ಯದ ವಿಷಯ. ಇವು ತಟ್ಟನೆ ಅರಿತುಕೊಳ್ಳಲಾಗದ ಪಕ್ಷಿ ಲೋಕದ ವಿವರಗಳನ್ನು ಒದಗಿಸುತ್ತವೆ.

25 ವರ್ಷಗಳ ಸತತ ಪ್ರಯೋಗದ ನಂತರ ವಿಜ್ಞಾನಿಗಳು ಈ ಪುಟ್ಟ ಹಕ್ಕಿಗಳ ಮಿದುಳಿಗೆ ಅನಂತ ಆಕಾಶದ ಜೊತೆಗೆ ಯಾವುದೋ ರೀತಿಯ ಸಂಬಂಧ ಏರ್ಪಟ್ಟಿರುತ್ತದೆ. ಈ ಭೂಗ್ರಹದ ತಮ್ಮ ಜೀವಿತದಲ್ಲಿ ಬದುಕಿನ ಹಾದಿಯನ್ನು ಸೂರ್ಯ, ಚಂದ್ರ, ಗ್ರಹ, ತಾರೆಗಳು ತೋರಿಸಿಕೊಡುತ್ತವೆ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ತೇಜಸ್ವಿಯವರು ತಮ್ಮ ಕತೆಯಲ್ಲಿ ಪರಿಚಯಿಸುವ ಮತ್ತೊಂದು ಹಕ್ಕಿ ಮಲಬಾರ್ ಟ್ರೋಜನ್ "ಮಲಬಾರ್ ಟ್ರೋಜನ್" ನಂಥ ಅಪರೂಪದ ಹಕ್ಕಿಯನ್ನು ತಮ್ಮ ಪರಿಸರದಲ್ಲೇ ಕಂಡ ಘಟನೆಯನ್ನು ವರ್ಣಿಸುವಾಗ ಅವರ ಬರವಣಿಗೆ ಕಾವ್ಯದ ಉತ್ಕಟತೆಗೆ ಸಮೀಪವಾಗಿ ಬಿಡುತ್ತದೆ.

ತೇಜಸ್ವಿ ಗೆಳೆಯನಾದ ಹರೀಶ್ ತಾವು ತಮ್ಮ ತೋಟದಲ್ಲಿ ಯಾರೂ ನೋಡಿಲ್ಲದ ಹೊಸ ಹಕ್ಕಿಯನ್ನು ನೋಡಿದ್ದೇನೆಂದು, ಅದು ಮೈನಾ ಹಕ್ಕಿ ಅಷ್ಟು ದೊಡ್ಡದಿತ್ತು. ಅದರ ಎದೆ ಎಲ್ಲಾ ರಕ್ತದ ಬಣ್ಣ ಮಿಕ್ಕ ಭಾಗ ಅಂತೂ ಅದು ಯಾಕೆ ಹೇಳ್ತೀರಾ ! ರೆಕ್ಕೆ ಪುಕ್ಕ ಎಲ್ಲಾ ಪ್ರಪಂಚದಲ್ಲಿ ಇರೋ ಎಲ್ಲಾ ಬಣ್ಣನೂ ಅಲ್ಲಿ ಇತ್ತು. ಅಷ್ಟು ಸುಂದರವಾದ ಹಕ್ಕಿ ಅದು ಎಂದು ವರ್ಣಿಸುತ್ತಾರೆ. ಅದನ್ನು ಕೇಳಿದ ತೇಜಸ್ವಿಗೆ ಅದನ್ನು ಕಾಣುವ ಕುತೂಹಲ. ಎಷ್ಟು ಹುಡಿಕಿದರೂ ಕಣ್ಣಿಗೆ ಕಾಣದ ಅದು ಒಮ್ಮೆ ತೋಟದಲ್ಲಿ ಕೆಲಸ ಮಾಡುವಾಗ ಗೋಚರವಾಯಿತು. ನಿಜಕ್ಕೂ ಹರೀಶ್‌ನ ವರ್ಣನೆಯಲ್ಲಿ ಸತ್ಯಾಂಶವಿತ್ತು. ಎದೆಯಲ್ಲಿ ಪ್ರಧಾನವಾಗಿ ಕೆಂಪು ಬಣ್ಣ ಇದ್ದರೂ ಅದರ ಮೈಮೇಲೆ ಪ್ರಕೃತಿಯ ಎಲ್ಲಾ ಬಣ್ಣಗಳೂ ಸಂಯೋಜನೆಗೊಂಡ ಹಾಗೆ ಇತ್ತು. ಇದರ ವಿವರವನ್ನು ಸಲೀಂ ಅಲಿಯವರ ಪುಸ್ತಕದಲ್ಲಿಯೂ ಇಲ್ಲದ್ದನ್ನು ಕಂಡು ಆಶ್ಚರ್ಯಗೊಂಡು, ಘೋರ್ಪಡೆಯವರ ಸಲಹೆಯ ಮೇರೆಗೆ ಗ್ರಿಸ್ಮೆಕ್‌ರವರ ಪಕ್ಷಿಗಳ ವಿಶ್ವಕೋಶ ತರಿಸಿ ನೋಡಿದಾಗ, ಆ ಹಕ್ಕಿಯ ಚಿತ್ರ, ಹೆಸರು, ಕುಟುಂಬ, ಜಾತಕ ಎಲ್ಲ ಸಿಕ್ಕಿತು. ಇದೇ ಮಲಬಾರ್ ಟ್ರೋಜನ್ ಅಪರೂಪದ ಹಕ್ಕಿ.ಪಶ್ಚಿಮ ಘಟ್ಟಗಳ ಅತ್ಯದ್ಭುತ ವರ್ಣರಂಜಿತ ಹಕ್ಕಿಗಳಲ್ಲಿ ಇದೂ ಒಂದು. ಈ ಸುಂದರ ಹಕ್ಕಿ ಭೀಕರ ದುರಂತಕ್ಕೆ ಸಿಕ್ಕು ಸತ್ತಿತು. ರಾಮಯ್ಯ ತನ್ನ ಕೇಪಿನ ಕೋವಿಯ ಗುರಿಯನ್ನು ನೋಡಲು ಈ ಮೂಕ ಹಾಗೂ ಜಗತ್ತಿನ ಅತಿ ಸುಂದರ ಪಕ್ಷಿಯನ್ನು ಬಲಿತೆಗೆದುಕೊಂಡ ರುದ್ರಾವಕ ಸನ್ನಿವೇಶವನ್ನು ಕಂಡರೆ ಜೀವ ಬದುಕು ಎಲ್ಲಿ ಎಷ್ಟು ಅರ್ಥಹೀನ ಎನ್ನಿಸುತ್ತದೆ.

"ಈ ಟ್ರೋಜನ್ ಹಕ್ಕಿ ದಕ್ಷಿಣ ಅಮೇರಿಕಾದ ಇಂಕಾ ನಾಗರೀಕತೆಯಲ್ಲಿ ಪೂಜ್ಯ ಸ್ಥಾನ ಪಡೆದಿತ್ತು. ಸ್ಪಾನಿಷ್ ಸೈನಿಕರು ಮೂವತ್ತು ಸಾವಿರ ಇಂಕಾಗಳನ್ನು ಕಗ್ಗೊಲೆ ಮಾಡಿದಾಗ

ಕಾಡಿನ ಲಕ್ಷಾಂತರ ಟ್ರೋಜನ್ ಹಕ್ಕಿಗಳು ಅವರ ಶವಗಳ ಮೇಲೆ ಕುಳಿತು ಶೋಕ ಸೂಚಕ ಮೌನ ಆಚರಿಸಿದುವೆಂದು ದಂತ ಕತೆ ಇದೆ. ಇಂದಿಗೂ ಟ್ರೋಜನ್ ಗ್ವಾಟೆಮಾಲಾ ದೇಶದ ರಾಷ್ಟ್ರಪಕ್ಷಿ. ಅವರ ಕರೆನ್ಸಿ ನೋಟುಗಳ ಮೇಲೆ ಇದರ ಚಿತ್ರ ಇದೆ. ಇಂಕಾ ದೊರೆಗಳ ಕಾಲದಲ್ಲಿ ಇದನ್ನು ಸಾಕಲು ದೊರೆಯ ಅನುಮತಿ ಬೇಕಿತ್ತು. ಕೆಲವೇ ಮಂದಿ ಅತಿ ಪ್ರತಿಷ್ಠರಿಗೆ ಮಾತ್ರ ಅನುಮತಿ ಇತ್ತು"[6].

ಪ್ರಕೃತಿಯಲ್ಲಿ ಪ್ರತಿಯೊಂದಕ್ಕೂ ಅದರದೇ ಆದ ಸ್ಥಾನಮಾನಗಳಿವೆ. ನಾವು ಕುತೂಹಲದಿಂದ ಅವನ್ನೆಲ್ಲ ಗಮನಿಸಿದರೆ ಮಾತ್ರ ಪ್ರಕೃತಿಯಲ್ಲಿ ಇತರ ಜೀವಿಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಇಂತಹ ಸಂದೇಶವನ್ನು ತೇಜಸ್ವಿಯಂತಹ ಪರಿಸರವಾದಿಗಳು ಮಾತ್ರ ನೀಡಲು ಸಾಧ್ಯ

ನಾವು ಕೊಂದ ಹಕ್ಕಿಯ ಕತೆಯು ಮನುಷ್ಯನ ಆತ್ಮೀಯತೆಯು ಪ್ರಾಣಿ ಪಕ್ಷಿಗಳಿಗೆ ಕೇಡುಂಟು ಮಾಡಬಹುದೆಂಬುದನ್ನು ಸೂಚಿಸುತ್ತದೆ. ತೇಜಸ್ವಿ ತಮ್ಮ ಗೆಳೆಯ ರಘುವಿನೊಂದಿಗೆ ಮೀನು ಹಿಡಿಯಲ್ಲು ಹೇಮಾವತಿ ನದಿಯಲ್ಲಿನ ಹಳ್ಳಗಳ ಬಳಿಗೆ ಮೀನನ್ನು ಹಿಡಿಯಲು ಹೋದಾಗ ಬಬ್ಬುವಿನ ಜೊತೆಗೆ ಇನ್ನೊಬ್ಬ ಮಿತ್ರನ ಪರಿಚಯವಾಯಿತು. ಅದೇ ಒಂದು ಗದ್ದೆ ಗೊರವ ಹಕ್ಕಿ ಪ್ರಾರಂಭದಲ್ಲಿ ಇವರನ್ನು ಕಂಡು ಹೆದರುತ್ತಿದ್ದ ಹಕ್ಕಿ ಅವರಿಗೆ ಆಪ್ತವಾಯಿತು. ಕಾಲಕ್ರಮೇಣ ಅವರ ಹತ್ತಿರವೇ ಓಡಾಡುತ್ತಾ ಮೀನು ಹಿಡಿಯಲಾರಂಭಿಸಿತು. ನಾವು ಎಸೆಯುತ್ತಿದ್ದ ಎರೆಹುಳು, ಪುಡಿ ಮೀನು, ಸೀಗಡಿಗಳನ್ನು ಹಾರಿ ಹೋಗದೆ ನಿರ್ಭಯವಾಗಿ ಹುಡಿಕಿ ತಿನ್ನುತ್ತಿತ್ತು. ಅದರ ಸ್ನೇಹ ಕಂಡು ತೇಜಸ್ವಿ ಹೀಗೆನ್ನುತ್ತಾರೆ.

"ಕಾಡಿನ ಹಕ್ಕಿಯೊಂದು ತನ್ನ ಭಯ, ಅಪನಂಬಿಕೆಯನ್ನೆಲ್ಲ ಮೀರಿ ಮನುಷ್ಯನಿಗೆ ಇಷ್ಟೊಂದು ಮಿತ್ರನಾಗಬಹುದೆಂದು ನನಗಂತೂ ತಿಳಿದಿರಲಿಲ್ಲ"[7].

ಆ ಹಕ್ಕಿ ಇವರಿಗೆ ಹತ್ತಿರವಾದಂತೆ ಅದರ ಯೋಗಕ್ಷೇಮದ ಚಿಂತೆಯಾಯಿತು. ಕಾಡಿನ ಪಶುಪಕ್ಷಿಗಳೊಡನೆ ಇದ್ದ ಅನುಭವದ ಹಿನ್ನೆಲೆಯಲ್ಲಿ ಮನುಷ್ಯನೊಡನೆ ಸ್ನೇಹ ಅಪಾಯಕಾರಿ ಎಂದು ಅದನ್ನು ಏನಾದರೂ ಮಾಡಿ ಮಾನವರನ್ನು ಕಂಡರೆ ಹೆದರುವಂತೆ ಮಾಡಬೇಕೆಂದು

ಕೊಂಡರು, ಆದರೆ ಅವರ ಪ್ರಯತ್ನ ವ್ಯರ್ಥವಾಗಿ ಅವರು ತನ್ನನ್ನು ಓಡಿಸಲು ತೂರುತ್ತಿದ್ದ ಕಲ್ಲು ತನಗೆ ಎಸೆಯುತ್ತಿರುವ ಆಹಾರವೆಂದೇ ಭ್ರಮಿಸಿ ಅದು ಅಲ್ಲೇ ಹುಡುಕಾಡುತ್ತಿತ್ತು.

ತೇಜಸ್ವಿಯವರು ಬಗೆದಂತೆ ಆ ಹಕ್ಕಿಯ ಸಾವಿಗೆ ಅವರುಗಳೇ ಕಾರಣಕರ್ತರಾಗಬೇಕಾಗಿ ಬಂತು. ರಘು ಮೀನಿಗೆಂದು ಹಾಕಿದ್ದ ಗಾಳಕ್ಕೆ ಸಿಲುಕಿ ಅದು ಕೊನೆಯುಸಿರೆಳೆಯಿತು. ಇದರಿಂದಾಗಿ ಇನ್ನು ಮೇಲೆ ಯಾವುದೇ ಸಂದರ್ಭದಲ್ಲೂ ಕಾಡಿನ ಪ್ರಾಣಿಗಳೊಡನೆ ವಿಶ್ವಾಸ ಸಲುಗೆ ಬೆಳೆಸಲೇ ಕೂಡದೆಂದು ನಿರ್ಧಾರಕ್ಕೆ ಬಂದಿದ್ದನ್ನು ತಿಳಿಸುತ್ತಾರೆ.

ಪ್ರೀತಿ ಕಾಳಜಿಗಳನ್ನು ತೋರಿಸಿದ ಆ ಹಕ್ಕಿಯ ಮರಣಕ್ಕೆ ಕಾರಣರಾಗಿದ್ದಂತೂ ದಾರುಣವಾದ ದುರಂತ. "ಮನುಷ್ಯನ ಸ್ನೇಹ ವಿಶ್ವಾಸಗಳೂ ಕಾಡಿನ ಪ್ರಾಣಿಗಳಿಗೆ ಕ್ರೌರ್ಯ ದ್ರೋಹಗಳಷ್ಟೇ ಅಪಾಯಕಾರಿ ಎನ್ನುವುದು ಇದರಿಂದ ಚೆನ್ನಾಗಿ ತಿಳಿಯುತ್ತದೆ.

ಬಾವಲಿಗಳು ಅತೀಂದ್ರಿಯ ವಿಸ್ಮಯ, ಕಾಲಾಂತರದಲ್ಲಿ ವಿಜ್ಞಾನಿಗಳು ಅವುಗಳ ಬಗ್ಗೆ ಪ್ರಯೋಗ ನಡೆಸಿ ಕಂಡುಕೊಂಡ ವಿವರಗಳು ತೇಜಸ್ವಿಯವರ ಮಾಂತ್ರಿಕ ಶಕ್ತಿ ಪಡೆದುಕೊಂಡು ಇಲ್ಲಿ ರೂಪು ತಳೆದಿವೆ. ತೇಜಸ್ವಿ ಅತ್ಯಂತ ಸರಳವಾಗಿ, ಸ್ಪಷ್ಟವಾಗಿ ವೈಜ್ಞಾನಿಕ ಚಿಂತನೆಯನ್ನು ತಿಳಿಯಪಡಿಸುತ್ತಾರೆ.

ಬಾವಲಿಗಳು ಯಾವಾಗಲೂ ತಲೆಕೆಳಗಾಗಿ ನೇತುಕೊಂಡಿರುತ್ತವೆ. ಬಾವಲಿಗಳ ಬಗೆಗೆ ಎಲ್ಲರಿಗೂ ಒಂದು ರೀತಿಯ ಜಿಗುಪ್ಸೆ ಹಾಗೂ ನಿರಾಸಕ್ತಿ ಇದಕ್ಕೆ ಬಹುಶಃ ಅವುಗಳ ಕತ್ತೆ ರೀತಿಯ ಮುಖ. ಪುಕ್ಕಗಳಿಲ್ಲದ ಕರಿಯ ರೆಕ್ಕೆಗಳು, ತಲೆಕೆಳಗಾಗಿ ನೇತು ಹಾಕಿಕೊಳ್ಳುವ ಅಭ್ಯಾಸ ಇವೆಲ್ಲ ಕಾರಣವಿರಬಹುದು.

ನೆಲಕ್ಕೆ ಬಿದ್ದ ಬಾವಲಿಗಳಿಗೆ ನೆಲದಿಂದ ಹಕ್ಕಿಗಳಂತೆ ನೇರವಾಗಿ ಹಾರಲು ಸಾಧ್ಯವಿಲ್ಲ. ಏಕೆಂದರೆ ಅವುಗಳ ಹಿಂಗಾಲುಗಳು ರೆಕ್ಕೆಯ ಅವಿಭಾಜ್ಯ ಅಂಗಗಳಾದ್ದರಿಂದ ಅವುಗಳಿಗೆ ಹಕ್ಕಿಯಂತೆ ಹಾರಲು ಸಾಧ್ಯವಿಲ್ಲ. ನೆಲಕ್ಕೆ ಬಿದ್ದ ಬಾವಲಿ ಹುಳುವಿನ ಹಾಗೆ ತೆವಳುತ್ತಾ ಕೊಂಚ ದೂರ ಹರಿದು ಒಂದು ಚಿಕ್ಕ ಗಿಡ ಹತ್ತಿ ಅಲ್ಲಿಂದ ಹಾರಿ ಹೋಯಿತೆನ್ನುತ್ತಾರೆ ತೇಜಸ್ವಿ ಬಾವಲಿಗಳು ಮಾಂಸಾಹಾರಿಗಳೂ ಸಹ ದಕ್ಷಿಣ ಅಮೇರಿಕಾದ ವ್ಯಾಂಪೈರ್ ಬಾವಲಿಗೆ ಸಜೀವ

ಪ್ರಾಣಿಗಳ ಬಿಸಿರಕ್ತವೇ ಪ್ರಧಾನ ಆಹಾರ, ಪ್ರಾಣಿಗಳೂ ಮನುಷ್ಯರೂ ಮಲಗಿರುವಾಗ ಸದ್ದಿಲ್ಲದೇ ಬಂದು ಕೊಂಚವೂ ನೋವಾಗದಂತೆ ಕುತ್ತಿಗೆಯ ಬಳಿ ಕಚ್ಚಿ ಹೊಟ್ಟೆ ತುಂಬಾ ರಕ್ತ ಕುಡಿದು ಹೋಗುತ್ತವೆ. ಗಾಯದ ರಕ್ತ ಹೆಪ್ಪುಗಟ್ಟದಂತೆ ಒಂದು ರಾಸಾಯನಿಕವನ್ನು ಇದು ರಕ್ತಕ್ಕೆ ಸೇರಿಸುವುದರಿಂದ ಇವು ರಕ್ತ ಕುಡಿದು ಹಾರಿಹೋದ ನಂತರ ಎಷ್ಟೋ ಹೊತ್ತಿನವರೆಗೂ ರಕ್ತ ಧಾರಾಕಾರವಾಗಿ ಹೊರಗೆ ಸೋರುತ್ತಲೇ ಇರುತ್ತದೆ. ನಿದ್ದೆ ಮುಗಿಸಿ ಏಳುವ ವೇಳೆಗೆ ಮಲಗಿದ್ದವ ರಕ್ತದ ಮಡುವಿನಲ್ಲಿ ಬಿದ್ದಿರುತ್ತಾನೆ. ಈ ವ್ಯಾಂಪೈರ್ ಬಾವಲಿಗಳಿಂದ ಹೊರ ಹೊಮ್ಮುವ ಶ್ರವಣಾತೀತ ಶಬ್ದಗಳು ನಾಯಿಗೆ ಕೇಳಿಸುತ್ತದಂತೆ. ಅವು ಕೂಡಲೇ ಎಚ್ಚರಾಗುವುದರಿಂದ ವ್ಯಾಂಪೈರ್‌ಗಳು ಯಾವತ್ತು ನಾಯಿಗಳನ್ನು ಕಚ್ಚುವುದಿಲ್ಲ. ಆದ್ದರಿಂದ ದಕ್ಷಿಣ ಅಮೇರಿಕಾದಲ್ಲಿ ಈ ವ್ಯಾಂಪೈರ್ ಬಾವಳಿಗಳ ಓಡುಗು ಇರುವೆಡೆಗಳಲ್ಲೆಲ್ಲ ಜನ ಮಲಗುವಾಗ ನಾಯಿಗಳನ್ನು ಸನಿಹದಲ್ಲಿ ಮಲಗಿಸಿಕೊಂಡೇ ಇರುತ್ತಾರೆ. ನಾಯಿಗಳು ಬಾವಲಿಗಳು ಬಂದಾಗ ಎಚ್ಚರವಾಗಿ ಗಲಾಟೆ ಮಾಡುವುದರಿಂದ ಅವು ಓಡಿ ಹೋಗುತ್ತವೆ.

ಬಾವಲಿಗಳು ಇಂದು ನಮ್ಮೊಡನಿರುವ ಅತಿ ವಿಚಿತ್ರ ಸಸ್ತನಿಗಳೆಂದು ಹೇಳಬಹುದು. ಸಸ್ತನಿಗಳಲ್ಲಿ ಹಾರು ಬೆಕ್ಕು, ಹಾರುವ ಅಳಿಲು, ಹಾರುವ ಇಲಿಗಳೆಂದು ಕರೆಯುವ ಹಲವಾರು ಪ್ರಾಣಿಗಳಿವೆ.

ಬಾವಲಿಯು ಕೇವಲ ತನ್ನ ರೂಪ ವೈಚಿತ್ರ್ಯದಿಂದ ಮಾತ್ರವೇ ವಿಶಿಷ್ಟವಾದುದಲ್ಲ. ತನ್ನ ಅದ್ವಿತೀಯ ಮತ್ತು ರಹಸ್ಯಮಯ ಚಲನ ಸಾಮರ್ಥ್ಯದಿಂದಲೂ ಅದು ವಿಜ್ಞಾನಿಗಳ ತಲೆಯನ್ನು ಸಾಕಷ್ಟು ಬಿಸಿ ಮಾಡಿತ್ತು. ಜೆಗ್ರಾಫ್ ಎಂಬ ವಿಜ್ಞಾನಿ ಬಾವಲಿಗಳು ಎದುರಿನ ವಸ್ತುಗಳಿಂದ ಶಬ್ಧ ಪ್ರತಿಫಲಿಸುವುದನ್ನು ಗ್ರಹಿಸಿ ಹೊರಪ್ರಪಂಚವನ್ನು ತಿಳಿಯುತ್ತದೆ ಎಂದು ಶೋಧಿಸಿದ.

ಬಾವಲಿಯ ಶ್ರವಣಾತೀತ ತರಂಗಗಳಿಗೆ ಪ್ರತಿಯಾಗಿ ಸಣ್ಣ ಪ್ರಾಣಿ ಕ್ರಿಮಿಕೀಟಗಳಿಗೆ ಪ್ರಕೃತಿ ಹಲವಾರು ರೀತಿಯ ರಕ್ಷಣೆಯನ್ನು ಒದಗಿಸಿದೆ.

ಸುಸ್ಮಿತ ಮತ್ತು ಹಕ್ಕಿ ಮರಿಯಲ್ಲಿ ಅನಾಥವಾಗಿದ್ದ ಹಕ್ಕಿ ಮೊಟ್ಟೆಗಳನ್ನು ಮನೆಗೆ ತಂದು ಪ್ರಯೋಗ ಮಾಡಲು ಹೋಗಿ ವಿನಾಕಾರಣ ತೊಂದರೆಗೆ ಸಿಕ್ಕಿ ಹಾಕಿಕೊಂಡ ವಿಚಾರವನ್ನು ಲೇಖಕರು ತಿಳಿಸುತ್ತಾರೆ.

ಹಕ್ಕಿಗಳ ಫೋಟೋ ತೆಗೆಯಲು ಹೋದಾಗ ಅವು ರೆಕ್ಕೆ ಬಡಿದೋ, ಕುತ್ತಿಗೆ ಅಲ್ಲಾಡಿಸಿಯೋ ಫೋಟೋ ಹಾಳಾಗುತ್ತವೆಂಬ ಕಾರಣಕ್ಕೆ ಬೇಸರಗೊಂಡ ನಿರೂಪಕರು ಹೇಗಾದರೂ ಹಕ್ಕಿಗಳನ್ನೆಲ್ಲ ಸಾಕಿ ಅವುಗಳಿಗೆ ಮನುಷ್ಯರ ಭಯ ಇಲ್ಲದಂತೆ ಬಳಕೆ ಮಾಡಿಕೊಂಡರೆ, ಅನಂತರ ಅವುಗಳ ಫೋಟೋಗಳನ್ನು ಹತ್ತಿರದಿಂದಲೇ ಹೇಗೆ ಬೇಕೋ ಹಾಗೆ ತೆಗೆಯಬಹುದಲ್ಲವೆ ಎಂದು ಯೋಚಿಸುತ್ತಿದ್ದಂತೆಯೇ. ಅವರಿಗೆ ಅವರ ತೋಟದಲ್ಲಿದ್ದ ಪಿಕಳಾರದ ಅಥವಾ ಬುಲ್ ಬುಲ್ ಹಕ್ಕಿಯನ್ನು ಸಾಕುವ ಜವಾಬ್ದಾರಿ ಒದಗಿತು. ಬುಲ್ ಬುಲ್ ಹಕ್ಕಿಗಳಲ್ಲಿ ನೂರಾರು ತರದ ಪ್ರಭೇಧಗಳಿರುತ್ತವೆ. ಅವುಗಳಲ್ಲಿ ಚೂಟ್ಟಿ ಇರುವ ಬುಲ್ ಬುಲ್, ಕೆಂಪು ಮೀಸೆಯ ಬುಲ್ ಬುಲ್ ಹಳದಿ ಕಪಾಲದ ಬುಲ್ ಬುಲ್, ಹೊಂಬಣ್ಣದ ತಲೆಯ ಹಸಿರು ಬುಲ್ ಬುಲ್, ಬಿಳಿಕುತ್ತಿಗೆಯ ಬುಲ್ ಬುಲ್, ಕೆಂಪುಗಲ್ಲದ ಹಳದಿ ಬುಲ್ ಬುಲ್ ಹೀಗೆ ಹಲವಾರು ತರಹದ ಹಕ್ಕಿಗಳು ತೋತದಲ್ಲಿದ್ದವು.

ಒಮ್ಮೆ ಅವರ ತೋತದಲ್ಲಿದ್ದ ಪಿಕ್ಳಾರದ ಹಕ್ಕಿಯು ಮೊಟ್ಟೆಯಿಟ್ಟಿತ್ತು. ಅದರ ತಾಯಿ ಅದರ ಪಕ್ಕದಲ್ಲಿಲ್ಲದ್ದನ್ನು ಕಂಡು ಅದು ಸತ್ತಿರ ಬಹುದೆಂದು ಸಂಶಯಗೊಂಡ ಲೇಖಕರು ತಮ್ಮ ಮಗಳು ಸುಸ್ಮಿತಲ ಬಲವಂತಕ್ಕೆ ಆ ಮೊಟ್ಟೆಗಳನ್ನು ಮನೆಗೆ ತಂದು ಅದನ್ನು ಹಕ್ಕಿಗಳು ತಮ್ಮ ಮೊಟ್ಟೆಗಳಿಗೆ ನೀಡುವ ಶಾಖದ ಪ್ರಮಾಣದ ಅರಿವಿಲ್ಲದಿದ್ದರೂ ನಲ್ವತ್ತು ಕ್ಯಾಂಡ್ಲಿನ ದೀಪದ ಅಡಿ ನೇತುಹಾಕಿದರು. ಈ ಪ್ರಯೊಗದಿಂದ ಮೊಟ್ಟೆಗಳು ಒಡೆದು ಮರಿಯಾಗಬಹುದೆಂಬ ನಂಬಿಕೆ ಇಲ್ಲದಿದ್ದರೂ ಸುಸ್ಮಿತಳ ಬಲವಂತದಿಂದಾಗಿ ಈ ಪ್ರಯೋಗಕ್ಕೆ ಕೈಹಾಕಬೇಕಾಯಿತು. ಒಂದು ದಿನ ಇದ್ದಕ್ಕಿದ್ದಂತೆ ಸುಸ್ಮಿತ ಆ ಮೊಟ್ಟೆಗಳು ಹೊಡೆದು ಮರಿಗಳು ಹೊರ ಬಂದಿರುವುದನ್ನು ಗುರುತಿಸಿ ಹರ್ಷದಿಂದ ಓಡಿ ಬಂದಾಗ ಮತ್ತೊಂದು ಸಮಸ್ಯೆ ಎದುರಾಯಿತು. ಅವುಗಳಿಗೆ ಯಾವ ಆಹಾರವನ್ನು ನೀಡಬೇಕೆಂಬುದು. ಸುಸ್ಮಿತ ಮಗು ಸಹಜ ಮುಗ್ದಸ್ವಭಾವದವಳಾದ್ದರಿಂದ "ಅವಕ್ಕೆ ಊಟ ಬೇಕಾಗಿದೆ" ಎಂದಳು ನಮ್ಮ ಊಟ ಅವಕ್ಕೆ ಕೊಟ್ಟರೆ ಅವು ಸತ್ತೆ ಹೋಗುತ್ತವೆಂದು ಅವಳು ತಿಳಿಸಿ ಹೇಳಿದ ತರುವಾಯ. ಅವುಗಳಿಗೆ ನೀಡಬಹುದಾದ ಆಹಾರ ಯಾವುದೆಂದು ಗೊತ್ತಾಗದೆ ಬಾಳೆಹಣ್ಣನನು ಕಿವಿಚಿ ಲೇಹ್ಯ ಮಾಡಿದಂತೆ ಮಾಡಿ ಚಮಚದಲ್ಲಿ ಹಾಕಿದರು. ಆಗ ಆ ಬಾಳೆಹಣ್ಣಿನ ಲೇಹ್ಯವನ್ನು ನುಂಗಲಾರದ, ತ್ರಾಣವಿಲ್ಲದ ಅವು ಸತ್ತು ಹೋದವು ಇದರಿಂದ ಸುಸ್ಮಿತಳ ಮುಗ್ದ ಮನಸ್ಸಿಗೆ ಬೇಸರವಾದಂತೆ ಕಂಡು ಬಂದಿತೆನ್ನುತ್ತಾರೆ.

ಇನ್ನೊಮ್ಮೆ ಲೇಖಕರು ಟುಪ್ಪಿ ಹಕ್ಕಿಯನ್ನು ಸಾಕಬೇಕಾದ ಪರಿಸ್ಥಿತಿ ಬಂದಿತು. ಲೇಖಕರ ಮನೆಯ ಎದುರಿದ್ದ ಹಲಸಿನ ಮರದ ಕೊಂಬೆ ಮುರಿದು ಅದರಲ್ಲಿದ್ದ ಟುಪ್ಪಿ ಹಕ್ಕಿಯ ಮರಿಗಳು ಕೆಳಗೆ ಬಿದ್ದಿದ್ದವು ಆದರೆ ಈ ಬಾರಿ ಅದನ್ನು ಅದರ ತಾಯಿಯೇ ಬಂದು ನೋಡಲೆಂದು ಮುಟ್ಟಲಿಲ್ಲ. ಆದರೆ ತಾಯಿ ಹಕ್ಕಿ ಬಂದರೂ ತನಗೆ ಪ್ರಾಣಾಪಾಯವಿದೆಯೆಂಬ ಭಯದಿಂದ ಹಾರಿಹೋಯಿತು. ಅವುಗಳನ್ನು ಮನೆಗೆ ತಂದು ಈ ಭಾರಿ ಮೊಟ್ಟೆಯ ಒಳಗಿನ ಬಿಳುಪನ್ನು ಇವುಗಳಿಗೆ ಆಹಾರವಾಗಿ ಚಿಮ್ಮಟದಲ್ಲಿ ನೀಡಿ ಬೆಳೆಸಲಾಯಿತು. ಆದರೆ ಇವುಗಳು ಅಹಾರವನ್ನು ಸ್ವೀಕರಿಸಿದರೂ ಸ್ವತಂತ್ರಯವಾಗಿ ತಮ್ಮ ಆಹಾರವನ್ನು ಸ್ವೀಕರಿಸುವ, ಹಾರುವ , ಕೊಕ್ಕಿನಿಂದ ಕುಕ್ಕಿ ತಿನ್ನುವ ಪ್ರಯತ್ನವನ್ನೇ ಮಾಡಲಿಲ್ಲ. ತಾಯಿ ಹಕ್ಕಿ ಇದ್ದಿದ್ದರೆ ಅವುಗಳಿಗೆ ಅವುಗಳ ಜೀವನದ ರೀತಿಯನ್ನು ತಿಳಿಸುತ್ತಿತ್ತು. ಸ್ವಲ್ಪ ದಿನದ ಬಳಿಕ ಅವೂ ಸತ್ತು ಹೋದವು.

ಇದೆಲ್ಲಾ ನೋಡಿದರೆ ಈ ಪ್ರಕೃತಿ ನಮ್ಮ ಊಹೆಗೂ ನಿಲುಕದ ಎಂಥ ಜಟಿಲವಾದ ಜಾಲ ಎಂದು ಅಚ್ಚರಿಯಾಗುತ್ತದೆ. ನಾನು ಇನ್ನು ಆ ಕಾಡಿನ ಜೀವಿಗಳ ತಂಟೆಗೆ ಹೋಗಬಾರದೆಂದು ಆಖೈರಾಗಿ ನಿರ್ಧರಿಸಿದೆ. ಕಾಡಿನ ಜೀವ ಸಂಕುಲದೊಳಗೆ ನಾವು ಕೈಹಾಕಿದರೆ ಸಾಕು, ಅದು ಸಹಾಯ ಹಸ್ತವಾದರೂ ಅವುಗಳ ನಾಶ ತಪ್ಪಿದ್ದಲ್ಲವೆಮದು ಮನದಟ್ಟಾಯ್ತೆಂದು ಹೇಳುತ್ತಾರೆ.

ಸುಸ್ಮಿತ ಮತ್ತು ಹಕ್ಕಿಮರಿ ಕತೆಯಲ್ಲಿ ಪಕ್ಷಿಲೋಕವು ಮನುಷ್ಯ ಲೋಕಕ್ಕಿಂತ ಹೇಗೆ ಭಿನ್ನವಾಗಿದೆಯೆಂದು ತಿಳಿಸುತ್ತಾ, ಪಕ್ಷಿಗಳ ಬದುಕಿನಲ್ಲಿ ಮನುಷ್ಯನು ಹಸ್ತಕ್ಷೇಪ ಮಾಡಿದರೆ ' ಏನಾಗಬಹುದು ಎಂಬುದರ ವಿಶ್ಲೇಷಣೆ ಇದೆ.

ಇ. ಕೀಟಗಳ ಪ್ರಪಂಚ:

ತೇಜಸ್ವಿ ತಮ್ಮ ಸುತ್ತ ಮುತ್ತಲಿನ ಪಶು ಪಕ್ಷಿ, ಕ್ರಿಮಿ ಕೀಟಗಳನ್ನು ನೋಡಿ ಅವುಗಳ ವ್ಯಕ್ತಿತ್ವವನ್ನು ಅಭ್ಯಾಸ ಮಾಡಿ ಅವುಗಳನ್ನು ಸ್ವಾನುಭವಕ್ಕೆ ಇಳಿಸಿದ್ದಾರೆ. ನಮ್ಮ ವಿದ್ಯಾಭ್ಯಾಸ ಕ್ರಮ, ಔದ್ಯಮಿಕ ನಾಗರೀಕತೆ, ನಗರ ಪರಿಸರಗಳು, ಮನುಷ್ಯನನ್ನು ಪ್ರತ್ಯೇಕಿಸಿ, ಏಕಾಂಗಿಯನ್ನಾಗಿ ಮಾಡುತ್ತದೆ. ಈ ಒಂಟಿತನದಿಂದ ಮಕ್ಕಳನ್ನು ಬಿಡುಗಡೆ ಮಾಡಿ ತಮ್ಮೊಡನೆ ಹುಟ್ಟಿದ ಅಸಂಖ್ಯೆ ಜೀವ ಜಾಲ. ನಡುವೆ ತಮ್ಮನ್ನು ಗುರುತಿಸಿ ಕೊಳ್ಳುವಲ್ಲಿ ಈ ಕೃತಿ ನಮಗೆ ನೆರವು ನೀಡುತ್ತದೆ.

ಕಾಡಿನಲ್ಲಿ ಬರುತ್ತಿರುವಾಗ ಅರಣ್ಯದ ಶೂನ್ಯ ವಾತಾವರಣ ಅವರಿಗೆ ಬೋರ್ ಎನಿಸುತ್ತದೆ. ಆ ಸಂದರ್ಭದಲ್ಲಿಯೇ ಅಲ್ಲಿನ ಒಂದು ಮರದ ಕೆಳಗೆ ಕಾಣುವ ಬೀಡಗಳನ್ನು ಕಂಡು ಅವರು ಆಶ್ಚರ್ಯಗೊಳ್ಳುತ್ತಾರೆ. ಅದನ್ನುಯಾವುದೇ ಕೀಟ, ಹುಳು ಕಟ್ಟುತ್ತಿರಬಹುದೆಂಬ ಅನುಮಾನದಿಂದ ಅದರ ರಹಸ್ಯವನ್ನು ಬೇಧಿಸಲು ಬಯಸುತ್ತಾರೆ.

"ಬೋರಾಗುತ್ತದೆಂದು ಗೊಣಗುತ್ತಾ ಮರದ ಕೆಳಗೆ ಕುಳಿತವನಿಗೆ ಇದ್ದಕ್ಕಿದ್ದಂತೆ ಒಂದು ಮಹಾರಹಸ್ಯವು, ಒಗಟು ಎದುರಾಗಿತ್ತು." ಬೆಳವಾಡಿಯವರೊಂದಿಗೆ ಕೂಡಿ ಅದು ಯಾವ ಕೀಟದ ಕಾರ್ಯವೆಂದು ಪರೀಕ್ಷಿಸಲು ಅದನ್ನು ಪ್ರಯೋಗ ಶಾಲೆಗೆ ನೀಡಲಾಯಿತು. ಕೆಲವು ದಿನಗಳ ಅನಂತರ ಅದರಿಂದ ಕೆಂಪು ರೆಕ್ಕೆಯ ವಿಚಿತ್ರ ಕುತ್ತಿಗೆಯ ಒಂಟೆಯಾಕಾರದ ಮಿಡತೆಗಳು ಈಚೆಗೆ ಬಂದವು, ಇವುಗಳ ಗರಟದ ಚಿಪ್ಪಿನಂತೆ ಗಟ್ಟಿಯಾಗಿರುವ ಇದರ ರೆಕ್ಕೆಗಳ ಹೊರಕವಚದ ದೆಸೆಯಿಂದಲೇ ಈ ಹುಳುಗಳಿಗೆ ಓಡು ಹುಳುಗಳೆಂದು ಕರೆಯುತ್ತಾರೆ.

ಒಂಟೆ ಹುಳು ಬೀಡ ಕಟ್ಟುವ ರೀತಿಯನ್ನು ತೇಜಸ್ವಿ ಹೀಗೆ ವಿವರಿಸುತ್ತಾರೆ.

"ಮೊದಲು ಹುಳು ಬಂದು ಕುಳಿತು ಎಲೆ ಸುತ್ತ ಸುತ್ತಾಡಿ ಅದರ ವಿಸ್ತೀರ್ಣ ಸರಿ ಇದೆಯೆ ನೋಡುತ್ತದೆ. ಆ ಮೇಲೆ ತೊಟ್ಟಿನ ಬಳಿ ಎಲೆಯನ್ನು ಮಧ್ಯೆ ದಿಂಡು ಮಾತ್ರ ಉಳಿಸಿ ಕತ್ತರಿಸುತ್ತವೆ. ಹೀಗೆ ಮಾಡುವುದರಿಂದ ಎಲೆಗಳಿಗೆ ಗಿಡದಿಂದ ಒದಗುತ್ತಿದ್ದ ಸಸ್ಯ ರಕ್ತ ಬರುವುದು ನಿಲ್ಲುತ್ತದೆ. ಕತ್ತರಿಸಿದ ಹತ್ತು ನಿಮಿಷ ಹುಳು ದೂರ ಹೋಗಿ ಕುಳಿತಿರುತ್ತದೆ. ಆಗ ಬಿಸಿಲಿನ ಬೇಗೆಗೆ ಎಲೆ ವೇಗವಾಗಿ ಬಾಡುತ್ತದೆ. ಬಟ್ಟೆಯಂತೆ ಮೆತ್ತಗಾಗಿ ಎಲೆ ಹೇಗೆ ಬೇಕೋ ಹಾಗೆ ಮಡಚಲು ಬರುತ್ತದೆ. ತಾವಾಗಿಯೇ ಬಾಡಿ ಮುದುಡಿಕೊಳ್ಳುತ್ತಿದ್ದ ಎಲೆಯನ್ನು ದಿಂಡಿನ ಬಳಿ ನಾಲ್ಕು ಕಾಲುಗಳಿಂದಲೂ ಮಡಿಚುತ್ತವೆ. ತುದಿಯಿಂದ ಎರಡು ಸುರುಳಿ ಸುತ್ತಿ ಆ ಸುರಳಿಯೊಳಗೆ ಒಂದು ಚಿಕ್ಕ ರಂಧ್ರ ಕೊರೆದು ಅದರೊಳಗೆ ಮೊಟ್ಟೆ ಇಡುತ್ತದೆ. ಆ ಮೇಲಿಂದ ಬೀಡಾ ಮಾಡಲು ಒಂಟಿ ಹುಳುಗಳಿಗೆ ಕೆಲವೇ ಸೆಕೆಂಡುಗಳು, ಎಲೆಯನ್ನು ಸರಸರ ಬೀಡಿ ಸುತ್ತಿದ ಹಾಗೆ ಸುತ್ತಿ ಎಲೆ ವಾಪಾಸ್ ಬಿಚ್ಚಿಕೊಳ್ಳದ ಹಾಗೆ ಮೇಲೆ ಕೆಳಗೆ ಮಡಚಿ ಸುರಳಿಯೊಳಗೆ ಸಿಕ್ಕಿಸುತ್ತದೆ. ಗಿಡದ ಮೇಲಿರುವುದಕ್ಕಿಂತ ಕೆಳಗೆ ಕಸದ ರಾಶಿಯಲ್ಲಿದ್ದರೆ ಮರಿಗಳಿಗೆ ಹೆಚ್ಚು ಕ್ಷೇಮ ಎಂದೋ ಏನೋ ಬೀಡಾ ಬಂದೋಬಸ್ತಾಗಿ ಕಟ್ಟಿಯಾಗಿ ಮೇಲೆ ಎಲೆಯ ದಿಂಡನ್ನು ಕತ್ತರಿಸಿ ಬೀಡಾವನ್ನು ಕೆಳಗೆ ಉದುರಿಸಿ ಬಿಡುತ್ತದೆ.

ಇದೇನೂ ಯಾರೂ ಕಂಡಿಲ್ಲದ ಪವಾಡವೇನಲ್ಲ ಬಹುಶಃ ಕೀಟ ಶಾಸ್ತ್ರದ ಪುಸ್ತಕ ಹುಡಿಕಿದರೆ ಈ ವಿವರಗಳೆಲ್ಲ ಸಿಗುತ್ತಿತ್ತೋ ಏನೋ, ಆದರೆ ಜೀವನದಲ್ಲಿ ಇವನ್ನು ಸಂಧಿಸುವುದಕ್ಕೂ ಪುಸ್ತಕ ಓದುವುದಕ್ಕೂ ವ್ಯತ್ಯಾಸವಿರುತ್ತದೆ.

ಏರೋಪ್ಲೇನ್ ಚಿಟ್ಟೆಯ ಬಗೆಗೆ ಬರೆಯುತ್ತಾ ತೇಜಸ್ವಿ ಹಾರುವ ಚಿಟ್ಟೆಗಳೆಲ್ಲಾ ಹೂವಿನ ಮರದಿಂದ ಹೀರುವ ಜೀವಿಗಳೆಂದು ತಿಳಿದಿದ್ದ ನಾವು ಈ ಮಾಂಸಾಹಾರಿ ಚಿಟ್ಟೆಗಳನ್ನು ನೋಡಿ ಚಕಿತರಾದೆವು. ಏರೋಪ್ಲೇನ್ ಚಿಟ್ಟೆ ಕೆರೆಯ ನೀರೊಳಗಿನಿಂದ ಒಂದು ವಿಚಿತ್ರವಾದ ಹುಳು ಜೊಂಡು ಹುಲ್ಲಿನ ಮೇಲೆ ಹಕ್ಕಿ ಬಂತು. ನೋಡಲು ರೆಕ್ಕೆ ಇಲ್ಲದ ದೊಡ್ಡ ನೊಣದಂತೆ ಕಾಣುತ್ತಿತ್ತು ನಾನು ಯಾವುದೋ ನೀರೊಳಗೆ ಬಿದ್ದಿದ್ದ ಹುಳು ಮೇಲಕ್ಕೆ ಹತ್ತಿ ಬರುತ್ತಿದೆ ಎಂದೇ ತಿಳಿದೆ ಕೊಂಚ ದೂರ ಹತ್ತಿದ ಹುಳು ಜೊಂಡಿನ ಎಲೆಯನ್ನು ಭದ್ರವಾಗಿ ಹಿಡಿದು ನಿಂತಿತು. ಕೆಲವು ಸಮಯದ ನಂತರ ಅದರ ಬೆನ್ನಿನ ಭಾಗದ ಚರ್ಮ ಪಟ್ಟನೆ ಸೀಳಿ ಇನ್ನೊಂದು ಹುಳು ಅದರೊಳಗಿಂದ ಹೊರಗೆ ತಲೆಹಾಕಿತು ಹುಳದೊಳಗಿಂದ ಹುಳು ಬರುವ ಈ ಭಯಾನಕ ದೃಶ್ಯ ನೋಡುಗರಿಗೆ ಆಶ್ಚರ್ಯವನ್ನುಂಟು ಮಾಡುವಂತಿತ್ತು. ಚಿಟ್ಟೆಗಳಲ್ಲಿರುವಂತೆ ಈ ಮರಿಗಳು ಕೋಶಾವಸ್ಥೆಗೆ ಹೋಗಿ ಚಿಟ್ಟೆಗಳಾಗಿ ರೂಪಾಂತರ ಹೊಂದುವುದಿಲ್ಲ. ಏರೋಪ್ಲೇನ್ ಚಿಟ್ಟೆಮರಿ ನೀರಿನಿಂದ ಹೊರಬಂದ ಕೂಡಲೇ ಒಳಗೆ ಆಗಲೇ ರೂಪಗೊಂಡು ಹುದುಗಿರುವ ಚಿಟ್ಟೆ ಮರಿಯ ಬೆನ್ನ ಮೇಲಿನ ಚರ್ಮ ಒಡೆದು ಅದರೊಳಗಿಂದ ತೆವಳಿ ಹೊರ ಬಂದು ಹಾರುತ್ತದೆ. ನಾಲ್ಕು ವರ್ಷಗಳವರೆಗೆ ಬೆಳೆಯುವ ಮರಿ ಚಇಟ್ಟೆಯಾದ ನಂತರ ಜೀವಿಸಿರುವುದು ಕೇವಲ ಒಂದೆರಡು ತಿಂಗಳಷ್ಟೆ. ಇವುಗಳ ಜೀವನ ಶೈಲಿಯೂ ಉಳಿದ ಚಿಟ್ಟೆಗಳಿಗಿಂತ ತೀರಾ ಭಿನ್ನವಾಗಿರುತ್ತವೆ.

ಇವುಗಳ ಬದುಕಿನ ಚಿತ್ರಣವು ಸೃಷ್ಟಿಯ ಅದ್ಭುತಗಳನ್ನು ಕಂಡು ಆಶ್ಚರ್ಯವನ್ನುಂಟು ಮಾಡುತ್ತವೆ. ಪ್ರತಿಯೊಂದು ಜೀವಿಯು ತನ್ನದೇ ಆದ ಪರಿಧಿಯಲ್ಲಿ ಜೀವನ ಸಾಗಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ.

ಕ್ರಿಮಿ ಕೀಟಗಳಿಗೂ ಅವುಗಳಿಗೆ ಅಗತ್ಯವಾದ ಗೂಡುಗಳನ್ನೂ ಮನೆಗಳನ್ನು ರಚಿಸಿಕೊಳ್ಳುವ ವಾಸ್ತುಜ್ಞಾನ ಶಿಲ್ಪವಿದೆ ಎಂಬುದನ್ನು ರೇಷ್ಮೆ ಹುಳುವನ್ನು ತಂದು ಅದು ಗೂಡು ಕಟ್ಟುವ ಸಂದರ್ಭವನ್ನು ಕಂಡು ತೇಜಸ್ವಿಯವರು ಕ್ರಿಮಿ ಕೀಟಗಳಿಗೂ ಯೋಚನಾ

ಸಾಮರ್ಥ್ಯವಿದೆ. ಅವೂ ಸಹ ಉದ್ದೇಶ ಪೂರ್ವಕವಾಗಿಯೇ ಬದುಕುತ್ತಿವೆ ಎನ್ನುವ ಪ್ರಕೃತಿಯ ಹೊಸ ಆಯಾಮವನ್ನು ಗುರುತಿಸಿದರು. ಪರಿಸರದಲ್ಲಿ ಬದುಕಿ ಉಳಿಯಲು ಬಗೆಬಗೆಯ ಉಪಾಯಗಳನ್ನು ಅನುಸರಿಸಿ ಗೂಡುಗಳನ್ನು ಕಟ್ಟಿಕೊಂಡು ಆ ಗೂಡುಗಳನ್ನೇ ಹೊತ್ತುಕೊಂಡು ಮುಳ್ಳುಗಳೆಡೆಯಲ್ಲಿ ಮುಳ್ಳಿನ ಹಾಗೆ ನಟಿಸುತ್ತವೆ. ಹುಳುಗಳು ಮಳೆ ಗಾಳಿ ಬಿಸಿಲುಗಳಿಂದ ರಕ್ಷಣೆ ಪಡೆಯುವುದಕ್ಕಷ್ಟೇ ಅಲ್ಲದೆ ಪರಿಸರದ ಬಣ್ಣ ಆಕಾರಗಳಲ್ಲಿ ವಿಲೀನವಾಗಲೂ, ತಮ್ಮ ಅಪರಿಚಿತ ಸ್ವರೂಪವನ್ನು ಮರೆಸಿಕೊಳ್ಳಲು, ತಮ್ಮ ವಾಸ್ತು ಶಿಲ್ಪವನ್ನು ಉಪಯೋಗಿಸುತ್ತವೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಹುಳುಕಡಿ ಅಥವಾ ಕಡ್ಡಿ ಹುಳು " ಗಿಡಗಳೆಡೆಯಲ್ಲಿ ನೇತಾಡುತ್ತಿರುವ ಇವನ್ನು ನೋಡಿದರೆ ಮುರುಕಲು ಕಡ್ಡಿಯಂತೆಯೇ ಕಾಣುತ್ತದೆ. ಈ ಕಡ್ಡಿಗಳ ಕೋಶದೊಳಗಿರುವ ಹುಳುಗಳನ್ನು ಹೊರಗೆಳೆದು ತಿನ್ನಲು ಇತರ ಜೀವಿಗಳಿಗೆ ಸಾಧ್ಯವೇ ಇಲ್ಲ.

ಹೀಗೆ ಈ ರೀತಿಯ ತಂತ್ರಗಳನ್ನು ಉಪಯೋಗಿಸಿ ತಮ್ಮ ಇರುವಿಕೆಯನ್ನು ಮರೆಮಾಚಿಕೊಳ್ಳುವ ಹುಳುಗಳು ಒಂದೆರಡಲ್ಲಿ ಸಾವಿರಾರಿವೆ. ಮನುಷ್ಯನಂತೆಯೇ ಪ್ರಾಣಿ, ಪಕ್ಷಿ, ಕ್ರಿಮಿ ಕೀಟಗಳಿಗೂ ತಮ್ಮ ಆಪತ್ ಕಾಲದಲ್ಲಿ ತಮ್ಮನ್ನು ರಕ್ಷಿಸಿಕೊಳ್ಳಲು ಹಲವಾರು ತಂತ್ರಗಳನ್ನು ಅವು ಹೊಂದಿರುವುದನ್ನು ಗಮನಿಸುತ್ತೇವೆ.

ಜೇಡರ ಹುಳುಗಳು ಎಲ್ಲೋ ಅಲ್ಲಲ್ಲಿ ಇವು ಇರುತ್ತವೆ. ಎನ್ನುವ ನಮ್ಮ ಸಾಮಾನ್ಯ ಗ್ರಹಿಕೆ ತೀರಾ ತಪ್ಪು ಗಾಳಿಗಿಂತಲೂ ಹಗುರವಾದ, ಗಾಜಿಗಿಂತ ಪಾರದರ್ಶಕವಾದ , ಕೂದಲಿಗಿಂತಲೂ ಎಷ್ಟೋ ಪಾಲು ಸೂಕ್ಷ್ಮವಾದ ಇವುಗಳು ಅಗೋಚರವಾದವುಗಳಾಗಿವೆ. ಜೇಡರ ಜಾಲವು ಜೇಡರ ಹುಳುಗಳ ಜೀವನದಲ್ಲಿ ಅತಿ ವಿಶಿಷ್ಟ ಪಾತ್ರ ವಹಿಸುತ್ತವೆ. ವಾಸ್ತವವಾಗಿ ಇವು ಜೇಡರ ಹುಳುಗಳ ಭಾಷೆ, ಕೈ, ಕಾಲು, ಅವುಗಳು ಚಲಿಸುವ ಕಂಬಿ, ಪ್ರಣಯ, ವಿಧಾನ ಮುಂತಾದ ಪ್ರತಿಯೊಂದೂ ಆಗಿದೆ. ಅದು ಬಲೆಯನ್ನು ಸಂದರ್ಭಗಳಿಗೆ ಅನುಗುಣವಾಗಿ ನೇಯುವುದನ್ನು ಗುರುತಿಸುತ್ತೇವೆ. ಬಲೆಗೆ ಬಿದ್ದ ಕೀಟವನ್ನು ಬಂಧಿಸಲು ಒಂದು ರೀತಿ, ನೂಲೇಣಿಯ ಪ್ರಯಾಣಕ್ಕೆ ಒಂದು ರೀತಿ, ಅಂತರಾಳದಲ್ಲಿ ತೇಲುವ ಬಲೆ ನೇಯಲು ಒಂದು ರೀತಿ.

ಜೇಡರ ಹುಳುಗಳಲ್ಲಿ ನಲ್ವತ್ತು ಸಾವಿರ ಜಾತಿಗಳಿವೆ ಮಲೆನಾಡಿನ ಚಿಕ್ಕಮಟ್ಟ ಕಪ್ಪೆಗಳನ್ನೂ ಹಿಡಿದು ಹಾಕಿ ಬಿಡುವಷ್ಟು ದೊಡ್ಡ ದೊಡ್ಡ ಜೇಡಗಳಿವೆ. ಇವು ಸಾಧಾರಣವಾಗಿ ಕೀಟಗಳನ್ನು ತಿನ್ನುವುದಿಲ್ಲ ತಮ್ಮ ಬಾಯಲ್ಲಿ ಉತ್ಪತ್ತಿಯಾಗುವ ಒಂದು ಬಗೆಯ ವಿಶಿಷ್ಟ ವಿಷವನ್ನು ಅವುಗಳಿಗೆ

ಚುಚ್ಚಿದಾಗ ಆ ಕೀಟಗಳ ಅಂಗಾಗಳಲ್ಲಿ ಕರಗಿ ದ್ರವವಾಗುತ್ತಿವೆ. ಇದನ್ನು ಜೇಡರ ಹುಳು ನಾವು ಏಳನೀರು ಕುಡಿಯುವಂತೆ ಅದನ್ನು ಹೀರಿ ಬಿಡುತ್ತದೆ.

ನಾವು ವೈಜ್ಞಾನಿಕವಾಗಿ ಈಗೀಗ ಸಾಧಿಸಲು ಸಾಧ್ಯವಾಗಿರುವ ಅನೇಕ ಕೌತುಕಗಳನ್ನು ಈ ಕೀಟಗಳು ತಮ್ಮದೇ ಆದ ರೀತಿಯಲ್ಲಿ ಎಂದಿನಿಂದಲೋ ಸಾಧಿಸಿರುವುದು ಒಂದು ವಿಚಿತ್ರವೇ ಸರಿ.

ಈ. ಜಲಚರ ಹಾಗೂ ಸರಿಸೃಪಗಳ ಪ್ರಪಂಚ:

ಚೀಂಕ್ರ ಮತ್ತು ಮೇಸ್ತ್ರಿ ಕತೆಯಲ್ಲಿ ಚೀಂಕ್ರ ಮೇಸ್ತ್ರಿ ನಿರೂಪಕನಿಗೆ ಹಾವು ಮೀನುಗಳ ಬಗ್ಗೆ ಸ್ವಾನುಭವದ ಮೂಲಕ ಅನೇಕ ಮುಖ್ಯ ಸಂಗತಿಗಳನ್ನು ತಿಳಿಸಿಕೊಡುತ್ತಾನೆ. ಈ ಮೀನಿನ ದೆಸೆಯಿಂದ ಅದನ್ನು ಹಿಡಿಯಲು ಗಾಳ ಹಾಕಿದ್ದ ಮಗನನ್ನು ಆ ಹಾವು ಹೇಗೆ ಬಲಿತೆಗೆದು ಕೊಂಡಿತೆಂಬುದನ್ನೂ ನಿರೂಪಿಸುತ್ತಾನೆ. ಮುಂದೆ ನಿರೂಪಕ ಹಾವು ಮೀನುಗಳ ಬಗ್ಗೆ ತಿಳಿದುಕೊಳ್ಳಲು ಅರಿಸ್ಟಾಟಲ್‌ನಿಂದ ಪ್ರಾರಂಭಿಸಿ ಹಲವು ವಿಜ್ಞಾನಿ ಸಂಶೋಧಕರ ನೆರವು ಪಡೆಯುತ್ತಾರೆ. ಹಾವು ಮೀನಿನ ಪ್ರಚಂಡಯಾನ ಎಂಬ ಲೇಖನದಲ್ಲಿ ಈ ಕುರಿತಂತೆ ಲೇಖಕರು ಹಲವು ಸ್ವಾರಸ್ಯಕರ ವಿದ್ಯಮಾನಗಳನ್ನು ನಮ್ಮ ಮುಂದಿಡುತ್ತಾರೆ.

ತೇಜಸ್ವಿಯವರು ತಮ್ಮ ತಂದೆಯ ಬಳಿ ಹಾವು ಮೀನಿನ ವಿಚಾರವನ್ನು ಕೇಳಿದಾಗ ಅವರು ಹೇಳಿದ ವಿವರಗಳು ಚೀಂಕ್ರ ಹೇಳಿದ ಮಾದರಿಯಲ್ಲಿಯೇ ಇತ್ತು ಎಂಬುದನ್ನು ತಿಳಿಸುತ್ತಾರೆ.

ಒಮ್ಮೆ ಕುವೆಂಪುರವರ "ನೆನಪಿನ ದೋಣಿ" ಗ್ರಂಥ ಓದುತ್ತ ಅವರು ಚಿಕ್ಕವರಿದ್ದಾಗ ಭಾರಿ ದೊಡ್ಡ ಹಾವು ಮೀನು ಹಿಡಿದ ಘಟನೆ ಓದಿದೆ. ಕುತೂಹಲದಿಂದ ಅವರ ಬಳಿ ಹೆಬ್ಬಾವಿನಿಂದ ಹಾವು ಮೀನಿನ ಬಗ್ಗೆ ಏನಾದರೂ ಗೊತ್ತ ಎಂದು ಕೇಳಿದೆ. "ನಾವು ಚಿಕ್ಕವರಿದ್ದಾಗ ಕೇಳಿದ್ದೆವು ಅಷ್ಟೆ. ಅದು ನದಿಗಳ ಹತ್ತಿರದ ಮನೆಗಳಿಗೆ ರಾತ್ರಿ ಬಂದು ಕೋಳಿ ಹಿಡಿಯುತ್ತದಂತೆ! ಓಡಿಸುತ್ತ ಬೂದಿ ಹಾಕಿದರೆ ಅದು ಸಿಕ್ಕಿ ಬೀಳುತ್ತದೆ. ಅನ್ನುತ್ತಿದ್ದರು". ಎಂದು ಹೇಳಿದರು. ಚೀಂಕ್ರ ಹೇಳಿದ ವೃತ್ತಾಂತವನ್ನೆ ತದ್ವತ್ತಾಗಿ ತಂದೆಯವರೂ ಹೇಳಿದ್ದರು.

ಹಾವು ಮೀನುಗಳ ಜೀವನ ಕ್ರಮಕ್ಕೂ ಇಡೀ ಭೂಮಂಡಲ, ಗತ ಇತಿಹಾಸಕ್ಕೂ ಸಂಬಂಧ ಇರುವುದು ಕಂಡು ಬಂತು ಚೀಂಕ್ರ ಮೇಸ್ತ್ರಿ ಮಗ ಹಾವು ಜಮೀನಿಗೆ ಹೆದರಿ ಪ್ರಾಣ ಬಿಟ್ಟಿದ್ದರಿಂದ ಉದ್ಭವಿಸಿದ ನನ್ನ ಕುತೂಹಲ ಸರ್ಗಾಸೋ ಸಮುದ್ರದವರೆಗೂ ತೇಲಿ ಬಂದಿದ್ದೆ? ಒಂದು ಆಶ್ಚರ್ಯವೆನ್ನುತ್ತಾರೆ ತೇಜಸ್ವಿ

ಭೂಮಿಯ ಇತಿಹಾಸ, ಯಾವುದೋ ಒಂದು ಹಂತದಲ್ಲಿ ನಾವು ಹಾವು ಮೀನುಗಳ ಜೀವನ ಚರಿತ್ರೆ ಗಮನಿಸುತ್ತಿದ್ದೇವೆ. ಹಾಗಾಗಿ ಮನಗೆ ಇದು ಆಶ್ಚರ್ಯಕರವಾಗಿ ಕಾಣುತ್ತಿದೆ. ಆದರೆ ಹಾವು ಮೀನುಗಳು ಅನೇಕ ಮಿಲಿಯ ವರ್ಷಗಳಿಂದ ಸರ್ಗಾಸೋ ಸಮುದ್ರಕ್ಕೆ ಮರಿ ಮಾಡಲು ಹೋಗುತ್ತಿವೆ ಎನ್ನುವುದನ್ನು ನಾವು ಮರೆಯಬಾರದು.

ಸರ್ಪದೃಷ್ಟಿ ಕತೆಯಲ್ಲಿ ತೇಜಸ್ವಿ ಹಾವುಗಳ ಜೀವನ ಕ್ರಮವನ್ನು ಚಿತ್ರಿಸುತ್ತಾರೆ. ಹಾವುಗಳಿಗೆ ನಾಲ್ಕು ಮೂಗುಗಳಿವೆ ಎಂದು ಜನರ ಕಲ್ಪನೆಯಾಗಿತ್ತು. ಆದರೆ ನಲ್ವತ್ತು ವರ್ಷಗಳ ಹಿಂದೆ ಜೀವ ಶಾಸ್ತ್ರಜ್ಞನೊಬ್ಬ ಈ ಹಾವುಗಳ ಮೇಲೆ ಆಳವಾದ ಸಂಶೋಧನೆ ನಡೆಸಿ ಈ ರಂಧ್ರಗಳು ಮೂಗಿಗಾಗಲಿ ಕಣ್ಣಿಗಾಗಲಿ ಸಂಬಂದಿಸಿಯೇ ಇಲ್ಲ ಎಂದು ಪತ್ತೆ ಮಾಡಿದ, ಈ ಎರಡು ಹೊಳ್ಳೆಗಳು ಅವುಗಳ ಮಿದುಳಿನೊಂದಿಗೆ ನೇರ ಸಂಪರ್ಕ ಹೊಂದಿರುತ್ತವೆ ಎಂಬುದಾಗಿ ತಿಳಿಸಿದರು. ಹಾವುಗಳೆಲ್ಲ ಬಹುಪಾಲು ರಾತ್ರಿ ಶಿಕಾರಿ ಮಾಡುವ ನಿಶಾಚರ ಜೀವಿಗಳು, ಇವು ಬಹುಪಾಲು ರಾತ್ರಿ ಶಿಕಾರಿ ಮಾಡುವ ನಿಶಾಚರ ಜೀವಿಗಳಾದ್ದರಿಂದ ದೃಷ್ಟಿ ಮತ್ತು ವಾಸನಾ ಸಾಮರ್ಥ್ಯ ಅವಕ್ಕಿಲ್ಲದಿದ್ದರೂ ಬಿಸಿ ರಕ್ತದ ಪ್ರಾಣಿಗಳನ್ನು ತಮ್ಮ ಆರನೆಯ ಇಂದ್ರಿಯದ ಸಹಾಯದಿಂದ ಕರಾರುವಕ್ಕಾಗಿ ನೋಡಿ ಅವುಗಳನ್ನು ಬೇಟೆಯಾಡುತ್ತಿದ್ದವು.

ತೇಜಸ್ವಿಯವರು ತಮ್ಮ ಹಲವಾರು ಕತೆಗಳಲ್ಲಿ ಹಾವುಗಳ ಬಗೆಗೆ ಪ್ರಸ್ತಾಪ ಮಾಡುತ್ತಾರೆ. ತಾವೂ ಹಾವುಗಳನ್ನು ಹೊಡೆದು ಕೊಂಡ ವಿಚಾರಗಳನ್ನು ಹಾಗೂ ವಿಂಗ್ಲನು ಹಾವಿನಿಂದಾಗಿಯೇ ಸಪತ್ತ ವಿಚಾರವನ್ನು ತಿಳಿಸುತ್ತಾರೆ ಹಾಗೂ ಕಾಳಪ್ಪನ ಅವಾಂತರದಿಂದ ಹಾವು ಕೋಟ್ರವಾಗಿ ಮಾರ್ಪಟ್ಟ ವಿಚಾರಗಳನ್ನು ತಿಳಿ ಹಾಸ್ಯದೊಂದಿಗೆ ವಿವರಿಸುತ್ತಾರೆ.

ನುಂಗಲಾರದ ತುತ್ತು ಕತೆಯಲ್ಲಿ ಹೊತ್ತು ತೆವಳಲೂ ಸಾಧ್ಯವಾಗದ ತುತ್ತನ್ನು ನುಂಗಿ ಹಾವು ಪ್ರಾಣ ಸಂಕಟಕ್ಕೆ ತುತ್ತಾದುದನ್ನು ನೋಡಿದರೆ ಈ ಪ್ರಾಣಿಗಳಿಗೆ ತಾರತಮ್ಯ ಜ್ಞಾನವೇ ಇಲ್ಲವೇನೋ ಎಂದು ಅನುಮಾನ ಬರುತ್ತದೆ. ಸುಮಾರು ಅರ್ಧ ಕೇಜಿಗಿಂತಲು ಹೆಚ್ಚು ತೂಕವಿದ್ದ ಕಪ್ಪೆಯನ್ನು ನುಂಗಿತ್ತು. ಹಾವಿಗೆ ದೃಷ್ಟಿ ತುಂಬಾ ಮಂದವೆಂದು ವಿಜ್ಞಾನಿಗಳು ಹೇಳುತ್ತಾರೆ. ಹಾಗಾದರೆ ಹಸಿರು ಬಣ್ಣದ ಕಪ್ಪೆಯ ನಿಜವಾದ ಆಕಾರಗಳು ಹಸಿರು ಹುಲ್ಲಿನ ಹಿನ್ನೆಲ್ಲೆಯಲ್ಲಿ ಹಾವಿಗೆ ತಿಳಿಯದೆ ಹೋಯ್ತೆ? ಬಾಯಿಗೆ ಸಿಕಿದ್ದನ್ನು ಲಂಚಗುಳಿ ಅಧಿಕಾರಿಗಳ ರೀತಿ ಹೇಗೋ ನುಂಗಿ ನಿಭಾಯಿಸಿ ಬಿಡೋಣ ಎಂದು ತೀರ್ಮಾನಿಸಿವೆ? ಅದನ್ನು ನುಂಗಿದ ಮೇಲೆ ಮುಂದಕ್ಕೂ ತೆವಳಲಾರದ ಸ್ಥಿತಿಗೆ ತಲುಪಿತು. ಆಗ ಅಲ್ಲಿಗೆ ಬಂದ ಕೆಂಬೂತವೊಂದು ಮುಂದೆ ಹೋಗಲು ಸಾಧ್ಯವಾಗದೆ ಸಿಕ್ಕಿ ಬಿದ್ದಿದ್ದ ಹಾವಿನ ಬಾಲದ ಬಳಿಗೆ ಹೋಗಿ ಚೂರು ಚೂರನ್ನೇ ಚಕ್ಕುಲಿ, ಕೋಡಬಾಳೆ ಮುರಿದು ತಿನ್ನುವಂತೆ ತುಂಡು ತುಂಡು ಮಾಡಿ ತಿನ್ನಲಾರಂಬಿಸಿದವು. ಕಾಲು ಭಾಗ ತಿಂದು ಅಲ್ಲಿಂದ ಪಲಾಯನ ಮಾಡಿದವು. ಹಾವಿನ ಹೊಟ್ಟೆಯಿಂದ ಹೊರಗೆ ಬಂದ ಕಪ್ಪೆ ತಲೆ ಹೊರಗೆ ಬಂದರೂ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡದೆ ಸತ್ತಂತೆ ಕುಳಿತಿತ್ತು. ಒಟ್ಟಾರೆಯಾಗಿ ತನ್ನ ದೇಹದ ಕಾಲುಭಾಗವನ್ನೇ ಹಾವು ಕಪ್ಪೆಯನ್ನು ನುಂಗಿದ್ದರ ಪರಿಣಾಮದಿಂದ ಕಳೆದುಕೊಳ್ಳಬೇಕಾಯಿತು.

ಒಂದು ಪ್ರಾಣಿಯ ದೇಹದಿಂದ ಕತ್ತರಿಸಿ ತುಂಡಾದ ಅಂಗಗಳು ಕೊಂಚ ಕಾಲ ಅದುರುತ ಅಲ್ಲಾಡುತ್ತ ಸಜೀವ ಲಕ್ಷಣಗಳನ್ನು ತೋರಿದರೆ ನಮಗೇನೂ ಆಶ್ಚರ್ಯವಾಗುವುದಿಲ್ಲ. ಏಕೆಂದರೆ ಆ ಅಂಗಾಂಗಗಳಲ್ಲಿ ಇನ್ನೂ ರಕ್ತ ಸಂಚಲನೆ ಇರುತ್ತದೆ. ನರ ಸಂವೇದನೆಗಳೂ ಇರುತ್ತವೆ. ಆದರೆ,ಇದು ಕೇಲವೇ ಕ್ಷಣಗಳವರೆಗೆ ಮಾತ್ರ. ಅನಂತರ ತಣ್ಣಾಗಾಗಿ ಸೆಟೆದುಕೊಂಡು ಬಿಡುತ್ತವೆ. ಉದಾಃ ಎರೆಹುಳು, ಆಮೆ, ಮತ್ತು ಏಡಿಯ ಹಲ್ಲಿಯ ಚಿತ್ರಣದ ಮೂಲಕ ಅವುಗಳಿಗಿರುವ ಇಂತಹ ವಿಶೇಷ ಗಾಣಗಳಿಂದಾಗಿ ಅವು ತಮ್ಮನ್ನು ತಾವು ಆಪತ್ತಿನ ಸಮಯದಲ್ಲಿ ರಕ್ಷಿಸಿಕೊಳ್ಳುವ ಸುಲಭ ತಂತ್ರಗಳಾಗಿವೆ.

"ಹಲ್ಲಿಯ ಪ್ರಾಣ ಬಾಲದಲ್ಲಿ ಎಂದು ಹೇಳುತ್ತಾರೆ. ಅದನ್ನು ಹಿಡಿಯಲು ಹೋದರೆ ಅದರ ಬಾಲ ತುಂಡಾಗಿ ಅದರಲ್ಲಿಯೂ ಜೀವವಿದೆಯೆಂಬಂತೆ ಕುಣಿದಾಡುತ್ತದೆ. ಅದರ ಬಾಲ ನಾವು ಹಿಡಿಯಲು ಹೋದ್ದರಿಂದ ತುಂಡಾದಲ್ಲಿ ಸ್ವ ಇಚ್ಚೆಯಿಂದ ಅದನ್ನು ತುಂಡು ಮಾಡಿರುವುದು. ಇದು ಹಲ್ಲಿಗೆ ಪ್ರಾಣ ರಕ್ಷಣೆಗಾಗಿ ಪ್ರಕೃತಿಯೆ ಒದಗಿಸಿರುವ ತಂತ್ರ. ಈ

ರೀತಿಯಾಗಿ ತಮ್ಮ ಅಂಗಗಳನ್ನು ಕಳಚಿ ತುಂಡು ಮಾಡಿ ಎಸೆಯುವ ಶಿಕ್ಷೆ ತುಂಬಾ ಪ್ರಾಣಿಗಳಿಗೆ ಇದೆ. ಇವುಗಳು ಕಳಚಿ ಎಸೆದ ಅಂಗಗಳು ಮತ್ತೆ ಹೊಸದಾಗಿ ಹುಟ್ಟುತ್ತವೆ. ಹಲ್ಲಿಗೆ ಬಾಲವೂ, ಏಡಿಗೆ ಕೈಕಾಲುಗಳೂ, ಮತ್ತೆ ಹೊಸದಾಗಿ ಹುಟ್ಟಿ ಬರುತ್ತವೆ. ಈ ಪ್ರಾಣಿಯೊಳಗಿರುವ ಯಾವ ಜೀವರಾಸಾಯನಿಕ ಇದಕ್ಕೆ ಕಾರಣ ಎಂದು ಜೀವ ವಿಜ್ಞಾನಿಗಳು ಸಂಶೋಧನೆ ನಡೆಸುತ್ತಿದ್ದಾರೆ.

ಉ. ಕಾಡು ಬೆಟ್ಟ ಹೊಳೆ

ತೇಜಸ್ವಿಯವರ ಮೊದಲ ಕಥಾ ಸಂಕಲನ ಹುಲಿಯೂರಿನ ಸರಹದ್ದು ಇದರಲ್ಲಿ ಲಿಂಗಬಂದ ಕತೆಯು ಭಯವನ್ನು ಸ್ಥಾಯಿಯನ್ನಾಗಿಸಿಕೊಂಡು ಕಥೆಯಾಗಿ ಮೇಲ್ನೋಟಕ್ಕೆ ಕಂಡು ಬಂದರೂ ಆ ಪುಟ್ಟ ಮಕ್ಕಳಲ್ಲಿ ಭಯ ಇಮ್ಮಡಿಯಾಗಲು ಪ್ರಕೃತಿಯೂ ಹೇಗೆ ಪೂರಕವಾಯಿತೆಂಬುದನ್ನು ಮನೋವೈಜ್ಞಾನಿಕವಾಗಿ ಚಿತ್ರಿಸಿದ್ದಾರೆ.

"ಹೊರಗಡೆ ಕತ್ತಲೋ ಕತ್ತಲು ಶಬ್ದವೋ ಶಬ್ದ, ಗಾಳಿಯ ಭೋರೆನ್ನುವ ಸದ್ದು, ಮಳೆ ಹನಿ ಹೆಂಚಿನ ಮೇಲೆ ಉದುರುವ ಸದ್ದು, ದೂರದಲ್ಲಿ ಜೀರುಂಡೆಗಳ ಜೀ ಎನ್ನುವ ನಿರಂತರ ನಿನದ, ಕಿಟ್ಟಿ ಸುಮ್ಮನೆ ಹೊರಗಿನ ಕತ್ತಲನ್ನು ದಿಟ್ಟಿಸುತ್ತ ಕುಳಿತ. ಸುಭದ್ರೆ ತೊಟ್ಟಿಲು ತೂಗುತ್ತಲೇ ಇದ್ದಳು ತೊಟ್ಟಿಲು ಕಿರ್‌ಕಿರ್ ಎನ್ನುತ್ತಲೇ ಇತ್ತು. ಕಿಟ್ಟಿ ಕತ್ತಲನ್ನು ಮತ್ತು ದಿಟ್ಟಿಸಿದ ಮಿಂಚು ಫಳ್ಳೆಂದಾಗ ಹೊರಗಡೆ ತಲೆ ಕೆದರಿಕೊಂಡು ತೂಗಾಡುತ್ತಿದ್ದ ತೆಂಗಿನ ಮರದ ಕರಿಯ ಆಕೃತಿ ಒಂದು ಕ್ಷಣ ಹೊಳೆಯುತ್ತಿತ್ತು. ಆದರೆ ಮರುಕ್ಷಣವೇ ಕತ್ತಲ ತೋಳ ತೆಕ್ಕೆಯಲ್ಲಿ ಕರಗಿ ಮರೆಯಾಗುತ್ತಿತ್ತು"[10].

ಮನೆಯ ಆಳು ಲಿಂಗ ಮಲೆನಾಡಿನ ಪರಿಸರದಲ್ಲಿ ರಾತ್ರಿಯ ಹೊತ್ತಿನಲ್ಲಿ ಹಲಸಿನ ಬಿತ್ತವನ್ನು ಸುಡುತ್ತ ಕುಳಿತಿದ್ದಾಗ ಅವನ ಪಕ್ಕ ಒತ್ತರಿಸಿ ಕುಳಿತ ಕಿಟ್ಟಿಗೆ ಲಿಂಗ ಸ್ವಲ್ಪ ಸರಿಯುವಂತೆ ಹೇಳುತ್ತಾನೆ. ಆಗ ಲಿಂಗ ಕಿಟ್ಟಿಯ ಕಿರಿಕಿರಿಯನ್ನು ತಡೆಯಲು ಒಂದು ಕಥೆಯನ್ನು ಹೇಳುತ್ತಾನೆ. ಕಥೆಯನ್ನು ಹೇಳುವ ಸಂದರ್ಭದಲ್ಲಿ ಹೊರಗಡೆ, ಮಳೆ, ಗಾಳಿ, ಗುಡುಗು ಮಿಂಚಿನ ಆರ್ಭಟ ಸಾಗಿರುತ್ತದೆ.

ಆ ಸಂದರ್ಭದಲ್ಲಿ ಬೀಸುತ್ತಿದ್ದ ಗಾಳಿ ಬೋರನೆ ಬೀಸುತ್ತಿದ್ದು ಕಿಟಕಿಯ ಸಂದಿಯಿಂದ ಸಿಳ್ಳುಹೊಡೆಯುವಂತೆ ಗಾಳಿ ಜೋರಾಗಿ ಬೀಸಲು ಆ ಸಿಳ್ಳು ಹೆಚ್ಚಾಗಿ ಸಿಳ್ಳು ನಿಧಾನವಾಗಲು ಗಾಳಿ ನಿಧಾನವಾಗಿ ಬೀಸುತ್ತಿತ್ತು.

ಲಿಂಗ ಹೇಳಿದ ಕಥೆಯನ್ನು ಸುಭದ್ರೆ ಸ್ವಲ್ಪ ಒತ್ತಣ್ಣ ಎಂದಾಗ ಲಿಂಗ ಹೇಳಿದ ಕಥೆ ಕಿಟ್ಟಿಗೆ ನೆನಪಿಗೆ ಬಂದು ಸುಭದ್ರೆಯನ್ನು ಹೆದರಿಸಬೇಕೆಂದು ಅವಳಿಗೆ ಈ ಕತೆಹೇಳುತ್ತಾನೆ.

"ನನಗೆ ಅದು ಹೆಚ್ಚಿಗೆ ಬೇಕು, ಇದು ಹೆಚ್ಚಿಗೆ ಬೇಕು" ಎನ್ನುತ್ತಿದ್ದ ಇಂಗ್ಲಾಂಡಿನಲ್ಲಿ ಹಳೆ ಪೈಕೊದವನ ಹೆಂಡತಿಗೆ ಒಂದು ಮಗುವಾಗುತ್ತದೆ. ಆ ಮಗು ಘಳಿಗೆ ಘಳಿಗೆಗೆ ಬೆಳೆಯುತ್ತದೆ. ಅದರ ಭಾರಕ್ಕೆ ತೊಟ್ಟಿಲು ಮುರಿದು ಬೀಳುತ್ತದೆ. ಮಂಚವೂ ಮುರಿಯುತ್ತದೆ. ಅದು ಕ್ರಮೇಣ ರಾಕ್ಷಸ ರೂಪವನ್ನು ಪಡೆದು ಅದರ ಅಳು ಹುಲಿಯ ಗರ್ಜನೆಯಂತೆ ಕೇಳುತ್ತದೆ. ಆ ಮಗುವಿನ ತಾಯಿ ಭಯದಿಂದ ಗಟ್ಟಿಯಾಗಿ ಚೀರಿದಾಗ ಊರಿನ ಜನರೆಲ್ಲ ಬಂದು ನೋಡುತ್ತಾರೆ. ಆಗ ಲಿಂಗನ ಅಜ್ಜ ಇದು ರಾಕ್ಷಸ ಮಗುವೆಂದೂ ಅದನ್ನು ಕೂಡಲೇ ಜಪ್ಪಿ ಹಾಕಬೇಕೆಂದೂ ಹೇಳುತ್ತಾರೆ. ಆ ಪ್ರಕಾರ ಊರಿನ ಜನರೆಲ್ಲ ಕೂಡಿ ಅದನ್ನು ಕೊಲ್ಲುತ್ತಾರೆ. ಈ ಕಥೆಯನ್ನು ಕೇಳಿದ ಸುಭದ್ರೆಯ ಮನಸ್ಸಿನಲ್ಲಿ ಭಯ ಮತ್ತು ಕುತೂಹಲಗಳು ಉದ್ಭವಿಸುತ್ತವೆ. ಆದರೆ ಕಥೆಯಿಂದ ಹುಟ್ಟಿಕೊಂಡ ಭಯ ಬೆಳೆಯುತ್ತಾ ಹೋಗುತ್ತದೆ. ಕಿಟ್ಟಿಗೆ ಸುಭದ್ರೆ ಹೆದರಿಕೊಂಡದ್ದು ಸಂತೋಷದ ವಿಷಯವಾದರೂ, ಕ್ರಮೇಣ ಅವನಲ್ಲಿಯೇ ಆ ಭೀತಿ ಹೆಚ್ಚುತ್ತಾ ಹೋಗಿ ಓಲಾಡುವ ದೀಪ ಗೋಡೆಯ ಮೇಲೆ ಕುಣಿಕುಣಿದಾಡುತ್ತಿರುವುದನ್ನು ಕಂಡ ಕಿಟ್ಟಿಗೆ ನಿಧಾನವಾಗಿ ತನ್ನ ಕತೆಯ ಬಗ್ಗೆ ತನಗೇ ಹೆದರಿಕೆಯಾಗುತ್ತದೆ. ಸದ್ಯ ತನ್ನ ತಮ್ಮ ಸದಾನಂದ ಹಾಗೆ ಬೆಳೆಯದಿದ್ದರೆ ಸಾಕಪ್ಪ ಎನ್ನುವಂತಾಗುತ್ತದೆ.

ಕಿಟ್ಟಿ ಹಾಗೂ ಸುಭದ್ರೆಯರ ಪುಟ್ಟ ಮುಗ್ಧ ಹೃದಯದಲ್ಲಿ ಪ್ರಕೃತಿಯ ಮಿಂಚು, ಗುಡುಗು, ಕತ್ತಲೆ, ಮಳೆ, ಸಿಳ್ಳೆ ಹಾಕುವ ಗಾಳಿ ಇವೆಲ್ಲಾ ಭಯವನ್ನು ಹೆಚ್ಚಿಸುವಂತೆ ಕೆಲಸ ಮಾಡುತ್ತವೆ. ಸದಾನಂದನ ಬಾಯಿಯ ಇಕ್ಕೆಡೆಗಳಲ್ಲಿ ಸೋರುವ ಜೊಲ್ಲು, ಅಲುಗಾಡುವ ದೀಪಕ್ಕೆ ಪಳಪಳನೆ ಹೊಳೆದು ಬರಬರುತ್ತಾ ಕೋರೆಯ ಹಲ್ಲಿನಂತೆ ಕಾಣುತ್ತದೆ. ದೀಪ ಅಲುಗಾಡಿದಂತೆಲ್ಲಾ ತನ್ನ ತಮ್ಮ ಸದಾನಂದನೋ ಅಥವಾ ಅವನ ನೆರಳೋ ಹಿಗ್ಗುತ್ತಾ ಹೋಗುತ್ತದೆ. ನೆರಳಿಗೂ ನಿಜಕ್ಕೂ ವ್ಯತ್ಯಾಸವನ್ನು ಕಂಡುಹಿಡಿಯಲಾರದಂತ ಕನಸಿನ ವಾತಾವರಣವೊಂದು ಕಿಟ್ಟಿಯ ಸುತ್ತಾ

ಮೂಡುತ್ತದೆ. ಪುಕ್ಕಲು ಮನಸ್ಸಿನ ಭ್ರಾಮಕ ದೃಷ್ಟಿಗೆ ಕತ್ತಲಲ್ಲಿ ಹಗ್ಗ ಹಾವಾಗಿ, ದೂರದ ಮೋಟು ಮರ ಕರಡಿ ದೆವ್ವವಾಗಿ ಕಾಣುವುದು ಸಾಮಾನ್ಯ ಸಂಗತಿ. ಅವರಿಬ್ಬರ ಮನದ ಭೀತಿ ಉಲ್ಬಣವಾಗುತ್ತಿದ್ದಂತೆಯೇ ಗದ್ದೆಗೆ ಹೋಗಿದ್ದ ಲಿಂಗ ಮತ್ತು ಮಂಜಪ್ಪ ಗೌಡರು ಮನೆಗೆ ಬರುತ್ತಾರೆ. ಲಿಂಗನನ್ನು ಕಂಡ ಕಿಟ್ಟಿಗೆ ಎಷ್ಟೇ ಆಗಲಿ ರಾಕ್ಷಸನನ್ನು ಕೊಲ್ಲಿಸಿದವನ ಮೊಮ್ಮಗನೆಂಬ ಸಮಾಧಾನವಾದರೂ, ಸುಭದ್ರೆಗೆ ತನ್ನ ತಮ್ಮ ಬೆಳೆಯುತ್ತಾನೆ ಎಂಬುದರಿಂದ ಭಯ ಉಂಟಾಗುತ್ತದೆ.

ತೇಜಸ್ವಿಯವರು ಪ್ರಕೃತಿಯ ಬಗ್ಗೆ ಮನುಷ್ಯರಲ್ಲಿ ಆವರಿಸಿರುವ ನಿಗೂಢತೆಯ, ಭಯದ ಭಾವನೆಯನ್ನು ಈ ಕತೆಯಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ವಸ್ತುವಿನ ಸಂಕೀರ್ಣತೆ ಮತ್ತು ಜನರ ಅನುಭವದ ಇತಿ–ಮಿತಿಗಳನ್ನು ತೇಜಸ್ವಿಯವರು ಸೂಕ್ಷ್ಮವಾಗಿ ಮೂಡಿಸಿದ್ದಾರೆ.

ಮಲೆನಾಡಿನ ಪರಿಸರವನ್ನೊಳಗೊಂಡಿರುವ ಗುಡುಗು ಹೇಳಿದ್ದೇನು? ಎಂಬ ಕಥೆಯೂ ಕೂಡ ಸ್ವಾರಸ್ಯಕರವಾಗಿ ನಿರೂಪಣೆಗೊಂಡಿದೆ. ಕತೆಯ ಪ್ರಾರಂಭದಲ್ಲಿ ತೇಜಸ್ವಿ ಪ್ರಕೃತಿಯ ಚಿತ್ರಣವನ್ನು ಮೂಡಿಸಿದ್ದಾರೆ.

"ಹಗುರವಾಗಿ ಹರಿಯುತ್ತಿದ್ದ ನೂರಾರು ಮೋಡಗಳೆಡೆಯಲ್ಲಿ ಒಂದು ದೊಡ್ಡ ಮೋಡ ಸುಯ್ಯನೆ ತೇಲಿ ಬಂತು. ಬಂದು ಎದುರಿನ ಪರ್ವತಾಗ್ರಕ್ಕೆ ಮೃದುವಾಗಿ ಢಿಕ್ಕಿ ಹೊಡೆಯಿತು, ಮತ್ತು ಮುನ್ನುಗಿತು. ಅಲ್ಲೇ ಮುದ್ದೆಮುದ್ದೆಯಾಗಿ ಸುರಳಿ ಸುತ್ತತೊಡಗಿತು. ಸುರಳಿ ಸುತ್ತಿಸುತ್ತಾ ಕೆಳ ಮುಖವಾಗಿ ಇಳಿದಿಳಿದು ಕೆಳಗೆ ಹಬ್ಬಿದ್ದ ಕಾಡಿನ ನಾಡಿಯಲ್ಲಿ ಪ್ರವಹಿಸಿ ಮರಮರಗಳ ಸಂದುಸಂದುಗಳಲ್ಲಿ ಅವಿತಿದ್ದ ನಸುಗತ್ತಲನ್ನು ಬಿಳಿದು ಗೈದಿತು"[೧೧].

ಈ ಕತೆಯಲ್ಲಿನ ವ್ಯಕ್ತಿಗಳು ಮಾಡುವ ಕ್ರೌರ್ಯಕ್ಕೆಂಬಂತೆ ಅಲ್ಲಿನ ಪ್ರಕೃತಿ ಸಾಕ್ಷಿಪ್ರಜ್ಞೆಯಾಗಿ ನಿಂತಿರುವುದನ್ನು ಈ ಮಾತುಗಳಲ್ಲಿ ಗಮನಿಸಬಹುದು.

"ಕಾಲು ಬುಡದಲ್ಲಿ ನಡೆಯುತ್ತಿರುವ ಮಾನವರ ಮತ್ತು ತಲೆಯ ಎಡೆಯಲ್ಲಿ ನಡೆಯುತ್ತಿರುವ ಮೇಘದ ಸರ್ವವ್ಯಾಪಾರಗಳಿಗೂ ಸಾಕ್ಷೀಪ್ರಜ್ಞೆಯಾಗಿ ಶಿಖರ ನಿಂತಿತ್ತು"[೧೨].

ಸೋಮಾರಿ ಅಣ್ಣ ತಮ್ಮಂದಿರುಗಳಾದ ಸೋಮ ಮತ್ತು ಲಕ್ಕ ಚಿಕ್ಕನೂರು ಸುಬ್ಬೇಗೌಡರ ಒಕ್ಕಲುತನವನ್ನು ತ್ಯಜಿಸಿ ಕಡಿದಾಳು ಶಾಮಣ್ಣಗೌಡರ ಬಳಿ ಹೋಗುವ ಸಿದ್ಧತೆಯನ್ನು ನಡೆಸುತ್ತಲೆ, ಮಂಜಪ್ಪನ ಅಪ್ಪ ಬಸ್ಸಿಗೆ ಸಿಕ್ಕು ಸತ್ತದ್ದು, ಅದಕ್ಕಾಗಿ ಕೋರ್ಟು ಎರಡುನೂರು ರೂಪಾಯಿಗಳ ಪರಿಹಾರ ಧನ ನೀಡಿತೆಂಬುದನ್ನು ಮಾತನಾಡುತ್ತಿರುತ್ತಾರೆ. ಹೇಗಾದರೂ ಮಾಡಿ ಹಣ ಸಂಪಾದಿಸಬೇಕೆಂದು ತೀರ್ಮಾನಿಸಿರುವ ಸೋಮ ಮತ್ತು ಲಕ್ಕರು ತಮ್ಮ ಅಜ್ಜಿಯ ದುರಂತ ಸಾವಿಗೆ ಕಾರಣರಾಗುವ ವಸ್ತು ಈ ಕಥೆಯಲ್ಲಿ ನಿರೂಪಣೆಗೊಂಡಿದೆ. ಅಜ್ಜಿಯ ಕೈಕೆಳಗೆ ಬೆಳೆದ ಮಕ್ಕಳು ಅವಳ ಸಾವಿನಿಂದ ಬರುವ ಪರಿಹಾರ ಧನಕ್ಕೆ ಆಸೆಪಟ್ಟು ಅವಳನ್ನು ಕಾರಿನ ಬಾಯಿಗೆ ದೂಡುತ್ತಾರೆ. ಇದು ಮಾನವೀಯ ಮೌಲ್ಯಗಳು ಸ್ವಾರ್ಥದೆದುರು ನಿಷ್ಪ್ರಯೋಜಕವಾಗುವುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಅದನ್ನೇ ಗುಡುಗು ಸಾರಿ ಸಾರಿ ಹೇಳುತ್ತದೇನೋ ಎನಿಸುತ್ತದೆ.

ಪ್ರಕೃತಿ ಪ್ರೇಮಿಯಾದ ತೇಜಸ್ವಿಯವರ ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು ಈ ಕತೆಗೆ ಮೂಲ ಪ್ರಚೋದನೆಯನ್ನು ಒದಗಿಸಿದ್ದು ಪ್ರಕೃತಿಯೇ. ತೇಜಸ್ವಿಯವರಿಗೆ ಕಾಡು ರೋಮಾಂಚನಗಳನ್ನು ಉಂಟು ಮಾಡಿದರೂ ಕೂಡ ಕೆಲವೊಮ್ಮೆ ಬೇಸರವೆನಿಸುವ ಮಟ್ಟಿಗೂ ಇರುವುದನ್ನು ತೇಜಸ್ವಿಯವರೇ ತಮ್ಮ ಮಾತುಗಳಲ್ಲಿ ಹೀಗೆ ವ್ಯಕ್ತ ಪಡಿಸಿದ್ದಾರೆ.

"ಅವತ್ತು ಬಿಸಿಲಿನ ಧಗೆ ಮಿತಿಮೀರಿತ್ತು, ಗಾಳಿ ಸಹ ಇರಲಿಲ್ಲ, ಮರದ ಒಂದು ಎಲೆಯೂ ಅಲುಗುತ್ತಿರಲಿಲ್ಲ. ಮರದ ಕೆಳಗೆಲ್ಲ ಕಪ್ಪಗೆ ಕತ್ತಲಿನಂತೆ ನೆರಳು ಹಾಸಿಕೊಂಡು ಬಿದ್ದಿತ್ತು. ನನಗೆ ಇಡೀ ಜಗತ್ತೇ ಜಡವಾದಂತೆನಿಸಿ ಬೋರಾಯ್ತು, ನಡೆಯುವುದನ್ನು ನಿಲ್ಲಿಸಿ ಸುಮ್ಮನೆ ಮರದ ನೆರಳೊಂದರ ಅಡಿ ಕುಳಿತೆ. ಈ ಕಾಡು ಎಷ್ಟು ಹೊತ್ತಿನವರೆಗೆ ಹೀಗೆ ಬೋರ್ ಹೊಡೆದು ಕೊಂಡು ಬಿದ್ದಿರುತ್ತದೆ. ನೋಡೇ ಬಿಡೋಣ ಎಂದು ಯೋಚಿಸಿ ಸುಮ್ಮನೆ ಕುಳಿತೆ. ಕಾಡು ಅದ್ಭುತ ರಮ್ಯ ಎಂದೆಲ್ಲಾ ಕಲ್ಪನೆ ಮಾಡುವುದು ದೊಡ್ಡ ತಲೆಹರಟೆ ಎನ್ನಿಸಿತು. ಸದ್ಯಕ್ಕಂತು ಕಾಡಿಗೂ ಮರುಭೂಮಿಗೂ ನನಗೆ ಯಾವ ವ್ಯತ್ಯಾಸವೂ ಇಲ್ಲವೆಂದೆನ್ನಿಸಿತು"[೧೩].

ರೋಮಾಂಚನಗಳನ್ನು ಉಂಟು ಮಾಡುವ ಕಾಡಿನ ಬಗ್ಗೆ ಒಮ್ಮೆ ಇಂತಹ ನಿಲುವು ಮೂಡಿದರೆ ಮತ್ತೊಮ್ಮೆ ಅದೇ ಕಾಡು ರೋಮಾಂಚನಗಳನ್ನು ಉಂಟು ಮಾಡುವ ಸಾಗರದಂತೆ ಕಂಡು ಬರುತ್ತದೆ. ಆದರೆ ಅದನ್ನು ಸೂಕ್ಷ್ಮವಾಗಿ ಗಮನಿಸುವ ದೃಷ್ಟಿ ನೋಡುಗನಿಗೆ ಇರಬೇಕೆಂಬುದನ್ನು ನಮ್ಮ ಜಡತ್ವವನ್ನು ದೂರ ಮಾಡಿ ಇಂದ್ರಿಯಗಳನ್ನು ತೆರೆದಿಟ್ಟುಕೊಂಡರೆ

ಸಾಕು. ನಮ್ಮ ಸುತ್ತಲ ಪರಿಸರವೇ ಎಷ್ಟು ಅದ್ಭುತ, ವರ್ಣಮಯ ಎಂಬುದನ್ನು ಅರಿಯಲು ಅಷ್ಟು ಸಾಕು ಎಂದು ತೇಜಸ್ವಿ ಮತ್ತೆ ಮತ್ತೆ ತಮ್ಮ ಓದುಗರಿಗೆ ಮನದಟ್ಟು ಮಾಡಿಕೊಡುತ್ತಾರೆ. ಒಂಟಿ ಹುಳುವಿನ ಚಟುವಟಿಕೆಗಳೆನ್ನೆಲ್ಲ ಸ್ವಾರಸ್ಯಕರವಾಗಿ ವರ್ಣಿಸಿ ಹೀಗೆ ಹೇಳುತ್ತಾರೆ.

"ಇದೇನೂ ಯಾರೂ ಕಂಡಿಲ್ಲದ ಪವಾಡವೇನಲ್ಲ, ಬಹುಶ: ಕೀಟಶಾಸ್ತ್ರದ ಪುಸ್ತಕ ಹುಡುಕಿದ್ದರೆ ಈ ವಿವರಗಳೆಲ್ಲ ಸಿಗುತ್ತಿತ್ತೋ ಏನೋ, ಆದರೆ ಜೀವನದಲ್ಲಿ ಇವನ್ನು ಸಂಧಿಸುವುದಕ್ಕೂ ಪುಸ್ತಕ ಓದುವುದಕ್ಕೂ ವ್ಯತ್ಯಾಸ ಇರುತ್ತದೆ. ಎಷ್ಟೋ ಜನ ನನ್ನ ಝರಿ, ಹಕ್ಕಿ, ಕಾಡಿನ ಮೇಲಿನ ಲೇಖನ ಪುಸ್ತಕಗಳನ್ನೆಲ್ಲಾ ಓದಿ ನಾವೂ ಅಲ್ಲಿಗೆ ಬಂದು ಇವನ್ನೆಲ್ಲಾ ನೋಡಬೇಕೆಂದಿದ್ದೇವೆಂದು ಕಾಗದ ಬರೆಯುತ್ತಾರೆ. ಆದರೆ ಮೊದಲನೆಯದಾಗಿ ಬಂದು ನೋಡುವವರಿಗಾಗಿ ಎಲ್ಲಿಯೂ ಯಾವುದೂ ಕಾದು ಕುಳಿತಿರುವುದಿಲ್ಲ. ಎರಡನೆಯದು ಇವನ್ನೆಲ್ಲ ನೋಡಲು ಎಲ್ಲಿಗಾಗಲಿ ಹೋಗಬೇಕಾದ ಅಗತ್ಯವೇ ಇಲ್ಲ. ನಾವು ಎಲ್ಲಿದ್ದೇವೋ ಅಲ್ಲೇ ಅತ್ತಿತ್ತ ಕಣ್ಣು ಬಿಟ್ಟು ನೋಡಿದರೆ ಸಾಕು ಇಂಥವು ನೂರಾರು ಪವಾಡಗಳು ನಡೆಯುತ್ತಲೇ ಇರುತ್ತವೆ"[೧೪].

ತೇಜಸ್ವಿಯವರ ಒಂದು ಝರಿಯ ಜಾಡಿನಲ್ಲಿ ಕತೆಯಲ್ಲಿ ತಮ್ಮ ಮನೆಯ ಪಕ್ಕ ಹರಿದು ಬರುತ್ತಿದ್ದ ಝರಿಯನ್ನು ಅವರು ಅವಲೋಕಿಸಿ ಅದರಿಂದ ಸಿಗುವ ನೀರಿನ ಪ್ರಮಾಣವನ್ನು ಅಳೆಯುವಂತಹ ವಿಚಾರವನ್ನು ತಿಳಿಸುತ್ತಾರೆ. ಆ ಝರಿ ಇಲ್ಲದಿದ್ದರೆ ಅವರಿಗೆ ಬೇಸಿಗೆಯಲ್ಲಿ ಕುಡಿಯಲು ನೀರೂ ಸಹ ಸಿಗುತ್ತಿರಲಿಲ್ಲ ಎಂಬುದನ್ನು ಅವರು ಹೀಗೆನ್ನುತ್ತಾರೆ.

"ಬಟ್ಟ ಬೇಸಿಗೆಯಲ್ಲಿ ಇಂಥ ಮಲೆನಾಡಿನಲ್ಲಿ ಸಹ ಕುಡಿಯುವ ನೀರಿಗಾಗಿ ಜನ ಹಾಹಾಕಾರ ಅನುಭವಿಸುವಂತಾಗಿದೆ. ಆದರೆ ನಮ್ಮ ಝರಿ ಮಾತ್ರ ಯಾವತ್ತೂ ಬತ್ತಿಲ್ಲ. ಬೇಸಿಗೆಯ ಉರಿ ಬಿಸಿಲಿಗೆ ಜಗತ್ತೆಲ್ಲ ಬೆಂಕಿಯಾಗಿದ್ದಾಗಲೂ ಹೋಗಿ ನೋಡಿದ್ದೇನೆ. ತೆಳ್ಳಗೆ ನೀರು ಹರಿಯುತ್ತಲೇ ಇರುತ್ತೆ"[೧೫].

ಮಳೆಯ ಪ್ರಮಾಣ ಕಡಿಮೆಯಾದರೂ ಕೂಡ ಬತ್ತದ ಝರಿಯನ್ನು ಕಂಡು ಅವರಿಗೆ ಕುತೂಹಲ. ಆ ಝರಿಯ ನೀರು ಬಹಳ ಶುಭ್ರವಾಗಿದ್ದು ಗಾಜಿನ ಲೋಟದಲ್ಲಿ ಹಾಕಿದರೆ ನೀರು ಕಾಣದಷ್ಟು ಪಾರದರ್ಶಕವಾಗಿರುತ್ತದೆ. ಆದರೆ ನೀರು ಹರಿದು ಬರುವ ಸ್ಥಳವನ್ನು ನೋಡಿದರೆ

ಕುಡಿಯಲು ಭಯ ಹುಟ್ಟಿಸುವಷ್ಟು ಕಸ, ಕಡ್ಡಿ, ತರಗಲೆಗಳು ಹಳ್ಳದೊಳಗೆ ಬಿದ್ದು ಕೊಳೆಯುತ್ತಿದ್ದರೂ ನೀರು ಮಾತ್ರ ಶುಭ್ರವಾಗಿರುತ್ತದೆ. ಆ ಹಳ್ಳದಲ್ಲಿರುವ ಕಪ್ಪೆ, ಏಡಿ, ಚಿಕ್ಕ ಚಿಕ್ಕ ಮಡಿ ಮೀನುಗಳು ಬಹುಶ: ಆ ನೀರಿನಲ್ಲಿನ ಕಲ್ಮಶಗಳನ್ನು ನಾಶ ಮಾಡಿ ಶುಭ್ರಗೊಳಿಸುವ ಸಂಗತಿಯನ್ನು ಹಳ್ಳದ ನೀರನ್ನು ಕ್ಲೀನ್ ಮಾಡಬೇಕೆಂದಿದ್ದ ತೇಜಸ್ವಿಯವರಿಗೆ ಅವರ ವಿಜ್ಞಾನಿ ಮಿತ್ರ ಮಲ್ಲಿಕ್ ತಿಳಿಸುತ್ತಾರೆ.

ಅಲ್ಲಿನ ಝರಿಯ ಬಗೆಗೆ ತೇಜಸ್ವಿಯವರಿಗಿದ್ದ ಕುತೂಹಲವೆಷ್ಟೆಂದರೆ ಆ ಝರಿಯ ನೀರಿಗೆ ಅಡ್ಡಗಟ್ಟೆಯನ್ನು ಕಟ್ಟಿ ಅದಕ್ಕೆ ಒಂದು ಪೈಪನ್ನು ಅಳವಡಿಸಿ ಒಂದು ಬಕೆಟ್ ತಂದು ಒಂದು ನಿಮಿಷದ ಕಾಲಾವಧಿಯಲ್ಲಿ ಎಷ್ಟು ನೀರು ಬರುತ್ತೆ ಎಂಬುದನ್ನು ನೋಡಿ ಅದರಿಂದ ಆಶ್ಚರ್ಯ ಚಕಿತರಾಗುತ್ತಾರೆ. ನೋಡಲು ಹಾಗಿದ್ದ ಝರಿಯಲ್ಲಿ ಆಶ್ಚರ್ಯವಾಗುವಂತೆ ಒಂದು ನಿಮಿಷಕ್ಕೆ ಮೂವತ್ತು ಲೀಟರು, ಒಂದು ದಿನಕ್ಕೆ ಹೆಚ್ಚು ಕಡಿಮೆ ನಲ್ವತ್ತು ಮೂರು ಸಾವಿರ ಲೀಟರು ನೀರು ಕೊಡುವುದನ್ನು ಗಮನಿಸುತ್ತಾರೆ".

ಒಮ್ಮೆ ತೇಜಸ್ವಿ ಈ ನೀರಿನ ಮೂಲವನ್ನು ಶೋಧಿಸುತ್ತಾ ತಮ್ಮ ಗೆಳೆಯ ಗಾಂಗೇಯನೊಂದಿಗೆ ಕೊರಕಲಿನಲ್ಲಿ ಹೊರಟಾಗ ಝರಿ ಹುಟ್ಟುವ ಜಾಗ ಎಲ್ಲೂ ಸಿಗಲಿಲ್ಲ. ತುಂಬ ಹೊತ್ತು ನಿಂತು ನೋಡಿದ ಮೇಲೆ ಗುಹೆಯ ಮೇಲೆ ಅಕ್ಕಪಕ್ಕಗಳಲ್ಲಿ ಫರ್ನ್‌ಗಳ, ಮರಗಳ ಬೇರುಗಳು ಹೊರಚಾಚಿದ್ದು ಅವಕ್ಕೆ ಪಾಚಿ ನೇತು ಬಿದ್ದಿತ್ತು. ಅವುಗಳಿಂದ ಮೆಲ್ಲಗೆ ನೀರಿನ ಒಂದೊಂದೆ ತೊಟ್ಟು ಮೂಡಿ ನಂತರ ನೀರಿನ ಹನಿ ದೊಡ್ಡದಾಗಿ ಟುಮುಕ್ ಸದ್ದಿನೊಂದಿಗೆ ಕೆಳಗೆ ಬೀಳುತ್ತಿತ್ತು. ಸುತ್ತಮುತ್ತಲ ಗುಹೆಯ ಗೋಡೆ ಬೆವರಿದಂತೆ ನೀರು ಒಸರಿ ಹೊರಚಾಚಿ ಕೊಂಡಿದ್ದ ಬೇರಿನ ತುದಿಗಳ ಮುಖಾಂತರ ಹನಿಯಾಗಿ ನೆಲಕ್ಕೆ ಬಿದ್ದು ನಿಧಾನವಾಗಿ ಝರಿ ಹರಿಯಲಾರಂಭಿಸುತ್ತಿತ್ತು, ದಿನಕ್ಕೆ ನಲ್ವತ್ಮೂರು ಸಾವಿರ ಲೀಟರು ನೀರು ಕೊಡುವ ಹಳ್ಳದ ಮೂಲ ದಿನಕ್ಕೆ ನಲ್ವತ್ಮೂರು ಲೀಟರು ಸಹ ಕೊಡುವಂತಿರಲಿಲ್ಲವಾದ್ದರಿಂದ ಆಶ್ಚರ್ಯವಾಯಿತು. ಆದರೆ ಬರುತ್ತಾ ಹಳ್ಳದ ದಂಡೆಯನ್ನು ನೋಡುತ್ತಾ ಬಂದಾಗ ಅನೇಕ ಕಡೆಗಳಲ್ಲಿ ಗುಹೆಯಲ್ಲಿ ನೀರು ಕಂಡಂತೆಯೇ ನೀರು ತೊಟ್ಟಿಕ್ಕುತ್ತಿರುವುದನ್ನು ಕಂಡು ಮನೆಯನ್ನು ತಲುಪುವ ವೇಳೆಗೆ ಆ ಹನಿ ಹನಿಯು ಸೇರಿ ಹಳ್ಳದ ನೀರಿನ ಪ್ರಮಾಣ ಹೆಚ್ಚಿದ್ದರ ವಿಚಾರವನ್ನು ಈ ಭಾಗದಲ್ಲಿ ಸೆರೆಯಿಡಿಯುವ ತೇಜಸ್ವಿಯವರ ವಿಚಾರಗಳನ್ನು ಗಮನಿಸಬಹುದು.

ಮೂಡಿಗೆರೆ ತಾಲ್ಲೂಕಿನ ವೈಶಿಷ್ಟವನ್ನು ತೇಜಸ್ವಿ ಮಾತುಗಳಲ್ಲಿ ಹೇಳುವುದಾದರೆ.

"ಒಂದೊಂದು ಗುಡ್ಡದ ಇಳಿಜಾರಿನಲ್ಲೂ ಒಂದೊಂದು ಚಿಕ್ಕ ಝರಿ ಹುಟ್ಟುತ್ತದೆ. ಪ್ರತಿ ತೋಟದಲ್ಲೂ ಒಂದೊಂದು ಈ ರೀತಿಯ ಚಿಕ್ಕ ಒರತೆ ಹುಟ್ಟಿ ಹರಿದು ಹೇಮಾವತಿ ನದಿಯನ್ನೋ ಇಲ್ಲಾ ಭದ್ರಾ ನದಿಯನ್ನೋ ಸೇರಿ ಸಮುದ್ರದತ್ತ ತನ್ನ ಧೀರ್ಘ ಪ್ರಯಾಣ ಪ್ರಾರಂಭಿಸುತ್ತವೆ. ಒಂದೇ ಗುಡ್ಡದ ಎರಡು ಮಗ್ಗುಲಿನಲ್ಲಿ ಹುಟ್ಟಿದ ಎರಡು ಝರಿಗಳು ತಮ್ಮ ಅಂತಿಮಪಾರಾವಾರ ಸೇರುವಾಗ ಸಹಸ್ರಾರು ಮೈಲು ದೂರಾಗಿರುತ್ತದೆ. ಕೃಷ್ಣಾನದಿ ಎಲ್ಲಿ ! ಕಾವೇರಿ ನದಿ ಎಲ್ಲಿ!"[೧೬].

ಕಾಡುಗಳು ಕೇವಲ ರೋಮಾಂಚನಗಳನ್ನಷ್ಟೇ ಉಂಟು ಮಾಡದೆ ಅದು ಪ್ರಾಣಿಗಳಿಗೆ ಪಕ್ಷಿಗಳಿಗೆ ಆಶ್ರಯವನ್ನು ನೀಡುವಂತೆಯೇ, ಮನುಷ್ಯ ಪ್ರಾಣಿಗೂ ಕೂಡ ಅತ್ಯುಪಯುಕ್ತವಾದ ಗಿಡಮೂಲಿಕೆಗಳನ್ನು ಆತನ ಅಗತ್ಯದ ವಸ್ತುಗಳ ಪೂರೈಕೆಗೂ ಕಾಡು ಪೂರಕವಾಗಿರುವುದನ್ನು ತೇಜಸ್ವಿಯವರು ಮೂಲಿಕೆ ಬಳ್ಳಿಯ ಸುತ್ತ ಕತೆಯಲ್ಲಿ ತಿಳಿಸುತ್ತಾರೆ.

ಕಿರುಗೂರಿನ ಗಯ್ಯಾಳಿಗಳು ಕತೆಯಲ್ಲಿ ಮೂರು ಹಗಲು ಮೂರು ರಾತ್ರಿ ಸುರಿದ ಮಳೆ ಮತ್ತು ಗಾಳಿಯ ಪರಿಣಾಮದಿಂದಾಗಿ ಆ ಊರಿನ ಜನ ಜೀವನವು ಅವ್ಯವಸ್ಥೆಗೊಂಡ ಹಾಗೂ ಅಲ್ಲಿ ನಡೆಯುವ ಪ್ರತಿಯೊಂದು ಘಟನೆಗಳಿಗೂ ಮಳೆ, ಗಾಳಿಯೇ ಕಾರಣಕರ್ತರಾಗುವ ಸಂದರ್ಭವನ್ನು ಗುರುತಿಸುತ್ತೇವೆ. ಅಲ್ಲಿ ಬೀಸಿದ ಗಾಳಿಯ ಚಿತ್ರಣವನ್ನು ತೇಜಸ್ವಿ ತಮ್ಮ ಕತೆಯಲ್ಲಿ ಹೀಗೆ ಮೂಡಿಸಿದ್ದಾರೆ.

"ಗಾಳಿ ಹೊಡೆತಕ್ಕೆ ಓಲಾಡಿ ಓಲಾಡಿ ಗಿಡ ಮರಗಳೆಲ್ಲ ಸಾಷ್ಟಾಂಗ ಬಿದ್ದಂತೆ ನೆಲಮುಟ್ಟಿ ಮುಟ್ಟಿ ಏಳ ತೊಡಗಿದ್ದವು. ಆದರೆ ಈ ಸರ್ಕಸ್ಸನ್ನೂ ಎಷ್ಟು ಹೊತ್ತು ತಾನೆ ಮಾಡಿಯಾವು ? ಅದೂ ಗಾಳಿ ಒಂದೇ ದಿಕ್ಕಿನಲ್ಲಿ ಬೀಸಿದ್ದರೆ ಹೇಗೋ ಹಾಗೆ, ಬಗ್ಗಿ ಎದ್ದೂ ಬಗ್ಗೀ ಎದ್ದೂ ನಿಭಾಯಿಸುತ್ತಿದ್ದವೋ ಏನೋ. ಆದರೆ ಗಾಳಿ ಚಕ್ರ ಸುತ್ತಿದಂತೆ ಸುತ್ತಾ ನಾಲ್ಕು ದಿಕ್ಕಿಗೂ ಮರಗಳನ್ನು ಓಲಾಡಿಸಿ ಬಟ್ಟೆ ಹಿಂಡಿದಂತೆ ತಿರುಪುತ್ತಿತ್ತು. ಹಾಗಾಗಿ ದಿನ ಕಳೆಯುವುದರೊಳಗೆ ಲಟ ಲಟ ಕಾಂಡ ಮುರಿದು ಅನೇಕ ಮರಗಳು ಉರುಳಿದವು. ಗಾಳಿಯಲ್ಲಿ ಅದುರಿ ಅದುರಿ ಎಲೆಗಳೆಲ್ಲಾ ಹರಿದು ತೊಟ್ಟು ಕಳಚಿ ತೂರಿ ಹೋಗಿ, ಅನೇಕ ಮರಗಳು ಬೋಳಾಗಿ ಹೋದವು.

ಬಾಳೆ ಮರಗಳಂತೂ ಮುಕ್ಕಾಲು ಪಾಲು ಬಿದ್ದು ಹೋದರೆ ಹಾಗೂ ಹೀಗೂ ನಿಂತಿದ್ದ ಬಾಳೆಮರಗಳ ಎಲೆಗಳೆಲ್ಲ ಸಿಗಿದು ಊಟಕ್ಕೆ ಸಹ ಅಂಗೈ ಅಗಲದ ಎಲೆ ಸಿಕ್ಕುವಂತಿರಲಿಲ್ಲ"[೧೭].

ಇಂತಹ ಗಾಳಿಯ ಹೊಡೆತದಿಂದಾಗಿ ಅಲ್ಲಿನ ವಾತಾವರಣ ಸಂಪೂರ್ಣ ವ್ಯಾಕುಲ ಮಯವಾದ ಸನ್ನಿವೇಶವನ್ನು ಗುರುತಿಸುತ್ತಾ. ಈ ವಾತಾವರಣ ಅಲ್ಲಿನ ಜನ ಜೀವನದ ಮೇಲೆ ಉಂಟು ಮಾಡಿದ, ಪರಿಣಾಮವನ್ನು ಸೂಚಿಸುತ್ತಿತ್ತು.

ಸೀಗೇಗೌಡರ ಮನೆಯ ಮುಂದಿದ್ದ ಹೆಬ್ಬಲಸಿನ ಮರವು ಗಡ್ಡ ಮೀಸೆ ಬೆಳೆದಂತೆ ನಾನಾ ತರದ ಬಂದಳಿಕೆಗಳಿಂದ ಕೂಡಿದ್ದು. ಅದರ ಕೊಂಬೆಗಳ ಬಿರುಕಿನಿಂದ, ಬಸರಿ ಮರ, ಅರಳಿಮರದ ಸಸಿಗಳು ಹುಟ್ಟಿ ನೆಲದವರೆಗೂ ಬೇರು ಬಿಟ್ಟಿರುವುದನ್ನು ನೋಡಿದರೆ ಇದು ಯಾವ ಜಾತಿಯ ಮರವೆಂದು ಗುರುತಿಸುವುದು ಕಷ್ಟವೆಂಬಂತೆ ಬಹಳ ದಷ್ಟ ಪುಷ್ಟವಾಗಿ ಬೆಳೆದಿದ್ದ ಮರ ಗಾಳಿ ಮಳೆಗಳನ್ನು ಅನೇಕ ಶತಮಾನಗಳಿಂದ ಪ್ರತಿರೋಧಿಸಿಕೊಂಡು ಬಂದಿದ್ದ ಮರ ಮೂರು ರಾತ್ರಿ ಮೂರು ಹಗಲು ಬೀಸಿದ ಬಿರುಗಾಳಿಗೆ ತತ್ತರಿಸಿ ಬಿದ್ದು ಮುಂದೆ ಅದರಿಂದ ಆಗುವ ಹಲವು ಅನಾಹುತಗಳಿಗೆ ಸಾಕ್ಷಿಯೆಂಬಂತಿತ್ತು.

ಅಡಿ ಟಿಪ್ಪಣಿ

1. ಪರಿಸರದ ಕತೆ – ತೇಜಸ್ವಿ, ಪು. ಸಂ – 01
2. ಅದೇ ಪು. ಸಂ. – 04
3. ಅದೇ ಪು. ಸಂ. – 04
4. ಅದೇ ಪು. ಸಂ– 7
5. ಅದೇ ಪು. ಸಂ.–31
6. ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು ಪು.ಸಂ. – 62
7. ಅದೇ ಪು.ಸಂ. – 91
8. ಅದೇ ಪು.ಸಂ. – 79
9. ಅದೇ ಪು.ಸಂ. – 85
10. ಹುಲಿಯೂರಿನ ಸರಹದ್ದು – ತೇಜಸ್ವಿ, ಪು.ಸಂ. – 02
11. ಅದೇ, ಪು.ಸಂ. – 17
12. ಅದೇ ಪು.ಸಂ. – 18
13. ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು ಪು.ಸಂ. – 01
14. ಅದೇ, ಪು.ಸಂ. – 05
15. ಅದೇ ಪು.ಸಂ. – 64
16. ಅದೇ ಪು.ಸಂ. – 80
17. ಕಿರಗೂರಿನ ಗಯ್ಯಾಳಿಗಳು – ತೇಜಸ್ವಿ, ಪು.ಸಂ. – 03

ಅಧ್ಯಾಯ-4

ತೇಜಸ್ವಿಯವರ ಕಥೆಗಳಲ್ಲಿ ಪರಿಸರ

ಪರಿಸರದ ಬಗೆಗೆ ಬರೆಯುತ್ತ ಲೇಖಕರು ತಮ್ಮ ಮನೆಯ ಬಗ್ಗೆ, ತಮ್ಮ ಸ್ನೇಹಿತರ ಬಗ್ಗೆ. ತಮ್ಮ ಸ್ನೇಹಿತರ ಬಗ್ಗೆ, ಆಳುಕಾಳುಗಳ ಬಗ್ಗೆ, ತಮ್ಮ ವೃತ್ತಿ-ಹವ್ಯಾಸ-ಸಾಹಸಗಳ ಬಗ್ಗೆ ತಮ್ಮ ನೆನಪುಗಳನ್ನು ಬಿಚ್ಚಿಡುತ್ತಾ ಹೋಗುತ್ತಾರೆ. ಹಾಗಾಗಿ ಪರಿಸರದ ಕಥೆಯಲ್ಲಿ ಮರಗಿಡ, ಪಶುಪಕ್ಷಿಗಳ ಜಗತ್ತಿನಂತೆ ಒಂದು ಮನುಷ್ಯ ಪರಿಸರವೂ ತೇಜಸ್ವಿಯವರ ಮಾನಸಿಕ ಲೋಕದ ಒಳ ಪರಿಸರವೂ ಏಕಕಾಲದಲ್ಲಿ ಬಿಚ್ಚಿಕೊಳುತ್ತ ಹೋಗುತ್ತವೆ. ಇದರಿಂದಾಗಿ ಬರವಣಿಗೆಗೆ ವಿಶೇಷವಾದ ಲವಲವಿಕೆ, ಜೀವಂತಿಕೆ ಬಂದಿದೆ.

ಒಂದು ಪರಿಸರ ಎಂದರೆ ಕೇವಲ ಮರ-ಗಿಡ ಪಶು ಪಕ್ಷಿಗಳಲ್ಲ, ಅವುಗಳೊಂದಿಗೆ ನಮ್ಮ ಸಂಬಂಧವು ಕೇವಲ ನಮ್ಮ ವೈಯಕ್ತಿಕ ಸಂಸ್ಕಾರದಿಂದಲ್ಲದೆ ನಮ್ಮ ಪುರಾಣ, ಇತಿಹಾಸ, ಸಮಾಜ, ಸಂಸ್ಕೃತಿ, ರಾಜಕೀಯ, ಅರ್ಥವ್ಯವಸ್ಥೆ ಹೀಗೆ ಬದುಕಿನ ಹಲವು ಹತ್ತು ಸ್ತರಗಳಿಂದ ನಿರ್ದೇಶಿತವಾಗುತ್ತಿರುತ್ತದೆ. ತೇಜಸ್ವಿಯವರ ವಿನೋದ ಅವರ ಬರವಣಿಗೆಯ ಲಘುದಾಟಿಗೆ ಕಾರಣವಾಗಿದೆಯಷ್ಟೆ. ಆದರೆ ಅದು ವಿಷಯವನ್ನು ಎಂದೂ ಸರಳೀಕರಿಸುವುದಿಲ್ಲ. ಯಾವುದನ್ನೂ ಅತಿ ವಿಜೃಂಭಿಸುವುದೂ ಇಲ್ಲ. ಕೆಲವೊಮ್ಮೆ ವೈನೋದಿಕ ಅತಿಶಯೋಕ್ತಿ ವಿಷಯವನ್ನು ಮಾನವೀಕರಿಸಲು, ಅನಗತ್ಯ ಭಾರವನ್ನು ತೊಡೆದು ಹಾಕಲು, ಭಾವಾತಿರೇಕವನ್ನು ಕೊಡವಿ ವಿಮರ್ಶಾತ್ಮಕ ದೂರವನ್ನು ಕಾಯ್ದುಕೊಳ್ಳಲು ಪ್ರಜ್ಞಾಪೂರ್ವಕ ಬಳಕೆಯಾಗುತ್ತದೆ. ಪರಿಸರ ನಾಶದ ಬಗ್ಗೆ ಒಂದು ಸಂಸ್ಕೃತಿ ಕಣ್ಮರೆಯಾಗುತ್ತಿರುವ ಬಗ್ಗೆ ಗಾಢ ವಿಷಾದದಿಂದ ಬರೆಯುವಾಗಲೂ ಅದು ಅಳುಬುರುಕುತನವಾಗದಂತೆ ತಡೆಯುವ ಬೌದ್ಧಿಕ ವಿಧಾನವಾಗಿ ಕೂಡ ವಿನೋದ ದುಡಿಯುತ್ತದೆ.

ಅನಾಗರೀಕ ಅಮಾನವೀಯ ಜಂತುಗಳೋ, ಕರುಣೆಗೆ ಮಾತ್ರ ಪಾತ್ರವಾಗಬಲ್ಲ ಮೂರ್ತಿಗಳೋ ಆಗಿ ಬಿಡುತ್ತಿದ್ದ ಜೀವಿಗಳು ಚೈತನ್ಯಪೂರ್ಣ ಮನುಷ್ಯರಂತೆ ತುಂಬು ಉತ್ಸಾಹ, ಮಾನವೀಯತೆಗಳಲ್ಲಿ ಗೋಚರಿಸಲು ಸಾಧ್ಯವಾಗುವುದೂ ಈ ವೈನೋದಿಕ ದರ್ಶನದಿಂದಾಗಿಯೇ ಆದ್ದರಿಂದಲೇ ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅರ್ಥಪೂರ್ಣವಾದುದ್ದನ್ನು ವೈಚಾರಿಕ ಭಾರವಿಲ್ಲದ ಸರಳ ಆಪ್ತ ಧಾಟಿಯಲ್ಲಿ ಸೂಚಿಸಿ ಬಿಡುವುದು ಲೇಖಕರಿಗೆ ಸಾಧ್ಯವಾಗುತ್ತದೆ.

ಮನುಷ್ಯ ಪರಿಸರದೊಂದಿಗೆ ಎರಡು ರೀತಿಯ ಸಂಬಂಧವನ್ನು ಗುರುತಿಸಿಕೊಳ್ಳುತ್ತಾನೆ. ಮೊದಲನೆಯದು ನೈಸರ್ಗಿಕ ಪರಿಸರದೊಡನೆಯ ಸಂಬಂಧ ಎರಡನೆಯದಾಗಿ ಮಾನವ ನಿರ್ಮಿತ ಸಮಾಜದ ಪರಿಸರದೊಡನೆಯ ಸಂಬಂಧ, ಇವುಗಳಲ್ಲಿ ನಿಸರ್ಗದೊಡನೆಯ ಸಂಬಂಧವು ವ್ಯಕ್ತಿವಿಶಿಷ್ಟತೆಗೆ ಅನುಗುಣವಾಗಿ, ಭಾವನಾತ್ಮಕವಾಗಿ, ವೈಚಾರಿಕವಾಗಿ ಅಥವಾ ತಾತ್ವಿಕವಾಗಿ ಕಾಣಲ್ಪಡುತ್ತಿರುತ್ತದೆ. ಸಮಾಜದೊಡನೆಯ ಮನುಷ್ಯನ ಸಂಬಂಧವೂ ನಿಸರ್ಗದೊಡನೆಯ ಸಂಬಂಧದಂತೆಯೇ ಇದ್ದರೂ ಇದರಲ್ಲಿ ಮಾನವೀಯ ಸಂಬಂಧಗಳು ಮುಖ್ಯವಾಗುತ್ತವೆ.

ಈ ಎರಡೂ ಸಂದರ್ಭಗಳಲ್ಲಿ ತನ್ನಿಂದ ಹೊರಗಿನ ಜಗತ್ತಿನ ಸಂಪರ್ಕವನ್ನು ವ್ಯಕ್ತಿ ಹೇಗೆ ಸಾಧಿಸುತ್ತಿದ್ದಾನೆಂಬುದು ಮಹತ್ವದ ಸಂಗತಿಯಾಗಿರುತ್ತದೆ. ಮತ್ತು ಈ ಹಂತದಲ್ಲಿ ಪರಿಸರ ಮತ್ತು ಮನುಷ್ಯನ ನಡುವಿನ ಕೊಡುಕೊಳ್ಳುಗಳು ಮುಖ್ಯವಾಗುತ್ತವೆ. ಪರಿಸರ ಮನುಷ್ಯನನ್ನು ರೂಪಿಸುತ್ತದೆಯೋ, ಮನುಷ್ಯನೇ ಪರಿಸರವನ್ನು ತನ್ನ ಅಪೇಕ್ಷೆಗೆ ತಕ್ಕಂತೆ ಬದಲಾಯಿಸುತ್ತಿರುತ್ತಾನೋ ಎಂಬುದು ಸರಳವಾಗಿ ನಿರ್ಧಾರವಾಗುವಂತಹ ಅಂಶವಲ್ಲ. ಆದರೆ ಈ ಎರಡರ ಕರ್ಷಣದಲ್ಲಿ ಒಮ್ಮೆ ಪರಿಸರದ ಕೈ ಮೇಲಾದರೆ, ಇನ್ನೊಮ್ಮೆ ಮನುಷ್ಯನ ಕೈ ಮೇಲಾಗಬಹುದು. ಆದರೆ ಈ ಎರಡೂ ಮೇಲಾಟಗಳು ತಾತ್ಕಾಲಿಕವೇ, ಮನುಷ್ಯನ ಪ್ರಜ್ಞೆ ಮತ್ತು ಪರಿಸರದ ದ್ವಂದ್ವದಲ್ಲಿ ನಡೆಯುವ ಬದುಕು ಮಾತ್ರ ಮುಖ್ಯವಾಗುತ್ತದೆ.

ಇಂತಹ ಬದುಕು ಕಾಲಕಾಲಕ್ಕೆ ತನ್ನ ಸುತ್ತಲಿನ ಪರಿಸರಕ್ಕೆ ಸ್ಪಂದಿಸುವಾಗ್ಗೆ ರೂಢಿಸಿಕೊಳ್ಳುತ್ತಾ ಸಾಗುವ ತಾತ್ವಿಕತೆಗಳು ಅದು ಭಾವನಾತ್ಮಕವಾಗಿರಲಿ, ವೈಚಾರಿಕವಾಗಿರಲಿ ಒಂದು ಸಮಾಜದ ಬದುಕನ್ನು ಕಟ್ಟುತ್ತಲೋ, ಮುರಿಯುತ್ತಲೋ ಅಥವಾ ಮುರಿಯುತ್ತಿರುವಂತೆಯೇ ಕಟ್ಟುತ್ತಲೋ ಸಾಗುತ್ತಿರುತ್ತವೆ. ಮುರಿಯುವ ಮತ್ತು ಕಟ್ಟುವ ಪ್ರಕ್ರಿಯೆಗಳು ಒಂದೇ ನಾಣ್ಯದ ಎರಡು ಮುಖಗಳಂತೆಯೇ ಇದ್ದರೂ ಸದ್ಯದ ವರ್ತಮಾನವನ್ನು ಯಾವ ದಿಕ್ಕಿನೆಡೆಗೆ ಈ ಸಂಬಂಧಗಳು ಚಲಿಸುವಂತೆ ಮಾಡುತ್ತವೆ ಎನ್ನುವುದು ಸಂಸ್ಕೃತಿಯ ಚಿಂತನೆಯ ಸಂದರ್ಭದಲ್ಲಿ ಮುಖ್ಯವಾಗುತ್ತದೆ.

ತೇಜಸ್ವಿಯವರ "ಪರಿಸರದ ಕತೆಗಳು" ಕೃತಿಯಲ್ಲಿ ಹಾವುಗೊಲ್ಲರ ಎಂಗ್ಟ ಒಮ್ಮೆ ಸಾರ್ವಜನಿಕ ಪ್ರದರ್ಶನದ ಸಮಯದಲ್ಲಿ ದಾಸರ ಹಾವು ಎಂಕ್ಟನ ಮೈಮೇಲೆ ಹರಿದಾಡುತ್ತಾ ಚಲಿಸುತ್ತಿರುವಂತೆಯೇ ಅವನನ್ನು ತನ್ನ ಉಕ್ಕಿನ ಹಿಡಿತದಲ್ಲಿ ಸಿಕ್ಕಿಸಿಕೊಂಡುಬಿಡುತ್ತದೆ. ಹಾವಿನ ಬಿಗಿಮುಷ್ಟಿಯಲ್ಲಿ ಸಿಕ್ಕಿಕೊಂಡಿರುವುದು ಅಲ್ಲಿ ಸುತ್ತ ಮುತ್ತ ನೋಡುತ್ತನಿಂತ ಜನಕ್ಕೆ ಗೊತ್ತಾಗುವುದೇ ಇಲ್ಲ. ಕೊನೆಗೆ ಉಸಿರೇ ನಿಲ್ಲುವ ಹಂತದಲ್ಲಿ ಕೊನೆಯ ಪ್ರಯತ್ನವಾಗಿ ಹಾವಿನ ಹೊಟ್ಟೆಯನ್ನು ಚೂರಿಯ ಸಹಾಯದಿಂದ ಬಗೆಯುತ್ತಾನೆ. ಹಾಗು ಹಾವಿನ ಹಿಡಿತ ನಿಧಾನವಾಗಿ ಸಡಿಲಿಸಿ ಎಂಕ್ಟ ಉಳಿದುಕೊಳ್ಳುತ್ತಾನೆ. ಇದನ್ನು ಸಾಂಕೇತಿಕವಾಗಿ ನೋಡಿದರೆ ಪರಿಸರವನ್ನು ವ್ಯಕ್ತಿ ಹೇಗೆ ಭಾವಿಸುತ್ತಿದ್ದಾನೆ ಎನ್ನುವುದನ್ನು ಗಮನಿಸಬಹುದು. ಈ ಕಥೆಯಲ್ಲಿ ಸಾಮಾಜಿಕ ಪರಿಸರ ಮತ್ತು ವ್ಯಕ್ತಿ ಪ್ರಜ್ಞೆಯ ಸಂಘರ್ಷದಲ್ಲಿ ಪರಿಸರವು ದಾಸರ ಹಾವಿನಂತೆ ಮೆಲ್ಲಗೆ ಮೈಮೇಲೆ ಹರಿದಾಡುತ್ತಲೇ ಅವನನ್ನು ಉಸಿರುಕಟ್ಟಿಸಿಬಿಡುವುದನ್ನು ವ್ಯಕ್ತಿ ಪ್ರಜ್ಞೆ ಅರ್ಥೈಸಿಕೊಂಡು ಆ ಪರಿಸರವನ್ನು ಬಿಟ್ಟು ವ್ಯಕ್ತಿನಿಷ್ಠ ನೆಲೆಯಲ್ಲಿ ತನ್ನದೇ ಬದುಕನ್ನು ಕಂಡುಕೊಳ್ಳುವ ಹೊಸ ಧೋರಣೆಯೊಂದು ರೂಪಿತವಾಗುತ್ತಿರುವುದು ಕಾಣಿಸುತ್ತದೆ.

ಸಾಮಾಜಿಕ ಪರಿಸರದ ಸವಾಲನ್ನು ತೇಜಸ್ವಿ "ಹುಲಿಯೂರಿನ ಸರಹದ್ದು" ಕತಾಸಂಕಲನದಲ್ಲಿ ಜಾತೀಯತೆಯಾಗಿ, ಸಾಮಾಜಿಕ ಕಟ್ಟು ಪಾಡುಗಳಾಗಿ ಕಂಡುಕೊಳ್ಳುತ್ತಾರೆ. ಆವೇಶದ, ಆಕ್ರೋಶದ ಸೋಮು ಜಾತೀಯತೆಯನ್ನು ಕಟ್ಟು ಪಾಡುಗಳನ್ನು ಮೀರುವುದರಲ್ಲಿ ಪ್ರತಿಭಟನೆಯ ಸ್ವರೂಪ ಕಾಣುತ್ತಾನೆ.

ಹುಲಿಯೂರಿನ ಮೇಲೆ ತಿರುಗುತ್ತಿರುವ ಗರುಡವು ತನ್ನ ನೆರಳನ್ನು ತಾನು ಸುತ್ತುತ್ತಿರುವ ಸ್ಥಳದ ಮೇಲೆಲ್ಲಾ ಹರಡುತ್ತಿರುವುದನ್ನು ಹೇಳುತ್ತಿರುವಂತೆಯೇ ಆ ಗರುಡ ಏನನ್ನೋ ಒತ್ತಿ ಮತ್ತೆ ಮತ್ತೆ ಹೇಳುವಂತೆ ಹುಲಿಯೂರಿನ ನೆತ್ತಿಯ ಮೇಲೆ ಗಿರಗಿರನೆ ಸುತ್ತಿಯೇ ಸುತ್ತುತ್ತಿತ್ತು. ತನ್ನ ನಿಯಂತ್ರಣವನ್ನು ಹುಲಿಯೂರಿನ ಮೇಲೆ ಸಾರುತ್ತಿರುವಂತೆ ತಿರುಗುತ್ತಿರುವ ಗರುಡನ ಚಿತ್ರವು ಸೋಮು ತನ್ನ ಸುತ್ತಲಿನ ಪರಿಸರದ ಬಗೆಗೆ ಗ್ರಹಿಸುತ್ತಿರುವುದನ್ನು ಮತ್ತೊಂದು ರೂಪದಲ್ಲಿ ಹೇಳುತ್ತಿರುವುದಾಗಿದೆ. ಪರಿಸರದ ಹಿಡಿತ ತನ್ನ ಮೇಲೆ ಬಲವಾಗಿ ಇರುವುದನ್ನು ಗುರುತಿಸಿಕೊಂಡವನಿಗೆ, ಅದರಿಂದ ಹೊರಬರಬೇಕಾಗಿದೆ. ಅವನ ಆಲೋಚನೆಯ ಈ ಅಂಶಗಳು ಗರುಡನ ಸಂಕೇತದಲ್ಲಿ ನಿರೂಪಿಸಲ್ಪಡುತ್ತವೆ. ಹಾಗೆಯೇ, ಸುಮ್ಮನೆ ಕುಳಿತು ಯೋಚಿಸುತ್ತಿರುವವನು ತನ್ನ ಸುತ್ತಲಿನ ಜಗತ್ತನ್ನು ನೋಡುತ್ತಿರುವಾಗ್ಗೆ, ನೋಡುತ್ತಿರುವ

ವಿವರಗಳು, ಇನ್ನೂ ಆಳಕ್ಕೆ ಇಳಿದು, ಒಂದು ಜೀವಿ ಮತ್ತೊಂದನ್ನು ಬಲಿ ತೆಗೆದುಕೊಳ್ಳುತ್ತಿರುವುದನ್ನು ಕಾಣುತ್ತಾನೆ "ಅಲ್ಲೇ ತಾಯಿ ಹೇಂಟೆ ಶಿಶುಪಿನ ಶವದ ಇದಿರೇ ಮಳೆಹುಳು ಮತ್ತು ಗೆದ್ದಲು ಹುಳುಗಳು ಬುಳುಬುಳು ಹೊರನುಗ್ಗುತ್ತಿದ್ದ ತೂತೊಂದರ ಬಳಿ ನಿಂತು ಆ ಹುಳುಗಳನ್ನೆಲ್ಲಾ ಒಂದೇ ಸಮನೆ ಗುಳುಂ ಎಂದು ಗುಳುಕಾಯಿಸುತ್ತಿತ್ತು"[7].

ಹೀಗೆ ಒಂದು ಇನ್ನೊಂದನ್ನು ಬಲಿ ತೆಗೆದುಕೊಳ್ಳುತ್ತಿರುವುದನ್ನು ನೋಡುತ್ತಿರುವುದು, ಅವನ ಮನಸ್ಸಿನಲ್ಲಿ ಸಂಪ್ರದಾಯ, ಪರಂಪರೆಯ ಹೆಸರಿನಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಬಲಿ ಹಾಕಲು ಅಥವಾ ನಿಯಂತ್ರಣದಲ್ಲಿರಿಸಿಕೊಳ್ಳುತ್ತಿರುವುದನ್ನು ಕುರಿತು ಯೋಚಿಸುತ್ತಿರುವುದನ್ನು ಪರೋಕ್ಷವಾಗಿ ಹೇಳುತ್ತಿರುತ್ತದೆ.

ಸೋಮುವಿನ ಮನಸ್ಸಿನಲ್ಲಿ ಆಗುತ್ತಿರುವ ಭಾವನೆಗಳನ್ನು ಗರುಡನ ಚಿತ್ರದ ಮೂಲಕ, ಗೆದ್ದಲು ಹುಳುವಿನ ಸಂಕೇತದ ಮೂಲಕ ಗುರುತಿಸಲಾಗುತ್ತದೆ. ಸೋಮುವಿನ ಜಗತ್ತಿನ ಗ್ರಹಿಕೆಯನ್ನು ಅವನು ನೋಡುತ್ತಿರುವ ವಿವರಗಳ ಮೂಲಕ ಹೇಳಲಾಗುತ್ತದೆ.

ಹೀಗೆಯೇ "ಊರ್ವಶಿ" ಕತೆಯಲ್ಲಿನ ಸೋಮುವಿನ ಚಿತ್ರವೂ ಇದೆ. ಅವನನ್ನು ತ್ಯಜಿಸಿ ಹೋದ ಸುಭದ್ರೆಯನ್ನು ಕುರಿತು ಚಿಂತಿಸುವ ಸೋಮುವಿನ ಮನಸ್ಸಿನ ಚಿತ್ರಣವನ್ನು ಪೌರಾಣಿಕ ಕಥೆಯ ಊರ್ವಶಿ ಪುರೂರವನ ಸಂಕೇತದ ಮೂಲಕ ನಿರೂಪಿಸಲಾಗುತ್ತದೆ. ಪುರೂರವನ ಪರಿತಪಿಸುವಿಕೆಯಂತೆಯೆ ಸೋಮುವಿನದು ಇದ್ದರೂ, ಊರ್ವಶಿ, ಪುರೂರವರಿಗೆ ಸಿಕ್ಕ ಶಾಪ ಈ ಕಥೆಯಲ್ಲಿ ನಾಯಿಯ ಕಡಿತದ ಮೂಲಕ ನಿರೂಪಿಸಲ್ಪಟ್ಟಿದೆ. ಆದರೆ ಸೋಮುವಿನ ವಿರಹಾಲಾಪವನ್ನು ಪುರೂರವನ ವಿರಹಾಲಾಪಕ್ಕೆ ಸೂಚ್ಯವಾಗಿಸಿದೆ. "ಥೂ ನಾನೊಬ್ಬ ನಿರಂತರ ಪುರೂರವ, ಚಿರವಿರಹಿ" ಎಂದು ಕೊಳ್ಳುವ ಸೋಮುವಿನ ದುಃಖಕ್ಕೆ ಕೊನೆ ಸುಭದ್ರೆಯ ಪತ್ರ ಸಿಗುವುದರೊಡನೆ ಮತ್ತು ಅವನು ಹುಡುಕುತ್ತಿದ್ದ ನಾಯಿ ಸಿಗುವುದರೊಡನೆ ಸಮಾಪ್ತಿಯಾಗುತ್ತದೆ. ಅಲ್ಲಿಗೆ ಅವನ ವಿರಹಾಗ್ನಿಯೂ ಕೊನೆಯಾಗುತ್ತದೆ.

ಇಂತಹ ಕಥೆಗಳು ವ್ಯಕ್ತಿಯ ಮನಸ್ಸು ಆಲೋಚಿಸುತ್ತಿರುವುದನ್ನು ಹೇಳಲು ಸಂಕೇತಗಳನ್ನು ಅಭಿವ್ಯಕ್ತಿಯ ಸಾಧನಗಳನ್ನಾಗಿಸಿಕೊಳ್ಳುತ್ತಿರುವುದು ಅತ್ಯಂತ ಸ್ಪಷ್ಟವಾಗಿಯೆ ಕಾಣಬಹುದಾಗಿದೆ. ವ್ಯಕ್ತಿಯ ಮನಸ್ಸಿನ ನೋವುಗಳನ್ನು ಹೇಳುವುದರಾಚೆಗೆ ಅವನ ಮನಸ್ಸಿನ ಗ್ರಹಿಕೆಯಾಚೆಗೆ ಇನ್ನೂ ಯಾವ ಉದ್ದೇಶವೂ ಗರುಡ, ಕೋಳಿ, ಹುಚ್ಚು ನಾಯಿಗಾಗಿ ಅಲೆದಾಟ ಇವುಗಳಲ್ಲಿ ಇಲ್ಲ.

"ಕಿರಗೂರಿನ ಗಯ್ಯಾಳಿಗಳು" ಕಥೆಯಲ್ಲಿ ಮೂರು ದಿನ ಬೀಸುವ ಬಿರುಗಾಳಿ, ಮಳೆ ಗುಡುಗು-ಸಿಡಿಲು, ನಂತರ ಬೀಸುವ ಬಿರುಗಾಳಿಯ ದೆಸೆಯಿಂದ ಉರುಳಿ ಬೀಳುವ ಮರ ಇವೆಲ್ಲಾ ಪ್ರಾಕೃತಿಕ ವಿಕೋಪವೊಂದನ್ನು ಹೇಳುತ್ತಿರುತ್ತದೆ. ಆದರೆ ಬಿದ್ದ ಮರವನ್ನು ಕತ್ತರಿಸಲು ಹೋಗಿ, ಅದು ದಿಮ್ಮಿಯಾಗಿ ಉರುಳುರುಳಿ ಸಾಗುವ ಘಟನೆಯು, ನಿಂತ ಸಾಮಾಜಿಕ ಜೀವನವು ದಿಮ್ಮಿ ಉರುಳುವಿಕೆಯೊಡನೆ ಚಲಿಸತೊಡಗಿದ್ದು ಕಾಣಿಸುತ್ತದೆ. ಆದರೆ ದಿಮ್ಮಿಗಳು ಉರುಳುವ ಪ್ರಕ್ರಿಯೆಗಳು, ತನ್ನೊಡನೆ ಅಲ್ಲಿನ ಸಾಮಾಜಿಕ ಜನಜೀವನವನ್ನು ಚಲಿಸುವಂತೆ ಮಾಡುವ ಘಟನೆ ಸರ್ವೇಸಾಧಾರಣವಾಗಿ ನಿರೂಪಿಸಲ್ಪಡುತ್ತದೆ. ಆದರೆ ಸ್ಥಗಿತಗೊಂಡಿದ್ದ ಸಾಮಾಜಿಕ ಜನಜೀವನವನ್ನು ಹೊಸ ಬದಲಾವಣೆಯೊಡನೆ ಚಲಿಸುವಂತೆ ಮಾಡುವುದನ್ನು ಧ್ವನಿಸುತ್ತದೆ.

"ಅಬಚೂರಿನ ಪೋಸ್ಟಾಫೀಸು" ಸಂಕಲನ ತೇಜಸ್ವಿ ಕಥೆಗಳ ಮತ್ತೊಂದು ಮಹತ್ವದ ಪಲ್ಲಟವನ್ನು ಸೂಚಿಸುತ್ತದೆ. ಇಲ್ಲಿ ಬರವಣಿಗೆ ಸಮಾಜ ಮುಖಿಯಾಗಿದೆ, ಸಂಸ್ಕೃತಿ ಮುಖಿಯಾಗಿದೆ. ಇಲ್ಲಿ ವ್ಯಕ್ತಿಗಳ ಸಮಸ್ಯೆಗಳು ಕೇವಲ ವೈಯಕ್ತಿಕ ಸ್ವರೂಪವಲ್ಲ ಮತ್ತು ವ್ಯಕ್ತಿಗಳು ಕೇವಲ ವ್ಯಕ್ತಿಗಳಲ್ಲ. ಅವರೆಲ್ಲ ನಿರ್ದಿಷ್ಟ ಸಾಮಾಜಿಕ ವರ್ಗಗಳಿಗೆ ಸೇರಿದವರೂ ಆಗಿರುತ್ತಾರೆ. ಇವರ ಬದುಕಿನ ವಿದ್ಯಮಾನಗಳನ್ನು ಇವರ ಕೌಟುಂಬಿಕ ಹಿನ್ನಲೆ, ಇವರ ವೈಯಕ್ತಿಕ ವ್ಯಕ್ತಿತ್ವದ ಅಂಶಗಳು ನಿಯಂತ್ರಿಸುವಂತೆ ಐತಿಹಾಸಿಕ ಶಕ್ತಿಗಳೂ, ಪ್ರಕ್ರಿಯೆಗಳೂ ನಿರ್ದೇಶಿಸಿ ನಿಯಂತ್ರಿಸಲಾರಂಭಿಸುತ್ತವೆ. ಒಂದು ಸಮಾಜವನ್ನು ಪ್ರವೇಶಿಸಿದ ಹೊಸ ಮೌಲ್ಯಗಳು, ಸಂಸ್ಥೆಗಳು ಅದುವರೆಗಿನ ಬದುಕಿನ ಆದ್ಯತೆ, ಸಂದರ್ಭಗಳನ್ನೇ ಅಲ್ಲಾಡಿಸಿ ಬಿಡುವುದನ್ನು ನಾವು ಗಮನಿಸುತ್ತೇವೆ.

ಅಬಚೂರಿನ ಪೋಸ್ಟಾಫೀಸು ಪ್ರಾರಂಭವಾದ ನಂತರ ಬೋಬಣ್ಣನ ಸಾಮಾಜಿಕ ಅಂತಸ್ತೇ ಒಂದು ಮೆಟ್ಟಿಲು ಮೇಲೇರುತ್ತದೆ. ಬೋಬಣ್ಣ ತನ್ನ ಈ ವೃತ್ತಿಗಾಗಿ ಯಾವ ಯಾವ ವಿದ್ಯೆಗಳ ಅವಶ್ಯಕತೆಯಿದೆಯೋ ಅವುಗಳನ್ನೆಲ್ಲಾ ಕಲಿಯಲಾರಂಬಿಸುತ್ತಾನೆ. ಇದರಿಂದ ಬೋಬಣ್ಣನಲ್ಲಾದ ವೈಯಕ್ತಿಕ ಪರಿವರ್ತನೆ, ಅವನ ಕೌಟುಂಬಿಕ ಜೀವನದಲ್ಲಿ ಎದ್ದ ಹೊಸ ಸಮಸ್ಯೆಗಳ ಸುತ್ತ ಕಥೆ ಬೆಳೆಯುತ್ತಾ ಒಂದು ಹಂತದಲ್ಲಿ ಪೋಸ್ಟಾಫೀಸಿನ ವ್ಯವಹಾರಗಳು ಹೆಚ್ಚುತ್ತಾ ಬಂದಂತೆ ಬೋಬಣ್ಣನ ಮನಶ್ಯಾಂತಿ ನಶಿಸುತ್ತಾ ಬಂದಿತು.

ಮೊದಲು ಪೋಕರಿಯಾಗಿ ಆಮೇಲೆ ಸಂಸಾರಿಯಾಗಿ ನೆಮ್ಮದಿಯಾಗಿ ಕಾಲ ಹಾಕಿದ್ದ ಬೋಬಣ್ಣನ ಜೀವನದಲ್ಲಿ ಪೋಸ್ಟಾಫೀಸು ಒಂದು ಬದಲಾವಣೆ ತಂದಿತ್ತು, ಕ್ರಮೇಣ ಆ ಕೆಲಸವೂ ಯಾಂತ್ರಿಕವಾಯ್ತು. ಹಾಗಾಗಿ ಈ ಹೊಸ ಕೆಲಸವನ್ನು ಹೆಚ್ಚು ರಂಜನೀಯ ಮಾಡಿಕೊಳ್ಳುವ ಹೊಸ ತರಲೆಗಳನ್ನು ಅವನು ಹೊಂಚಿಕೊಳ್ಳ ತೊಡಗಿದ. ಅವರಿವರ ಕಾಗದಗಳನ್ನು ಓದುವುದು, ಅಜೀಬನಿಗೆ ಬಂದ ನಗ್ನ ಚಿತ್ರ ನೋಡಿದ ಮೇಲೆ ಪ್ರತಿಯೊಂದು ಕಾಗದಗಳಲ್ಲಿಯೂ ಅಂತಹುದೇ ಚಿತ್ರಗಳಿರಬಹುದೆಂದು ಓದಲು ತೊಡಗುತ್ತಿದ್ದ, ಇದರಿಂದಾಗಿ ಬೋಬಣ್ಣ ಅನೇಕ ಸಮಸ್ಯೆಗಳಿಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ಕೊನೆಗೆ ಬೊಬಣ್ಣ ಊರು ಬಿಟ್ಟು ಹೋಗುವಂತೆ ಮಾಡಲಾಗುತ್ತದೆ. ಅವನ ಸಹಜ ನಡವಳಿಕೆಯೇ ಮಾಚಮ್ಮನಿಗೆ, ಅವನ ಹೆಂಡತಿಗೆ ವಿಚಿತ್ರವಾಗಿ ಕಾಣಿಸುತ್ತದೆ. ಬೇಲಾಯುಧನ ಮಗಳಿಗೆ ಬಂದ ಪತ್ರವೇ ಕಾರಣವಾಗಿ ಉಂಟಾಗುವ ದೊಡ್ಡ ಹಗರಣವೇ ಬೋಬಣ್ಣ, ಪೋಕರಿಯಾಗಿ, ಬೇಜವಾಬ್ದಾರಿಯ ವ್ಯಕ್ತಿಯಾಗಿ ಜನಗಳಿಗೆ ಕಾಣಿಸುತ್ತಾನೆ. ಅವನ ಕುಟುಂಬ ವರ್ಗ ಮತ್ತು ಯಾರೂ ಅವನ ಮನಸ್ಸಿನ ಸ್ಥಿತಿಯನ್ನು ಗುರ್ತಿಸಿಕೊಳ್ಳಲಾರದ ಕಾರಣ ಊರುಬಿಟ್ಟು ಹೋಗುವ ಸ್ಥಿತಿ ಬೋಬಣ್ಣನಿಗೆ ಒದಗುತ್ತದೆ.

ಆಧುನಿಕ ನಾಗರಿಕತೆಯ ಪ್ರವೇಶಕ್ಕೆ ಈ ಪೋಸ್ಟ್ ಆಫೀಸು ಪ್ರತೀಕವಾಗಿ ಅದರಿಂದಾಗಿ ಉಂಟಾಗುವ ಅನಾಹುತಗಳನ್ನು ಈ ಕತೆಯಲ್ಲಿ ತೇಜಸ್ವಿ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ನಾಗರಿಕತೆ ಮತ್ತು ವ್ಯಕ್ತಿ ಸಮಸ್ಯೆಗಳ ನಡುವಿನ ತಾಕಲಾಟಗಳು ಈ ಕತೆಯ ಸೂಕ್ಷ್ಮವಾದ ಅಂಶಗಳಾಗಿವೆ. ತೇಜಸ್ವಿಯವರು ಸಮುದಾಯದ ಮದ್ಯೆ ಇರುವ ವ್ಯಕ್ತಿ ಅನುಭವಿಸುವ ನಿಸ್ಸಹಾಯಕತೆ ಹಾಗೂ ಮನುಷ್ಯನ ಕ್ರೌರ್ಯಗಳನ್ನು ಈ ಕತೆಯೊಳಗೆ ಸಂಯೋಜಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಅವನತಿ' ಕತೆಯಲ್ಲಿ ಸೂರಾಚಾರಿಯನ್ನು ಕತೆ ವರ್ಣಿಸುವ ಬಗೆಯನ್ನು ಅವಶ್ಯ ಗಮನಿಸಬೇಕು.

"ಸೂರಾಚಾರಿಯ ಮೂಲ ಕಸುಬು ಅಲ್ಲಿನ ಕೆತ್ತನೆಯ ಕೆಲಸ, ಹೊಯ್ಸಳರ ಕಾಲದಿಂದ ಶಿಲ್ಪಿಗಳಾಗಿದ್ದ ಮನೆತನ ಅವರದು. ದೇವಸ್ಥಾನದ ಕಂಭ, ಮಾಡು, ತುಳಸೀಕಟ್ಟೆ, ದೇವರ ಸುಂದರ ವಿಗ್ರಹಗಳು ಇತ್ಯಾದಿಗಳನ್ನು ಮಾಡುತ್ತಿದ್ದನು. ಅವನು ಕೊಂಚವೂ ತನ್ನ ಅಸಮಾನ್ಯ

ಕಲೆಗಾರಿಕೆಯ ಬಗ್ಗೆ ಪ್ರಜ್ಞಾವಂತನಾಗಿಲ್ಲದಿದ್ದರೂ ಶ್ರೇಷ್ಠ ಕಲಾವಂತಿಕೆ ಸೂರಾಚಾರಿಯ ಕೈಗಳಿಗೆ ಸಿದ್ಧಿಸಿತ್ತು. ಸೂರಾಚಾರಿ ಕೆಲಸ ಅಚ್ಚುಕಟ್ಟಾಗಬೇಕೆಂಬ ಆಲೋಚನೆಯಿಂದ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದನು. ಆದರೆ ಅದನ್ನೊಂದು ಕಲೆ ಎಂದು ತಿಳಿಯುವುದೇ ಆಗಲಿ ಅಥವಾ ಒಂದು ಅಭಿವ್ಯಕ್ತಿ ಮಾಧ್ಯಮ ಎಂದು ತಿಳಿಯುವುದೇ ಆಗಲೀ ಅವನಿಂದ ಕನಸಿನಲ್ಲೂ ಸಾಧ್ಯವಿರಲಿಲ್ಲ. ಆದರೂ ಅವನೊಬ್ಬ ಮಹಾನ್ ಕಲಾವಿದನೇ ಆಗಿದ್ದ ಇಸ್ಲಾಪುದಕ್ಕೆ ಬರುವುದಕ್ಕೆ ಮುಂಚೆ".

ಇಸ್ಲಾಪುರದ ಸಾಮಾಜಿಕ ಪರಿಸರ ಸೂರಾಚಾರಿಯ ಕಲೆಯನ್ನು ಗುರುತಿಸುವುದಿಲ್ಲ. ಅದು ಆ ಮಟ್ಟದ ಪ್ರಬುದ್ಧತೆಯನ್ನು ಇನ್ನೂ ತಲುಪಿಲ್ಲ. ಹಾಗಾಗಿ ಕ್ರಮೇಣ ಸೂರಾಚಾರಿಯ ಕಲೆ ಅಪ್ರಸ್ತುತವಾಗಿ ಅವನತಿಗೊಂಡ ದುರಂತವನ್ನು ಕತೆ ನಿರೂಪಿಸುತ್ತದೆ. ಮಲೆಸೀಮೆಗೆ ಬಂದ ನಂತರ 'ಅವನಿಗೆ ಸಿಗುತ್ತಿದ್ದ ಕಲ್ಲಿನ ಕೆಲಸವೆಂದರೆ ಅವರಿವರ ಮನೆಯ ನುಣ್ಣಗಾದ ಒರಳು ಕಲ್ಲುಗಳಿಗೆ ಉಳಿ ಹಾಕಿ ಕೊಡುವುದಷ್ಟೆ. ಹೀಗಾಗಿ ಸೂರಾಚಾರಿ ಬೇರೆ ಕೆಲಸಗಳಿಗೆ ಕೈ ಹಾಕಿದನು. ಹೀಗೆ ಸೂರಾಚಾರಿಯ ಜೀವನ ಅವನ ವೈಯಕ್ತಿಕ ಇಚ್ಛೆ, ಅಭಿರುಚಿ, ಆದ್ಯತೆಗಳಿಂದ ವಿಕಾಸಗೊಳ್ಳದೆ ಸಮಾಜದ ಸದ್ಯದ ಸ್ಥಿತಿಯ ಇತಿಮಿತಿಗಳಿಗೆ ಸಿಕ್ಕು ಮುರುಟಿಹೋಗುವ ವಿಷಾದ ಕತೆಯಲ್ಲಿ ಅಂತಸ್ಥವಾಗಿದೆ. ಸೂರಾಚಾರಿ ಬದುಕುವ ಪರಿಸರವೇ ಅವನ 'ವಿಧಿ'ಯಾಗಿ ಕರ್ಮಜಾಲವಾಗಿ ಅದರಿಂದ ವಿಮುಕ್ತಿ ಪಡೆಯುವುದು ಅವನಿಗೆ ಸಾಧ್ಯವಾಗುವುದೇ ಇಲ್ಲ. ನೂರಾರು ಅರ್ಥಹೀನವಾದ ಅಸಂಬದ್ಧವಾದ ಯಾವ ಯಾವುದೋ ಕಸುಬುಗಳನ್ನು ಮಾಡಿ ಕಾಲ ದೂಡುವುದೇ ಅವನ ಜೀವನ ಕ್ರಮವಾಗಿ ಬಿಡುತ್ತದೆ.

ಸೂರಾಚಾರಿಯ ಸೃಜನಶೀಲ ಶಕ್ತಿಯನ್ನು, ಗೌರಿಯ ಸೌಂದರ್ಯವನ್ನು ಹಾಳುಗೆಡಹಲು ಕಾರಣವಾಗುವ ಸಾಮಾಜಿಕ ಪರಿಸರ ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ನನ್ನೊಳಗಿನ ಜಡತ್ವವನ್ನೇ ಸಾಂಕ್ರಾಮಿಕವಾಗಿ ಎಲ್ಲೆಡೆ ಹಬ್ಬಿಸುವ ಜನತೆ ಹೊಸತೇನನ್ನೂ ಗುರ್ತಿಸಲಾರದವರು, ಮತ್ತು ಇರುವ ಹೊಸತನವನ್ನು ವಿಶಿಷ್ಟತೆಯನ್ನು ಒಸಕಿ ಹಾಕುವ ಶಕ್ತಿಯುಳ್ಳವರು. ಒಂದು ಉದಾಹರಣೆಯೊಂದಿಗೆ ವಿವರಿಸುವುದಾದರೆ - ಸೂರಾಚಾರಿ ಮಾಡುವ ಮರದ ಮಾರಿಗೊಂಬೆಗಳಲ್ಲಿ ಜನರಿಗೆ ಏನೋ ಮಾನ್ಯತೆ ಕಾಣತೊಡಗಿತು. "ಆ ಗೊಂಬೆಗಳ ಪ್ರಮಾಣ ಬದ್ಧ ನಿಲುವು, ಮುಖದ ಅಭಿವ್ಯಕ್ತಿ, ಸಮ ಪ್ರಯಾಣದ, ಕುಚಗಳು, ಕರಾರುವಕ್ಕಾದ ಭಂಗಿಗಳನ್ನು ಕಂಡು ನಿಮ್ಮ ಗೊಂಬೆ ನೋಡಿದರೆ ಮಾರಿ ಜ್ಞಪ್ತಿಗೆ ಬರೋದೆ ಇಲ್ಲ! ಎಂದು ಕೆಲವರು

ವಿಮರ್ಶಿಸಿದರು. ಸೂರಾಚಾರಿ ಬೇರೆ ದಾರಿ ಕಾಣದೆ ಕೊನೆಗೆ ಕೊಕ್ಕರೆ ಮೂಗು ಬಿಡುಗಣ್ಣಿನ ಕಿಸುಬಾಯಿಯ ಮಡಕೆ ಮೊಲೆಗಳ ಮಾರಿ ಗೊಂಬೆಗಳನ್ನು ಮಾಡಿಕೊಡತೊಡಗಿದ. ಕೊನೆಕೊನೆಗೆ ಕೋರೆ ಹಲ್ಲುಗಳನ್ನು ಸೃಷ್ಟಿಸಿದ"[3]

ಜ್ಞಾನ ತನ್ನೊಡನೆ ಹೇಗೆ ಅಜ್ಞಾನವನ್ನು ಹೊತ್ತುಕೊಂಡು ಸಾಗುತ್ತದೆ ಎಂಬುದನ್ನು 'ಕುಬಿ ಮತ್ತು ಇಯಾಲ' ಕತೆಯಲ್ಲಿ ತೇಜಸ್ವಿಯವರು ತೋರಿಸಿಕೊಟ್ಟಿದ್ದಾರೆ. ಸಮಾಜದ ಚಲನವಲನಗಳನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸುವ ಲೇಖಕರು ಪಾತ್ರಗಳ ಮೂಲಕ ಪ್ರಗತಿ ಹಾಗೂ ಅವನತಿಗಳ ವೈದೃಶ್ಯಗಳನ್ನು ಮುಖಾಮುಖಿಯಾಗಿಸಿ ಓದುಗರು ಚಿಂತಿಸುವಂತೆ ಮಾಡುತ್ತಾರೆ. ಡಾ॥ ಕುಬೇರ ನಾಥ (ಕುಬಿ) ರೋಗದ ವಿರುದ್ಧ ಹೋರಾಡುತ್ತಲೇ ಅಜ್ಞಾನ ಮೂಢನಂಬಿಕೆಗಳ ವಿರುದ್ಧವೂ ಹೋರಾಡುವ ಸಂಕಲ್ಪ ಮಾಡುತ್ತಾನೆ. ಆದರೆ ಡಾ॥ ಕುಬಿಯ ಅಜ್ಞಾನ ನಿವಾರಣೆಯ ಪ್ರಯತ್ನ ಹೆಚ್ಚಾದಂತೆಲ್ಲ ಭೈರಾಪುರದ ಜನರ ಮೂಢನಂಬಿಕೆ ಅಜ್ಞಾನಗಳು ಹೆಚ್ಚಿಗೆ ಆಗುತ್ತ ಸಾಗುವುದು ಇತಿಹಾಸದ ವ್ಯಂಗ್ಯವಾಗಿ ಕಾಣುತ್ತದೆ. ಕುಬಿಯ ನಿಲುವು ಹಾಗೂ ಮೌಢ್ಯದ ಕೂಪವಾಗಿರುವ ಭೈರಾಪುರದ ಜನತೆಯ ನಡುವೆ ನಡೆಯುವ ಸಂವಾದ ಅರ್ಥಹೀನವಾಗಿ, ವಿಚಾರವಾದಿ ಕುಬಿ ಹಾಗೂ ಮುಗ್ಧ ಇಯಾಲಳ ಅವನತಿ ಇಡೀ ಸಮಾಜದ ಅವನತಿ ಆಗಿ ಮಾರ್ಪಡುತ್ತದೆ. ಇಯಾಲಳ ಸಾವು ಹಾಗೂ ಕುಬಿಯ ಸೋಲು ಈ ಕಥೆಯ ಕೇಂದ್ರವಾಗಿದೆ.

ಭೈರಾಪುರದ ಧೂಪದ ಬಂಡೆಯ ಹತ್ತಿರ ಕೊಲೆಯಾದ ಇಯಾಲಳ ಸಾವಿನ ಸುತ್ತ ಬೆಳೆಯ ತೊಡಗಿದ ಕತೆ ನಿಗೂಢದ ಶೋಧನೆಯ ಪತ್ತೇದಾರಿ ರೀತಿಯಲ್ಲಿ ಪ್ರಾರಂಭವಾಗುತ್ತದೆ. ಮೌಢ್ಯ ತುಂಬಿದ, ನಗರೀಕರಣಗೊಂಡಿರುವ ಭೈರಾಪುರದ ಇಡೀ ಸಮಾಜವೇ ಆಕೆಯ ಸಾವಿಗೆ ಕಾರಣವಾಗುತ್ತದೆ. ಭ್ರಷ್ಟ ಅಧಿಕಾರಿಗಳು, ಪುಢಾರಿ ರಾಜಕಾರಣಿಗಳು, ಅಸಹನೀಯ ಬದುಕಿನ ಪಾತ್ರಗಳಾದ ದಲಿತರು, ಹಮಾಲಿಗಳು ಹೇಗೆ ಬೈರಾಮರದ ಆಗು ಹೋಗುಗಳ ವಕ್ತಾರರಾಗುತ್ತಾರೆ ಎಂಬುದನ್ನು ತೇಜಸ್ವಿ ಗುರುತಿಸುತ್ತಾರೆ.

ಅಜ್ಞಾನ, ಮೌಢ್ಯ, ಬಡತನ, ಕೊಳಕು, ಸ್ವಾರ್ಥ, ರಾಜಕೀಯ ಇವುಗಳ ಕೊಂಪೆಯಾದ ಭೈರಾಪುರಕ್ಕೆ ಯಾವ ಸರಕಾರಿ ನೌಕರನೂ ಬರಲೂ ಇಚ್ಛಿಸದ ಸಂದರ್ಭದಲ್ಲಿ ಕುಬಿ ವೈದ್ಯನಾಗಿ ಬರುತ್ತಾನೆ. ವಿಚಾರವಾದಿಯಾದ ಕುಬಿಗೆ ಕೇವಲ ರೋಗಗಳ ವಿರುದ್ಧ ಮಾತ್ರ ಹೋರಾಡಬೇಕಾದ ಪ್ರಸಂಗ ಬರದೇ ಭೈರಾಪುರದ ಜನಗಳ ಎಲ್ಲ ಅನಿಷ್ಟಗಳ ವಿರುದ್ಧವೂ ಹೋರಾಡಬೇಕಾದ ಪರಿಸ್ಥಿತಿ ಬರುತ್ತದೆ.

ಕುಬಿಯ ವಿಚಾರವಾದವೂ ಸಮಾಜದೊಡನೆ ಸಂವಹನ ಸಾಧಿಸದೆ ವಿಫಲವಾಗುತ್ತದೆ. ಕುಬಿಯ ಸೋಲಿನಲ್ಲಿ ಒಂದು ವಿಷಾದದ ಧ್ವನಿ ಇದೆ. ಸತ್ಯದ ಮೂಲಕ ಜನರನ್ನು ತಲುಪಬೇಕೆಂಬ ಡಾಕ್ಟರ್ ಹಾಗೂ ಮಿಥ್ಯದ ಮೂಲಕ ತಲುಪಬೇಕೆಂಬ ಕಾಂಪೌಂಡರ್. ಈ ಕತೆಯ ಹಂದರದಲ್ಲಿ ಬರುವ ವೈರುಧ್ಯಗಳು. ಡಾಕ್ಟರಿಗೆ ವಿಜ್ಞಾನ ಮುಖ್ಯ ಕಾಂಪೌಂಡರ್‌ಗೆ ನಂಬಿಕೆ ಮುಖ್ಯ. ಭೈರಾಪುರದ ಜನ ಮೂಢನಂಬಿಕೆಯ ದಾಸರಾಗಿ ಎಂದೂ ಬದಲಾಗದಂತಹ ಶಾಶ್ವತವಾದ ವಸ್ತು ಸ್ಥಿತಿಯನ್ನು ತಲುಪಿರುತ್ತಾರೆ. ಕುಬಿಯ ಸೋಲು ಭೈರಾಪುರದ ವಸ್ತುಸ್ಥಿತಿ ಹಾಗೆಯೇ ಮುಂದುವರೆಯುವಂಥದು ಎಂಬ ನಿಲುವನ್ನು ಪ್ರತಿಪಾದಿಸುತ್ತದೆ. ಒಟ್ಟಾರೆ ಈ ಕಥೆ ಅಜ್ಞಾನ ಮತ್ತು ಮೂಢನಂಬಿಕೆಗಳ ಸಂಕೀರ್ಣ ಬದುಕಿನಲ್ಲಿ ವೈಜ್ಞಾನಿಕ ಸತ್ಯಗಳು ಅನುಭವಿಸುವ ಸೋಲನ್ನು ಹಾಗೂ ಸಮಾಜದ ರಚನೆಯಲ್ಲಿ ಗಾಢವಾಗಿ ಬೇರುಬಿಟ್ಟಿರುವ ಇವುಗಳ ವಿನ್ಯಾಸವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವಾಗಿದೆ. ಸಮಾಜದ ಅಂತರಂಗವನ್ನು ಜಾಲಾಡುವ ಲೇಖಕರ ಪ್ರಯತ್ನ ಓದುಗಳನ್ನು ಚಿಂತನೆಗೆ ಈಡುಮಾಡುತ್ತದೆ.

'ತರಬರನ ಕತೆ' ಸ್ವಾತಂತ್ರ್ಯೋತ್ತರ ಭಾರತದ ಆಡಳಿತ ವ್ಯವಸ್ಥೆಗೇ ಬರೆದ ಭಾಷ್ಯದಂತಿದೆ. ಇಲ್ಲಿ ತಬರನ ವೈಯಕ್ತಿಕ ದುರಂತದ ಕತೆಯ ನಿರೂಪಣೆಯೊಂದಿಗೆ ಒಂದು ಬಗೆಯ ರಾಜಕೀಯ ವಿಮರ್ಶೆ, ಸಾಮಾಜಿಕ ವಿಮರ್ಶೆಯೂ ನಡೆದಿದೆ. ಇದು ತಬರನ ಮೂಲಕ ನಡೆದಿರುವುದು ಒಂದು ವಿಶೇಷ. ಅಬಚೂರಿನ ಪೋಸ್ಟಾಪೀಸು, ತುಕ್ಕೋಜಿ, ಅವನತಿ, ತಬರನ ಕತೆ, ಇಲ್ಲಿನ ಕೇಂದ್ರ ಪಾತ್ರಗಳೆಲ್ಲ ಸಮಾಜದ ಕೆಳಸ್ತರಗಳಿಂದ ಬಂದವರು ಎಂಬುದು ಗಮನಾರ್ಹ.

ತಬರ ತನ್ನ ಸರಕಾರಿ ಸೇವೆಯನ್ನು ಸಲ್ಲಿಸಿದ್ದು ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ, ಆಗ ಅವನಿಗೆ ವಿಶೇಷ ಸ್ಥಾನಮಾನವೇ ಇತ್ತು. ಬ್ರಿಟಿಷ್ ಆಸ್ವತ್ರೆಯ ಕಾಲದಲ್ಲಿ ತಬರ ಸುಂಕದ ಕಟ್ಟೆಯ ವಸೂಲಿ ಕೆಲಸ ವಹಿಸಿಕೊಂಡಾಗ ಅವನಿಗೆ ಕೋಡು ಬಂದಂತಾಗಿತ್ತು. ಎಲ್ಲರೂ ಅವನಿಗೆ ಮರ್ಯಾದೆ ಕೊಡುತ್ತಿದ್ದರು. ತರಕಾರಿ, ಮೀನು ಇತ್ಯಾದಿಗಳನ್ನೆಲ್ಲಾ ಪಡುಗೆರೆಗೆ ಒಯ್ಯಲು ತರುತ್ತಿದ್ದವರು ಸುಂಕದೊಡನೆ ಅಷ್ಟಿಷ್ಟು ವಸ್ತುಗಳನ್ನೂ ಅವನಿಗೂ ಕೊಡುತ್ತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದೊಡನೆ ಸರಕಾರಿ ಸೇವೆಯ ಈ ವಸಾಹತುಶಾಹಿ ಪ್ರಭಾವಳಿ ತಬರನನ್ನು ಬಿಟ್ಟು ಹೋಗುವುದು ಅವನ ಜೀವನದ ಪ್ರಥಮ ದುರಂತ ಎನ್ನಬಹುದು. 'ಬ್ರಿಟಿಷರ ನಿಯಮ ಶಿಸ್ತು ಮುಂತಾದವನ್ನು ಹೊಗಳುತ್ತಾ, ಹಳೆಯ ನೆನಪುಗಳನ್ನು

ಹಸಿಯಾಗಿಯೇ ಉಳಿಸಿಕೊಂಡು ಮೆಲುಕುತ್ತಿದ್ದ ಪಡುಗೆರೆಯ ಇಬ್ಬರಲ್ಲಿ ಡಾಕ್ಟರ್ ಸಿಲ್ವ ಒಬ್ಬರಾದರೆ ತಬರ ಸೆಟ್ಟಿ ಇನ್ನೊಬ್ಬ ಎಂದು ಕತೆ ದಾಖಲಿಸುತ್ತದೆ.

ಬ್ರಿಟಿಷ್ ಆಳ್ವಿಕೆ ಮತ್ತು ಅದರ ವಿರುದ್ಧದ ಗಾಂಧಿ ಚಳುವಳಿ ಕುರಿತ ತಬರನ ಅವಲೋಕನವನ್ನು ಕತೆ ಲಘುಧಾಟಿಯಲ್ಲೇ ಸಮಸ್ಯಾತ್ಮಕಗೊಳಿಸುತ್ತದೆ. ನಮ್ಮ ಆಡಳಿತ ವ್ಯವಸ್ಥೆಯಲ್ಲಿನ ವೈಪರೀತ್ಯದಿಂದಾಗಿ ತಬರ ತಾನು ಮಾಡದ ತಪ್ಪಿಗಾಗಿ ದಂಡ ತೆರಬೇಕಾಗುತ್ತದೆ. ಅವನ ಪಿಂಚಣಿಯೂ ನಿಗದಿಯಾಗುವುದಿಲ್ಲ. ತಬರ ಪಿಂಚಣಿ ಪಡೆಯಲು ನಡೆಸಿದ ವಿಫಲ ಪ್ರಯತ್ನಗಳ ಮೂಲಕ ಕತೆ ಇಡೀ ನೌಕರಶಾಹಿಯ ನರಕದರ್ಶನವನ್ನು ನಮಗೆ ಮಾಡಿಸುತ್ತದೆ.

ಪೆನ್‌ಶನ್ ನಿಗಧಿಯ ದೀರ್ಘ, ಅಸಂಬದ್ಧ ಓಡಾಟಗಳ ಒತ್ತಡದಲ್ಲಿ, ತನ್ನ ಹೆಂಡತಿಯ ರೋಗದ ಆತಂಕದಲ್ಲಿ ತಬರನಿಗೆ ಹುಚ್ಚೇ ಹಿಡಿಯುತ್ತದೆ. "ಕುಬಿ ಮತ್ತು ಇಯಾಲ" ದಲ್ಲಿ "ರೋಗ" ಇಡೀ ವ್ಯವಸ್ಥೆಯ ಪ್ರತೀಕವಾದರೆ ಇಲ್ಲಿ "ಹುಚ್ಚು" ಇಡೀ ಆಡಳಿತ ವ್ಯವಸ್ಥೆಯನ್ನು ಗ್ರಹಿಸುವ ರೂಪಕವಾಗುತ್ತದೆ. ಕತೆಯ ಮೊದಲ ಹಾಗೂ ಕೊನೆಯ ವಾಕ್ಯ ಹುಚ್ಚಿನ ವರ್ಣನೆಯೇ ಆಗಿರುವುದು ಕಾಕತಾಳೀಯವಲ್ಲ. ಅಂತೂ ಇಂತೂ ತಬರನಿಗೆ ಪ್ರಾವಿಡೆಂಟ್ ಫಂಡ್ ಸ್ಯಾಂಕ್ಷನ್ ಆಯಿತು ಅನ್ನುವಷ್ಟರಲ್ಲಿ ತಬರನ ಮಾನಸಿಕ ಸ್ಥಿತಿ ಬೇರೊಂದು ಆಯಾಮಕ್ಕೆ ಪರಿವರ್ತಿತವಾಗಿ ಬಿಟ್ಟಿರುತ್ತದೆ. ತಹಶೀಲ್ದಾರರು ತಾವೊಂದು "ಫೇವರಬಲ್ ರಿಪೋರ್ಟು" ಬರೆಯುವುದಾಗಿಯೂ ಇಪ್ಪತ್ತೈದನೆಯ ಸ್ವಾತಂತ್ರ್ಯ ದಿನಾಚರಣೆಯ ಬೆಳ್ಳಿ ಹಬ್ಬಕ್ಕೆ ಡೊನೇಶನ್ ಕೊಡುವಂತೆಯೂ ಕೇಳಿದಾಗ ತಬರನ ಮುಖದಲ್ಲಿ ಮಂದಹಾಸ ಮೂಡುತ್ತದೆ. "ನನ್ನ ಫಂಡು ದುಡ್ಡು ಎಲ್ಲಾ ಬರಕಳ್ಳಿ ಸ್ವಾಮಿ" ಎಂದು ಹೇಳುತ್ತಾನೆ. ತಹಶೀಲ್ದಾರನಿಗೆ ತಬರನ ಚರ್ಯೆಯಲ್ಲಿ ಏನೋ ಅಸ್ವಾಭಾವಿಕತೆ ಕಂಡಂತೆ ಆಗುತ್ತದೆ. ಸ್ವಾತಂತ್ರ್ಯೋದಯದ ಬೆಳ್ಳಿಹಬ್ಬದ ಸಮಯದಲ್ಲೇ ತಬರನಿಗೆ ಹುಚ್ಚು ಹಿಡಿದದ್ದು ಕೇವಲ ಒಂದು ಆಕಸ್ಮಿಕ' ಎಂದು ಕತೆ ಧ್ವನಿಪೂರ್ಣವಾಗಿ ದಾಖಲಿಸುತ್ತದೆ. ಎಲ್ಲರೂ ಭಾರತದ ಸ್ವಾತಂತ್ರ್ಯವನ್ನು ಹೊಗಳಿ ಭಾಷಣ ಬಿಗಿಯುತ್ತಿದ್ದಾಗ ತಬರ ಬ್ರಿಟಿಷರ ಆಳ್ವಿಕೆ ಹೊಗಳುತ್ತಿದ್ದನಂತೆ, ಎಲ್ಲ ಅವನ ಹುಚ್ಚನ್ನು ನೋಡಿ ನಕ್ಕರು.

ತಬರನ ಕತೆ ಇನ್ನೂ ಒಂದು ಕಾರಣಕ್ಕೆ ನಮ್ಮ ಗಮನ ಸೆಳೆಯುತ್ತದೆ. ಹಲವು ಬಗೆಯ ಹಿಂಸೆ, ಶೋಷಣೆ, ಕ್ರೌರ್ಯಗಳ ಭೀಕರ ಚಿತ್ರಗಳನ್ನು ಕಟ್ಟಿಕೊಟ್ಟರೂ ಈ ಕತೆ ತಬರನ ಮೂಲಕ ಕೇವಲ ಸದ್ಯದ ಸಂಕಷ್ಟಗಳನ್ನು ಮಾತ್ರ ಧ್ವನಿಸದೆ ಇಡೀ ಮನುಷ್ಯ ನಾಗರಿಕತೆಯ ಅವಸ್ಥೆಯನ್ನು

ಕಾಣಿಸುವಲ್ಲಿ ಸಫಲವಾಗುತ್ತದೆ. ಈ ವ್ಯವಸ್ಥೆಯನ್ನು ಕೇವಲ ಶೋಷಕ – ಶೋಷಿತ ಎಂಬ ಸಂಪ್ರದಾಯಕ ಪರಿಭಾಷೆಯಲ್ಲಿ, ದ್ವಿದಳ ವಿಭಜನೆಯಲ್ಲಿ ನೋಡದೆ ಒಟ್ಟಾರೆ ಮನುಷ್ಯ ನಿರ್ಮಿತ ವ್ಯವಸ್ಥೆಯ ದುರಂತವಾಗಿಯೂ ಕಾಣಬಲ್ಲ ಪ್ರಬುದ್ಧತೆ ಸಾಧ್ಯವಾಗುತ್ತದೆ. ತಬರನಿಗೆ ಬ್ರಿಟಿಷರೂ ಹಲವು ಗೊಂದಲಗಳಲ್ಲಿ ಸಿಕ್ಕಿಬಿದ್ದ ಮಾನವರಾಗಿಯೇ ಕಾಣುತ್ತಾರೆ.

ಇಲ್ಲೆಲ್ಲಾ ತೇಜಸ್ವಿ ಮನುಷ್ಯನ ಕರ್ತೃತ್ವ ಶಕ್ತಿಯ ಮೇಲೆ ಒಂದು ಸಾಮಾಜಿಕ ಪರಿಸರ ನಡೆಸುವ ಆಕ್ರಮಣವನ್ನು, ದಮನಕಾರಿ ನೀತಿಯನ್ನು ಅನಾವರಣ ಮಾಡುತ್ತಾರೆ. ಆದರೆ ಪ್ರತಿಯೊಂದು ಹೊಸತನ್ನು ತನ್ನ ಅನುಕೂಲಕ್ಕೆ, ತನ್ನ ಆಲೋಚನೆಗೆ ತಕ್ಕಂತೆ ಬದಲಾಯಿಸಿಕೊಂಡು ಬಿಡುವ ಸಾಮಾಜಿಕ ಪರಿಸರದ ವಿಶಿಷ್ಟ ಶಕ್ತಿಯ ಬಗ್ಗೆ ತೇಜಸ್ವಿ ಕುತೂಹಲ ಉಳಿಸಿಕೊಳ್ಳುತ್ತಾರೆ. ಕ್ರಮೇಣ ಈ ಕುತೂಹಲ ಇನ್ನೂ ವಿಸ್ತೃತರೂಪ ಪಡೆದುಕೊಳ್ಳುತ್ತಾ ಮನುಷ್ಯ ಒಳಗಿನ ನಿಗೂಢತೆ, ಸುತ್ತಲಿನ ಪ್ರಾಕೃತಿಕ ಪರಿಸರದ ನಿಗೂಢತೆಯನ್ನು ಒಂದು ಇನ್ನೊಂದಕ್ಕೆ ಪರ್ಯಾಯವಾಗಿ ನೋಡುತ್ತಾ ಹೋಗುತ್ತಾರೆ. ಇವುಗಳಲ್ಲಿ ಸಾಮಾಜಿಕ ಪರಿಸರವನ್ನಾಗಲಿ, ನೈಸರ್ಗಿಕ ಪರಿಸರವನ್ನಾಗಲಿ ಅರ್ಥೈಸಿಕೊಳ್ಳುತ್ತೇವೆನ್ನುವುದು ಒಂದು ಭ್ರಮೆ. ಇವೆರಡರ ನಡುವಿನ ಹೋರಾಟ ನಿರರ್ಥಕ. ಇದರಲ್ಲಿನ ಗೆಲವು ಅಂತಿಮವಾಗಿ ಪರಿಸರದ್ದೇ ಎನ್ನುವ ಒಳನೋಟ ಕಾಣಿಸುತ್ತದೆ.

ಅಡಿಟಿಪ್ಪಣಿ

1. ಹುಲಿಯೂರಿನ ಸರಹದ್ದು, ತೇಜಸ್ವಿ ಪು.ಸಂ. – 37
2. ಅಬಚೂರಿನ ಪೋಸ್ಟಾಫೀಸು, ತೇಜಸ್ವಿ ಪು.ಸಂ. – 22
3. ಅದೇ ಪು.ಸಂ. – 23

ಅಧ್ಯಾಯ – 5

ತೇಜಸ್ವಿ ಕತೆಗಳಲ್ಲಿ ಮಾನುಷ ಪ್ರಕೃತಿ

ಅ) ಹೆಣ್ಣಿನ ಪಾತ್ರ :

ಕಿರಗೂರಿನ ಗಯ್ಯಾಳಿಗಳು ಕತೆಯು ಅತ್ಯಂತ ಭಯಂಕರವಾದ ಬಿರುಗಾಳಿಯಿಂದ ಆರಂಭವಾಗುತ್ತದೆ. ಈ ಕಥೆ ಪೂರ್ಣಗೊಂಡಾಗಲೂ ಇನ್ನೂ ಮುಗಿಯದ ಕಥೆಯಾಗಿಯೇ ತೋರುತ್ತದೆ. ಕಿರಗೂರಿನ ಗಯ್ಯಾಳಿಗಳು, ತಮ್ಮ ಮೇಲಿನ ಅನ್ಯಾಯದ ವಿರುದ್ಧ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಘಟನೆಯೇ ಈ ಕತೆಯ ಕೇಂದ್ರ ವಸ್ತುವಾಗಿದೆ.

ಕಿರಗೂರಿನ ಸ್ತ್ರೀಯರು, ಪುರುಷರು, ಜಾತಿ, ವರ್ಗ, ಕುಲದ ಭೇದಗಳಿಲ್ಲದಂತೆ ಎಲ್ಲರೂ ತಮ್ಮ ಆಸುಪಾಸಿನ ಊರಿನವರಿಗಿಂತ ಭಿನ್ನರು. "ಕಾಂದಹಾರಿನ ಪಠಾಣರಂತೆ ಉದ್ದ ಮೂಗಿನ, ಬಿಳಿ ಚರ್ಮದ, ನೀಳಕಾಯದ" ಈ ಜನರೆಲ್ಲ ಹೊರಗಿನಿಂದ ನೋಡಿದವರಿಗೆ ಒಂದೇ ತೆರನಾಗಿ ಕಾಣುತ್ತಾರೆ. ಆದರೆ ಒಳಹೊಕ್ಕು ಸೂಕ್ಷ್ಮವಾಗಿ ನೋಡಿದರೆ ಎಲ್ಲರೂ ಒಂದೇ ತರ ಅಲ್ಲ. ಮುಖ್ಯವಾಗಿ ಇವರು ಎರಡು ತಂಡಗಳೊಳಗೆ ಹಂಚಿ ಹೋಗಿದ್ದಾರೆ. ಈ ತಂಡಗಳೇ ಕಿರಗೂರಿನ ಹೆಂಗಸರು ಮತ್ತು ಗಂಡಸರು. "ಗಂಡಸರು ಹೆಂಡ ಕುಡಿದು ಬೀಡಿ ಸೇದಿ ಹೊಗೆಹತ್ತಿ ಸಣಕಲಾಗಿ" ರುವವರು. "ಹೆಣ್ಣುಮಕ್ಕಳು ಮಾತ್ರ ತಮ್ಮ ಉಜ್ವಲ ಸೌಂದರ್ಯದಿಂದ ನೋಡಿದವರನ್ನು ಬೆಚ್ಚಿಬೀಳಿಸುತ್ತಿದ್ದರು. ತಮ್ಮ ಗಂಡಸರಿಗಿಂತ ಹೆಚ್ಚಿನ ಆರೋಗ್ಯ, ತೇಜಸ್ಸುಗಳುಳ್ಳ ಸ್ತ್ರೀಯರು ತಮ್ಮ ಈ ಶಕ್ತಿಗಳ ಬಗ್ಗೆ ಪ್ರಜ್ಞಾಪೂರ್ವಕವಾದ ಅರಿವನ್ನು ಹೊಂದಿದ್ದಾರೆಂದಲ್ಲ, ಬದಲಾಗಿ ತಮ್ಮ ಗಂಡಸರು ಇರಬೇಕಾದ್ದಕ್ಕಿಂತ ಹೆಚ್ಚು ದುರ್ಬಲರೆಂದು ಅವರೊಂದಿಗೆ ಬದುಕುತ್ತಾ, ಏಗುತ್ತಾ, ಆ ಅನುಭವದಿಂದ ಇವರು ತಿಳಿದುಕೊಂಡಿದ್ದಾರೆ. ಹಾಗಿದ್ದೂ ತಮ್ಮೊಳಗೆ ಇವರಲ್ಲಿ ವಿಶೇಷವಾದ ಆತ್ಮವಿಶ್ವಾಸದ, ಏನು ಕಷ್ಟ ಬಂದರೂ ಹಾರಿ ಬೀಳದೆ ಎದುರಿಸಬಲ್ಲ ಧೈರ್ಯಗಳಿದೆ. ತಮ್ಮನ್ನು ಕೆಣಕಿದವರ ವಿರುದ್ಧ ತಿರುಗಿ ಬೀಳಬಲ್ಲ ಇವರ ಶಕ್ತಿಯ ಅರಿವಿರುವ ಜನರೆಲ್ಲ ಇವರ ತಂಟೆಗೆ ಹೋಗಲು ಅಂಜುತ್ತಾರೆ.

"ಆತ್ಮಾಭಿಮಾನ, ಸ್ವಸಮರ್ಥನೆಗಳಿಗಿರುವ ಈ ಸತ್ರೀಯರ ಬಗ್ಗೆ ಅವರ ಗಂಡಸರೇ ನೀಡುವ ಗುರುತು "ಬಜಾರಿಯರು", "ಜಂಬ ಅಹಂಕಾರ" ಗಳಿಂದ ಮೆರೆಯುವ "ಗಾಂಚಾಲಿ ಮುಂಡೇರು"[1].

ಈ ಊರಿನ ಸ್ತ್ರೀಯರೂ, ಪುರುಷರೂ ಆರ್ಥಿಕವಾಗಿ ತುಂಬ ಕೆಳಗೆ ಇರುವವರು. ಕೃಷಿಯೇ ಇವರ ಪ್ರಧಾನ ಉತ್ಪಾದನಾ ವ್ಯವಸ್ಥೆ. ಅದರಲ್ಲೂ ಸಸಿ ನೆಡುವ, ಕಳೆ ತೆಗೆಯುವ, ಫಸಲು ಕುಯ್ಲು ಮಾಡುವ ತುಂಬ ಶ್ರಮದಾಯಕ ಕೃಷಿಯ ದುಡಿಮೆಯೆಲ್ಲ ಇಲ್ಲಿನ ಸ್ತ್ರೀಯರದೇ ಎಂಬುದನ್ನು ಕತೆಯ ಆರಂಭದ ಸನ್ನಿವೇಶವೇ ದಾಖಲಿಸುತ್ತದೆ.

ಈ ಕತೆಯಲ್ಲಿ ಬರುವ ನಾಗಮ್ಮ ಎಂಬ ಒಬ್ಬ ಸಾಮಾನ್ಯಾತಿ ಸಾಮಾನ್ಯ ಹೆಣ್ಣು ಕಾಳೇಗೌಡನ ಅತ್ಯಂತ ವಿಧೇಯ ಮೌನಿ ಹೆಂಡತಿ, ಗಂಡನ ಸೊಂಟದ ಉಳುಕಿನ ಚಿಕಿತ್ಸೆಗೆಂದು ಬಂದಿದ್ದ ಮಲೆಯಾಳಿ ಪಂಡಿತನ ಜೊತೆ ಓಡಿ ಹೋಗುತ್ತಾಳೆ. ಈ ಘಟನೆಯ ಕಾರಣದಿಂದ ಊರಿನ ಗಂಡಸರೆಲ್ಲ ಒಂದು ಪಕ್ಷವಾಗಿ, ಆಕೆಯನ್ನು ಪಂಚಾಯ್ತಿಗೆ ಎಳೆದು, ಹೊಡೆದು, ಅವಮಾನಿಸುವಷ್ಟು ಈ ವಿಷಯವನ್ನು ತಮ್ಮ ಪ್ರತಿಷ್ಠೆಯ ವಿಷಯವನ್ನಾಗಿಸಿಕೊಳ್ಳುವುದು ಒಂದು ಬೆಳವಣಿಗೆ. ಆದರೆ ಇವರ ಈ ದುರಾಕ್ರಮಣ, ದುರ್ನೀತಿ, ಅನ್ಯಾಯಗಳನ್ನು ಪ್ರತಿಭಟಿಸಿ, ಊರ ಹೆಂಗಸರೆಲ್ಲ ಒಂದಾಗಿ ಹೋರಾಟಕ್ಕಿಳಿಯುವುದು ಇಡೀ ಕತಾನಕದ ಅತ್ಯಂತ ಗಮನ ಸೆಳೆಯುವ ಮಾನವೀಯ ಕ್ರಿಯೆಯಾಗುತ್ತದೆ. ಮೊದಲಿನಿಂದಲೂ ಮುಗುಮ್ಮಾಗಿ, ಪರಸ್ಪರ ಅರಿವಿನೊಂದಿಗೆ ಸಾಗಿ ಬಂದ ಈ ಹೆಂಗಸರು – ಗಂಡಸರುಗಳ ವೈಮನಸ್ಯಕ್ಕೆ ನಾಗಮ್ಮನ ಪ್ರಸಂಗವು ಬಹಿರಂಗವಾಗಿ ಆಸ್ಫೋಟಗೊಳ್ಳಲು ಅವಕಾಶವನ್ನು ಒದಗಿಸುತ್ತದೆ. ಸ್ತ್ರೀ ಪ್ರತಿಭಟನೆಯ ಈ ಘಟನೆ ದಿಢೀರ್ ಎಂದು ಕಾಣಿಸಿಕೊಂಡಿರದೆ, ನಿಧಾನವಾಗಿ ಇಂಥದೊಂದು ಸ್ಥಿತಿಯನ್ನು ಸಾಧ್ಯವಾಗಿಸಲು ಕತೆಯ ನಾಯಕ ವ್ಯಕ್ತಿ ದಾನಮ್ಮ ಒಂದು ಉಪಕರಣವಾಗಿರುವ ರೀತಿ ವಿಶೇಷವಾಗಿ ಗಮನಾರ್ಹ.

ಕಿರಗೂರಿನ ಹೆಂಗಸರೆಲ್ಲರ ನಡುವೆ, ಅವರ ಚಿಂತನೆ, ಭಾವನೆ, ಅನುಭವಗಳಿಗೆ ಮುಖವಾಣಿಯಾಗಬಲ್ಲ ನಾಯಕ ವ್ಯಕ್ತಿ ಸೀಗೇಗೌಡರ ಮಗ ಸುಬ್ಬಯ್ಯನಿಗೆ "ಹೊಸದಾಗಿ ಮದುವೆ ಮಾಡಿ ತಂದಿದ್ದ ಸೊಸೆ ಧಾನಮ್ಮ" ಅವಳ ವ್ಯಕ್ತಿತ್ವ, ಅದರಲ್ಲೂ ನಿಷ್ಠೂರ ನಿಜಗಳನ್ನು ಆಡಲು ಅಂಜದ ಅವಳ ಪ್ರಚಂಡ ಕೋಪ, ಬಯ್ಗಳದ ಪ್ರವಾಹವನ್ನೇ ಹರಿಸುವ ಅವಳ ನಾಲಿಗೆಯ ಎದುರಲ್ಲಿ ಅವಳ ತಂದೆ, ಮಾವ, ಗಂಡ ಮಾತ್ರವಲ್ಲ ಊರಿನ ಎಲ್ಲ ಗಂಡಸರೂ ಅಂಜುವವರೇ. ಅಂದರೆ ಪಿತೃರೂಪಿಗಳಾದ ಎಲ್ಲ ಜನರನ್ನೂ ನಿಯಂತ್ರಿಸಲು, ಶಿಕ್ಷಿಸಲು, ಸರಿದಾರಿಗೆ ತರಲು ಈಕೆಯ ಭಯಂಕರ ಕೋಪ, ಆ ಕೋಪದಿಂದ ಹೊಮ್ಮುವ ಬಯ್ಗಳದ ಬಾಣಗಳೇ ಪ್ರಖರವಾದ ಅಸ್ತ್ರಗಳಾಗಿ ಇಲ್ಲಿ ಕಲ್ಪಿತವಾಗುತ್ತದೆ.

ದಾನಮ್ಮನ ಕೋಪಕ್ಕೆ ಕತೆಯೊಳಗೆ ಎರಡು ಸ್ತರಗಳಿವೆ. ಮೊದಲಿನದು ಯಾವ ರೀತಿಯ ಅನ್ಯಾಯ ಕಂಡರೂ ಅವಳ ಕೋಪ ಹೊತ್ತಿ ಉರಿಯುತ್ತದೆ ಎಂಬುದು. ಅದು ಕ್ರಮ ಕ್ರಮವಾಗಿ ತಾರಕಕ್ಕೇರಿ, ಅತಿರೇಕಕ್ಕೆ ಹೋಗಿ, ವಾಗ್ಝರಿಯಾಗಿ ಹರಿಯತೊಡಗುತ್ತದೆ. ಅನಿಯಂತ್ರಿತ ಭಾವನಾ ಪ್ರವಾಹ ಎಂಬಂತಿದ್ದರೂ ಆಕೆಯ ಮಾತುಗಳಲ್ಲಿ ತೀಕ್ಷ್ಣವಾದ ವೈಚಾರಿಕ ಝಳವಿದೆ. ಪ್ರತಿಭಾಪೂರ್ಣ ಚಿಂತನೆ, ತೀವ್ರ ಸಂವೇದನೆಗಳು ಬೆಳೆದಾಗ ದಕ್ಕುವ ಸತ್ಯದ ಹೊರಹು ಇದೆ.

ಎರಡನೆಯ ಸ್ತರದಲ್ಲಿ ದಾನಮ್ಮನ ಕೋಪ ಸುತ್ತಲಿನ ಪ್ರಕೃತಿ, ಜಡವಸ್ತುಗಳನ್ನೂ ಪ್ರಭಾವಿಸಿ ಬಿಡಬಲ್ಲ ಅಸಾಧಾರಣ, ಅಲೌಕಿಕ ಶಕ್ತಿಯಾಗಿರುವುದನ್ನು ಗಮನಿಸಬಹುದು. ಮದುವೆಗೆ ಮುಂಚೆಯೂ ಕೋಪಗೊಳ್ಳುವುದು ದಾನಮ್ಮನ ಸ್ವಭಾವವೇ ಆಗಿದೆ. ಆದರೆ ತಂದೆಯಾಗಲಿ, ಮುಂದೆ ಗಂಡ, ಮಾವಂದಿರಾಗಲಿ, ಎಂದೂ ಅವಳ ಕೋಪದ ಮೂಲವೇನು, ಅರ್ಥವೇನು ಎಂದು ತಲೆಕೆಡಿಸಿಕೊಳ್ಳುವವರಲ್ಲ. ಅವಳ ತಂದೆ ಹೆಣ್ಣು ಕೇಳಿಕೊಂಡು ಬಂದ ಭಾವೀ ಅಳಿಯ ಮಾವಂದಿರಿಗೆ ಹೇಳುವ ಮಾತಿದು. "ಅವಳು ಸಾಧಾರಣವಾಗಿ ಒಳ್ಳೆಯವಳೇ, ಆದರೆ ತಿಂಗಳಿಗೆ ಒಂದಾವರ್ತಿ ಅಮಾವಾಸ್ಯೆಗೋ, ಹುಣ್ಣಿಮೆಗೋ ಒಮ್ಮೊಮ್ಮೆ ಅವಳ ಸಿಟ್ಟು ನೆತ್ತಿಗೇರುತ್ತದೆ. ಅರ್ಧ ಗಂಟೆ ಬಯ್ದಾಡಿ ಸುಮ್ಮನಾಗಲು ಬಿಟ್ಟರೆ ಆಮೇಲೆ ಮತ್ತೆ ಇನ್ನೊಂದು ತಿಂಗಳು ಒಳ್ಳೆಯವಳೇ"[3] ಇದು ತಿಳಿದ ಮೇಲೂ ಈ ರೂಪವತಿಯನ್ನು ಬಿಡಲಾರದೆ ಮದುವೆಯಾಗಿದ್ದ ಸುಬ್ಬೇಗೌಡ ಅವಳ ಎಲ್ಲ ಅಪರಾಧಗಳನ್ನೂ ಸಹಿಸಲು ಸಿದ್ಧ. ಅವನ ತಂದೆಯದೂ ಅದೇ ಸ್ವಭಾವ. ಆದ್ದರಿಂದ "ಅವಳಿಗೆ ಸಿಟ್ಟು ಬಂದಾಗ ದೆವ್ವ ಬಂದವರನ್ನು ಮಾತನಾಡಿಸುವಂತೆ ಗಂಡನೂ ಮಾವನೂ ಅವಳನ್ನು ಗೌರವ ಆದರಗಳಿಂದ ಮಾತನಾಡಿಸಿ ಸಮಾಧಾನಪಡಿಸಲೆತ್ನಿಸುತ್ತಿದ್ದರು"[4]. ಈ ಕೋಪ ತಮ್ಮ ಮೇಲೆಯೇ ತಿರುಗುವಂತೆನಿಸಿದಾಗ "ಹೆದರಿ ಅವಳ ಕೋಪ ಇಳಿಯುವವರೆಗೆ ಕಣ್ಮರೆಯಾಗಿ ಇರುತ್ತಿದ್ದರು".ಆಕೆಯ ತಂದೆಗೆ ಮಗಳ ಕೋಪ ಹುಚ್ಚು ಕೆರಳಿದವರ ಸ್ಥಿತಿಯಾಗಿ ಕಂಡರೆ ಗಂಡ ಮಾವನಿಗೆ ಅದು "ದೆವ್ವ ಮೈಮೇಲೆ ಬಂದವರ" ಆವೇಶವಾಗಿ ತೋರುತ್ತದೆ.

ಹೆಣ್ಣನ್ನು ಲೈಂಗಿಕವಾಗಿ ಹದ್ದು ಬಸ್ತಿನಲ್ಲಿಡಲು ಬಯಸುವ ಪುರುಷ ಮನಸ್ಸಿನ ಕನಸೇ ಬೇರೆ. ಕಿರಗೂರಿನ ಗಂಡಸರ ವಾಸ್ತವ ಸ್ಥಿತಿಯೇ ಬೇರೆ. ಹೆಂಡ ಕುಡಿದು, ಬೀಡಿ ಎಳೆದು ಸೊಂಟ ಉಳುಕಿಸಿಕೊಂಡ, ದುರ್ಬಲರಾದ ಇವರು ತಮ್ಮ ಸೋಲನ್ನು ಮರೆಮಾಚಿಕೊಳ್ಳಲು

ಆಡಬಹುದಾದ ಪೌರುಷದ ಹುಸಿ ಮಾತುಗಳಷ್ಟೇ ಇವು ಎನ್ನುವುದನ್ನು ಕತೆಯಲ್ಲಿ ನಾಗಮ್ಮನ ಪ್ರಸಂಗ ಪ್ರಸ್ತುತ ಪಡಿಸುತ್ತದೆ. ಈ ಪ್ರಸಂಗದಲ್ಲಿ ಸ್ತ್ರೀಯರ ಲೈಂಗಿಕ ಸಂತೃಪ್ತಿ, ಸಂತಾನದ ಹಂಬಲ, ಕೌಂಟುಂಬಿಕ ನಿಷ್ಠೆಗಳ ಪ್ರಶ್ನೆಗಳೆಲ್ಲ ಧ್ವನಿ ಪಡೆದುಕೊಳ್ಳುವುದು ಗಂಡಸರು ಸ್ವ ಪ್ರತಿಷ್ಠೆ ಅಹಮಿಕೆಗಳಿಗಾಗಿ ಹುಟ್ಟುಹಾಕುವ ಪಂಚಾಯ್ತಿಯ ಮೂಲಕವಾಗಿ ಲಿಂಗ ಪ್ರಭೇದದ ದ್ವಿ - ಸ್ತರ ನ್ಯಾಯವನ್ನು ಕತೆಯು ಸೂಕ್ಷ್ಮವಾಗಿ ದಾಖಲಿಸುತ್ತದೆ. ಮಾತ್ರವಲ್ಲ ವ್ಯಂಗ್ಯ, ವಿಡಂಬನೆ, ಹಾಸ್ಯಗಳ ಸಮರ್ಥ ಬಳಕೆಯಿಂದ ವಸ್ತು ನಿಷ್ಠವಾಗಿ ಉಳಿಯಲು ಯತ್ನಿಸುತ್ತದೆ.

ತಮ್ಮ ಗಂಡಂದಿರಿಂದಲೇ ತಮಗೆ ಅನ್ಯಾಯವಾಗುತ್ತಿರುವುದು ಅರಿವಾದಾಗ ಇಂತ ದಿವ್ಯದರ್ಶನ ಮಾಡಿಸಿದ ದಾನಮ್ಮ ಅವರ ಪಾಲಿಗೆ "ದೇವರೇ ಕಳಿಸಿದ ದುರ್ಗಿಯಂತೆ" ತೋರತೊಡಗುತ್ತಾಳೆ. ಜೊತೆಗೆ ತಮಗಿಂತ ಬಲಿಷ್ಠತೆಯ ಮಿಥ್ಯಾಕಲ್ಪನೆಯ ಹೆದರಿಕೆಯಿಂದ ಯಾರಿಂದ ಹೊಡೆತ, ಬಡಿತ ತಿನ್ನುತ್ತಾ ತಮ್ಮ ಜೊತೆಗಾರರೆಂದು ನಂಬಿದ್ದರೋ ಆ ಗಂಡಸರ ಬಗ್ಗೆ ಅವರ ನೋಟವೇ ಈಗ ಬೇರೆಯಾಗುತ್ತದೆ. ಅವರೆಲ್ಲಾ "ಹೆಂಡ ಕುಡಿದು ಮೈಯೆಲ್ಲ ಲಡ್ಡಾದವರು, ಜಾತಿ ಜಗಳ ತೆಕ್ಕೊಂಡು ಯವ್ವನ ಖರ್ಚು ಮಾಡುತ್ತಿರುವವರು, ಹೇಸಿಗೆ ಸೂಳೆ ಮಕ್ಕಳು" ಎಂಬಂತೆ ಕಾಣಿಸುತ್ತಾರೆ. ಮಾತ್ರವಲ್ಲ "ಯಾವನಾಯ್ತೋ ಅವನ ಜೊತೆಗೆ ಎತ್ತಕಡೆಗಾಯ್ತೋ ಅತ್ತ ಕಡೆಗೆ ಓಡೇ ಹೋಗಬೇಕೆಂದು ಅವರಿಗೆ ಅನಿಸಿತು. ಕಿರಗೂರಿನ ಅವಿದ್ಯಾವಂತ ಹೆಣ್ಣುಮಕ್ಕಳ ಭಾವಾವೇಶದ ಪ್ರವಾಹ, ಅನಿಯಂತ್ರಿತವಾಗಿ ಹೇಗೆ ಹೇಗೋ ಹರಿಯತೊಡಗಿದ್ದರ ಸೂಚನೆ ಅಲ್ಲಿದೆ. ಒಂದು ನೆಲೆಯಲ್ಲಿ ನಾಗಮ್ಮನ ವರ್ತನೆಯನ್ನು ತಪ್ಪಲ್ಲವೆಂದು ಇವರೆಲ್ಲ ಒಪ್ಪಿರುವುದಕ್ಕೆ ತಮ್ಮನ್ನೂ ಆಕೆಯ ಜೊತೆ ಸಮೀಕರಿಸಿಕೊಂಡಿರುವ ಸ್ಥಿತಿಯೂ ಕಾರಣವಾಗಿದೆ. ಮುಂದೆ ಪಂಚಾಯ್ತಿ ಹೊಡೆದಾಟದ ಕಲೆಯಾಗುವುದು, ಆ ಹೊಡೆದಾಟದಲ್ಲಿ ಸ್ತ್ರೀಯರು ಮೇಲುಗೈ ಪಡೆದು ಶಂಕ್ರಪ್ಪನ ಶೇಂದಿ ಅಂಗಡಿಯನ್ನೂ ನಾಶ ಮಾಡುವುದರಲ್ಲಿ ಪರ್ಯಾವಸಾನವಾಗುತ್ತದೆ. ಆದರೆ ಈ ವಿಭಿನ್ನ ವಿಷಯ ಸಾಮಗ್ರಿಗಳೆಲ್ಲಕ್ಕೂ ಕೇಂದ್ರದಲ್ಲಿ ಹೆಣ್ಣಿನ ಅಭಿವ್ಯಕ್ತಿ ಮತ್ತು ಬಿಡುಗಡೆಯ ಪ್ರಶ್ನೆಯನ್ನು ಕಾಣಲು ಸಾಧ್ಯವಿದೆ.

ತುಕ್ಕೋಜಿ ಕಥೆಯಲ್ಲಿ ಬರುವ ಸರೋಜಳ ಪಾತ್ರವೂ ನಾಗರೀಕತೆಯ ಬದಲಾವಣೆಗೆ ತಕ್ಕಂತೆ ಬದಲಾಗುತ್ತಾ ಹೋಗುವ ಹೊಸ ಹೊಸ ಅಭಿರುಚಿಗಳಿಗೆ ತನ್ನನ್ನು ಒಡ್ಡಿಕೊಳ್ಳಬೇಕೆಂಬ ಪ್ರಯತ್ನವಿದೆ. ಮೊದಲು ತನ್ನ ಗಂಡ ಎಲ್ಲರನ್ನು ವಿರೋಧಿಸಿ ತನ್ನನ್ನು ಮದುವೆಯಾಗಿದ್ದಾನೆಂಬ ಪ್ರಸನ್ನತೆಯಿಂದಾಗಿ ಅವನ ಎಲ್ಲಾ ಕಾರ್ಯಗಳಲ್ಲೂ ನೆರವಾಗುತ್ತಾ ಹೋಗುತ್ತಾಳೆ. ನಂತರ

ಅವರಿಗೆ ಹುಟ್ಟಿದ ಮಗುವಿನ ದೆಸೆಯಿಂದ ಸಂಸಾರದಲ್ಲಿ ಏರುಪೇರುಗಳುಂಟಾಗುತ್ತಾ ಸರೋಜ ತನ್ನ ಮನೆ ಹಾಗೂ ಮಗುವಿನ ಕೆಲಸದಲ್ಲಿ ತೊಡಗಿಕೊಳ್ಳುವುದರಿಂದ ತುಕ್ಕೋಜಿಗೆ ಹೊಲಿಗೆಯ ಕೆಲಸದಲ್ಲಿ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ. ಕಾಲಕ್ರಮೇಣ, ಸರೋಜಳಿಗೆ ತುಕ್ಕೋಜಿಯ ಬಿಡುವಿಲ್ಲದ ಕೆಲಸದ ಬಗ್ಗೆ ಬೇಸರ ಮೂಡುತ್ತದೆ. ತಾನೂ ರೈಲ್ವೆ ಇಂಜಿನಿಯರಿಂಗ್ ಸಿಬ್ಬಂದಿಯ ಜೋಡಿಯ ಹಾಗೆ ರಂಗುರಂಗಿನ ಉಡುಪು ತೊಟ್ಟು ಓಡಾಡಬೇಕೆನಿಸುತ್ತದೆ. ಟ್ರೇಲರ್ ಯಂತ್ರದ ಡ್ರೈವರ್ ತಮ್ಮ ಮಗುವನ್ನು ಕೊಂಡೊಯ್ದಾಗಾ ಇಬ್ಬರಿಗೂ ತಮ್ಮ ತಪ್ಪಿನ ಅರಿವಾಗಿ ಮಗುವನ್ನು ತಮ್ಮ ಜಗಳದ ಮಾಧ್ಯಮವಾಗಿ ಬಳಸಿದ್ದಕ್ಕೆ ಸರೋಜಳಿಗೆ ನಾಚಿಕೆಯಾಗಿ ಕೊನೆಗೆ ಮಗುವನ್ನೂ ಕಾಣುವುದರೊಂದಿಗೆ ತಮ್ಮ ಸಾಂಸಾರಿಕ ಜೀವನ ಉತ್ತಮವಾಗುತ್ತದೆ.

ಕುಬಿ ಮತ್ತು ಇಯಾಲ ಕತೆಯಲ್ಲಿ ಬರುವ ಇಯಾಲ ಮುಗ್ಧ ಹುಡುಗಿಯಾಗಿದ್ದು ನಿಗೂಢವಾಗಿ ಕೊಲೆಯಾವುದರ ಚಿತ್ರಣವಿದೆ. ಆಗ ತಾನೆ ಮೈನೆರೆದಿದ್ದ ಅವಳಿಗೆ ತೀವ್ರವಾಗಿ ಹೊಟ್ಟೆ ನೋವು ಬರುತ್ತಿದ್ದುದ್ದರಿಂದ ತಾಯಿ ಮಗಳನ್ನು ಕುಬಿ ಡಾಕ್ಟರರ ಬಳಿ ಔಷಧಿ ಮುಟ್ಟಿಸಿಕೊಂಡು ಬರುವಂತೆ ಕಳಿಸಿರುತ್ತಾಳೆ. ಕಾರಣ ಇದುವರೆವಿಗೂ ಕುಬಿ ಡಾಕ್ಟರರು ಮುಟ್ಟಿ ಕೊಟ್ಟ ಔಷಧಿಯಿಂದ ರೋಗಿಗಳು ಆರೋಗ್ಯವಾಗಿದ್ದಾರೆಂಬ ಭಾವನೆ. ಇಯಾಲ ಡಾಕ್ಟರರ ಬಳಿ ಬಂದು ಹೋದ ನಂತರ ಮುಗ್ಧಳಾದ ಇಯಾಲಳ ಮೇಲೆ ಯಾರೋ ಅತ್ಯಾಚಾರ ಮಾಡಿ ಧೂಪದ ಬಂಡೆಯ ಹತ್ತಿರ ಕೊಲೆ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಡಾ॥ ಕುಬಿಯ ಪ್ರಯತ್ನದಿಂದಾಗಿ ಇಯಾಲಳ ಕೊಲೆಗೈದವನು ಲೋರಿಯೆಂಬುದು ತಿಳಿದು ಬರುತ್ತದೆ. ಡೈನಮೇಟ್ ಸಿಡಿದಿದ್ದರ ಪ್ರಯುಕ್ತ ಲೋರಿ ಕುಬಿಯ ಬಳಿ ಚಿಕಿತ್ಸೆ ಪಡೆಯುವಾಗ ಈ ವಿಚಾರವನ್ನು ತಿಳಿಸುತ್ತಾನೆ. ಅದೇ ತಾನೇ ಋತುಮತಿಯಾದ ಹುಡುಗಿಯನ್ನು ಸಂಭೋಗಿಸುವುದರಿಂದ ತನಗಿದ್ದ ಸ್ತ್ರೀರೋಗ ತೊಲಗುತ್ತದೆ ಎಂದು ಲೋರಿಯ ಅವೈಜ್ಞಾನಿಕ, ಅಸಂಬದ್ಧ ತಿಳುವಳಿಕೆ ಮುಗ್ಧ ಇಯಾಲಳ ಸಾಲಿಗೆ ಕಾರಣವಾಗಿರುತ್ತದೆ. ಜನರಲ್ಲಿ ಮನೆಮಾಡಿದ್ದ ಮೌಢ್ಯಗಳು ಹಾಗೂ ನಂಬಿಕೆಗಳ ಪ್ರಯುಕ್ತ ಇಯಾಲಳ ಬದುಕು ಅಂತ್ಯವನ್ನು ಕಾಣುತ್ತದೆ.

ಆ) ಗ್ರಾಮೀಣ ಪಾತ್ರಗಳು:

ತೇಜಸ್ವಿಯವರು ಮೂಡಿಗೆರೆಯಲ್ಲಿ ವಾಸ್ತವ್ಯ ಹೂಡಿದ ಮೇಲೆ ಅಲ್ಲಿ ಅವರಿಗೆ ಗ್ರಾಮೀಣ ಬದುಕಿನ ಹಾಗೂ ಗ್ರಾಮನಿವಾಸಿಗಳ ಪಾತ್ರಗಳು ಹೆಚ್ಚು ಹೆಚ್ಚು ಆಕರ್ಷಿಸುತ್ತವೆ. "ಪರಿಸರದ ಕಲೆಯಲ್ಲಿ ತೇಜಸ್ವಿಯವರ ಗ್ರಾಮಕಲ್ಪನೆ ಪೂರ್ಣ ಬದಲಾಗಿದೆ. ಏಕೆಂದರೆ ಮೇಲುನೋಟಕ್ಕೆ ರೂಕ್ಷವೂ, ಒರಟೂ ಆಗಿ ತೋರುವ ಈ ಪಶುಸದೃಶ ಶೂದ್ರ ಸಮುದಾಯದಿಂದಲೇ ತೇಜಸ್ವಿ ತಮ್ಮ ಸೃಜನಶೀಲ ಪ್ರೇರಣೆಗಳನ್ನು ಪಡೆಯುತ್ತಿದ್ದಾರೆ. ಈ ಸಮುದಾಯದಲ್ಲಿ ಅಡಗಿರುವ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯನ್ನು ತೇಜಸ್ವಿ ಗಮನಿಸುತ್ತಿದ್ದಾರೆ.

ತೇಜಸ್ವಿ ತಮ್ಮ ಕತೆಗಳಲ್ಲಿ ನಾಗರಿಕ ಹಾಗೂ ಅವರ ನಡುವೆಯೇ ಬದುಕುತ್ತಿರುವ ಮಾಸ್ತಿ, ಬೈರ, ಮಾರನಂಥ ಅನಾಗರೀಕರಿಗೂ ಅವರವರ ಮೌಲ್ಯ ವ್ಯವಸ್ಥೆಯಲ್ಲೇ ತನ್ಮೂಲಕ ಜೀವನ ದರ್ಶನದಲ್ಲೇ ಇರುವ ವ್ಯತ್ಯಾಸಗಳನ್ನೂ ತೇಜಸ್ವಿ ಸೂಕ್ಷ್ಮವಾಗಿ ದಾಖಲಿಸುತ್ತಾರೆ.

ತೇಜಸ್ವಿಯವರ ಅನೇಕ ಕತೆಗಳಲ್ಲಿ ಬರುವ ಯಂಗ್ಟ, ಮಾರ, ಬೈರ ಮಾಸ್ತಿ, ಕಾಳಪ್ಪ, ಕರಿಯಪ್ಪ ಇವರೆಲ್ಲರೂ ಮೇಲ್ನೋಟಕ್ಕೆ ವಿಲಕ್ಷಣರೆಂದೂ, ಕಾಣಿಸುವ ಘಟನೆಗಳ ಮತ್ತು ಪಾತ್ರಗಳ ಮೂಲಕ ತೇಜಸ್ವಿ ಕಾಣಿಸುವ ಸತ್ಯಗಳು ಮಾತ್ರ ಅದ್ಭುತವಾದದ್ದು. ಅಂದರೆ ಮೇಲುನೋಟಕ್ಕೆ ಅಪರಿಚಿತವೂ, ಅನೂಹ್ಯವೂ ಅಸ್ವಸ್ಥವೂ, ಅಸಂಬದ್ಧವೂ ಆದ ಮನುಷ್ಯನ ಅವಸ್ಥೆಯನ್ನೂ, ಮನುಷ್ಯನೂ ಒಂದು ಭಾಗವಾಗಿರುವ ವಿಶ್ವಾತ್ಮಕ ವ್ಯವಸ್ಥೆಯ ಸ್ವರೂಪವನ್ನೂ ಕಂಡು ಕೊಳ್ಳುವುದು, ತೇಜಸ್ವಿ ಬರವಣಿಗೆಯ ಪ್ರಧಾನ ಆಶಯವೆನಿಸುತ್ತದೆ.

ತೇಜಸ್ವಿಯವರ ಸಾಹಿತ್ಯ ಅವರು ಬದುಕಿದ ಪರಿಸರದಿಂದ ಎಷ್ಟು ಪ್ರಭಾವಿತವಾಗಿದೆಯೆಂದರೆ ಕರ್ವಾಲೊ ಕಾದಂಬರಿಯ ಪಾತ್ರಗಳಾದ ಎಂಗ್ಟ ಮತ್ತು ಕರಿಯಪ್ಪ ನಿಜ ಜೀವನದಲ್ಲಿ ಲೇಖಕರನ್ನು ಸಂಧಿಸಿ ಆತನನ್ನು ವಿಚಾರಣೆಗೆ ಗುರಿಪಡಿಸುತ್ತವೆ. ಕರಿಯಪ್ಪ ಬಸ್ಸಿಗೆ ಕಾಯುತ್ತ ನಿಂತಿದ್ದಾಗ ಅವನೊಡನೆ ಕಾಯುತ್ತ ನಿಂತಿದ್ದ ಸ್ಕೂಲು ಹುಡುಗರು ಕರ್ವಾಲೋ ಕಾದಂಬರಿಯಲ್ಲಿ ಕರಿಯಪ್ಪ ಎಂಗ್ಟನ ಹೆಂಡತಿಯನ್ನು ಇಟ್ಟುಕೊಂಡಿದ್ದಾನೆ ಮುಂತಾಗಿ ಕಂಡಾಪಟ್ಟೆ ಬರೆದಿದ್ದೇನೆಂದು ಅವನಿಗೆ ಹೇಳಿ ನಗಾಡಿದರಂತೆ. ಅದರಿಂದ ರೇಗಿದ ಕರಿಯಪ್ಪ ಎಂಗ್ಟನನ್ನೂ ಕರೆದುಕೊಂಡು "ಇಚಾರಣೆ" ಮಾಡಲು ಬೆಳಗಿನ ಝಾವಕ್ಕೆ ಮನೆ ಬಳಿಗೆ ಹಾಜರಾಗಿದ್ದ. ಬಹುಶಃ ಯಾವ ಲೇಖಕನಿಗೂ ಆಗದ ಅನುಭವವೊಂದು ತಮಗೆ ಆಯಿತೆಂದು ಲೇಖಕರು ಹೇಳಿಕೊಳ್ಳುತ್ತಾರೆ.

ಎಂಗ್ಟ ಒಬ್ಬ ಹಾವು ಹಿಡಿಯುವವ ಹಾವು ಹಿಡಿದು ಜೀವನ ಸಾಗಿಸುತ್ತಿದ್ದನು. ಅವನು ಹಾವು ಹಿಡಿಯುವುದರ ಬಗೆಗೆ ಜನ ಹಲವಾರು ಮಾತುಗಳನ್ನು ಹೇಳುತ್ತಿದ್ದರೂ, ಅದರ ಅನುಭವ ನಿರೂಪಕನಿಗೆ ಆಗುವುದು ತಮ್ಮ ಮನೆಯ ಬಳಿ ಹಾವು ಹಿಡಿಯಲು ಆತನನ್ನು ಕರೆಸಿದಾಗ. ಅವನ ಹಾವು ಹಿಡಿಯುವ ಚಾಣಾಕ್ಷತನವನ್ನು ಕಂಡು ನಿರೂಪಕರಿಗೆ ಅನುಮಾನ ಬಂದರೂ ಎಂಗ್ಟನ ಬಗೆಗೆ ನಿರೂಪಕರಿಗೆ ಕಾಳಜಿಯೂ ಇದೆ ಎನ್ನುವುದು ಈ ಮಾತುಗಳನ್ನು ಗ್ರಹಿಸಿದಾಗ ತಿಳಿಯುವುದು.

"ಎಂಗ್ಟನನ್ನು ದೂರದಿಂದ ನೋಡಿದಾಗ ಪಾಪ ಎನ್ನಿಸಿತು. ನಾಗರಿಕತೆ ಮುಂದುವರಿಯುತ್ತಾ, ಎಂಗ್ಟನ ಕುಲಕಸುಬುಗಳು, ಕೈಚಳಕಗಳು ನಿಧಾನವಾಗಿ ನಿರುಪಯುಕ್ತವಾಗುತ್ತಿದ್ದುವು. ಸರ್ಕಾರ ಹಾವಿನ ಚರ್ಮವನ್ನು ರಫ್ತು ಮಾಡುವುದು ನಿಷೇಧಿಸಿದ ಮೇಲೆ ಅವನ ಚರ್ಮಗಳಿಗೆ ದುಡ್ಡು ಸಿಗುತ್ತಿರಲಿಲ್ಲ. ಅವನ ಚಕ್ರಾಣಿ ಬೇರು, ಚಿತ್ರ ಮೂಲದ ಬೇರು, ಸರ್ಪಗಂಧಿ, ಅಳಲೇಕಾಯಿಗಳೂ ವಿಲಾಯಿತಿ ಔಷಧದ ಎದುರು ಗಿರಾಕಿ ಕಳೆದುಕೊಂಡಿದ್ದುವು. ಮೊದಲಿನಂತೆ ಮೊಲ ಕವುಜಗನ ಹಕ್ಕಿ ನೀರುನಾಯಿಗಳನ್ನು ಬೇಟೆಯಾಡುವುದಕ್ಕೂ ಅರಣ್ಯ ಇಲಾಖೆಯವರು ಅವಕಾಶ ಕೊಡುತ್ತಿಲ್ಲ"[5].

ತೇಜಸ್ವಿ ಎಂಗ್ಟನನ್ನು ಕೇವಲ ಒಬ್ಬ ವಿಶಿಷ್ಟ ವ್ಯಕ್ತಿ ಎಂದು ಚಿತ್ರಿಸದೆ ಜೀವನ ಕ್ರಮವೊಂದರ ಪ್ರತಿನಿಧಿ ಎಂದು ಪರಿಭಾಷಿವಿಸುವುದನ್ನು ಗುರುತಿಸುತ್ತೇವೆ. ಕೊನೆಗೆ ಹೇಗೆ ಎಂಗ್ಟನ ಸಂತತಿ ಕ್ರಮೇಣ ಕಣ್ಮರೆಯಾಯಿತು ಎಂಬುದರ ಬಗೆಗೆ ಬಹಳ ಮಾರ್ಮಿಕವಾಗಿ ಚಿತ್ರಿಸುತ್ತಾರೆ ತೇಜಸ್ವಿ.

ತೇಜಸ್ವಿಯವರು ತಮ್ಮ ಪರಿಸರದ ಕತೆಯಲ್ಲಿ ಪ್ರಸ್ತಾಪಿಸುವ ಮಾಸ್ತಿ ಮತ್ತು ಬೈರ ಇವರಿಬ್ಬರು ನಿರೂಪಕರಿಗೆ ಶಿಲಾಯುಗದಿಂದ ನೇರವಾಗಿ ಬಂದು ಅವತರಿಸಿದಂತೆ ಕಂಡ. ಕಾಡಿನಲ್ಲಿ ಬರಬೇಕಾದರೆ ಎದುರಾದ ಇಬ್ಬರನ್ನು ಕಂಡು ಕಿವಿಯೂ ಕೂಡ ಕ್ಷಣ ಹೊತ್ತು ಬೊಗಳಲಾರಂಬಿಸಿತು. ಕೊಂಚ ಮಾಸಲಾದ ಅಥವ ಹರಿದ ಬಟ್ಟೆಗಳನ್ನು ಹಾಕಿಕೊಂಡು ಸರಿಯಾಗಿ ತಲೆ ಬಾಚದೆ ಕೂದಲು ಕೆದರಿಕೊಂಡು, ಚಪ್ಪಲಿ ಮೆಟ್ಟಿಕೊಂಡು, ಒಟ್ಟಿನಲ್ಲಿ ಬಡವರಂತೆ ತೋರಿಸಿಕೊಳ್ಳುವವರನ್ನು ಕಂಡ ಕೂಡಲೇ ರೋಷಾವೇಶದಿಂದ ಆತ ತಮ್ಮ ಮನೆ ಬಳಿ ಬಂದುದೇ ಅಪರಾಧವೆಂಬಂತೆ ಕಿವಿಯು ಬೊಗಳಲಾರಂಬಿಸಿತು.

ತೇಜಸ್ವಿಯವರು ಕಿವಿ ಗಲಾಟೆ ಎಬ್ಬಿಸಿದ್ದನ್ನು ಕಂಡು ಯಾರಿರಬಹುದೆಂದು ನೋಡಿದಾಗ, ಅವರಿಗೆ ಆಕ್ಷಣದಲ್ಲಿ ಕಂಡ ಮನುಷ್ಯ ನರ ಮನುಷ್ಯನಂತೆ ಕಾಣಲಿಲ್ಲ.

"ಆಗ ತಾನೆ ನಾವು ಶಿವಮೊಗ್ಗದ ಆನವೇರಿ ಬಳಿ ನವ ಶಿಲಾಯುಗದ ಶಿಲಾ ಆಯುಧಗಳನ್ನೂ, ಚಾಲುಕ್ಯರ ಕಾಲದ ಇಟ್ಟಿಗೆಗಳನ್ನೂ ಸಂಶೋಧಿಸಿದ್ದೆವು. ಈ ಸಂಬಂಧದಲ್ಲಿ ನಾನು ಶಿಲಾಯುಗದ ಮಾನವರ ರೂಪ, ಆಕಾರ, ಸಂಸ್ಕೃತಿಗಳ ಬಗ್ಗೆ ವಿಪರೀತ ಓದಿಕೊಂಡಿದ್ದೆ. ಅದೇ ಗುಂಗಿನಲ್ಲಿದ್ದ ನನಗೆ ಕಾಡಿನಲ್ಲಿ ಕಂಡ ಮಾನವ ಸಾಕ್ಷಾತ್ತಾಗಿ ಶಿಲಾಯುಗದಿಂದ ನೇರವಾಗಿ ಅಲ್ಲಿ ಬಂದು ಅವತರಿಸಿದಂತೆ ಕಂಡ"[3].

ಹೀಗೆ ಮಾಸ್ತಿಯ ಬಗೆಗೆ ವಿವರಣೆಯನ್ನು ನೀಡುತ್ತಾ ಅವರನ್ನು ಕಂಡಾಗ ಒಂದು ಅಪಾಯಕಾರಿ ಪ್ರಾಣಿಯನ್ನು ನೋಡಿದಷ್ಟು ಹೆದರಿಕೆ ಗಾಬರಿಯಾಯಿತೆನ್ನುತ್ತಾರೆ. ಮಾಸ್ತಿ ಮತ್ತು ಬೈರನ ಸ್ಥಿತಿಯನ್ನು ವಿವರಿಸುವ ನಿರೂಪಕ ಹಾಗೆಯೇ ಅವರ ವ್ಯಕ್ತಿತ್ವದ ಪರಿಚಯವನ್ನೂ ಮಾಡಿಸುತ್ತಾರೆ.

ನಿರೂಪಕರು ಅವರೊಡನೆ ಮಾತಾಡುವಾಗಲೆಲ್ಲಾ ಥೇಟ್ ಶಿಲಾಯುಗದ ಜನರಂತೆಯೇ ಇದ್ದ ಇವರು ಈ ಆಧುನಿಕ ಯುಗದಲ್ಲಿ ಹೇಗೆ ಕಾಲ ಹಾಕುತ್ತಾರೆಂದು ಯೋಚಿಸುತ್ತಿದ್ದೆನೆನ್ನುತ್ತಾರೆ. ಕಾಡಿನಲ್ಲಂತೂ ಕಾಡು ಮೃಗಗಳಿಗೂ ಅವರಿಗೂ ವ್ಯತ್ಯಾಸವೇ ಇರಲಿಲ್ಲವೆಂಬಂತೆ ಕಂಡುಬರುತ್ತಾರೆ.

ಭೈರ ತಾನು ಸಾಕಿದ ನಾಯಿಯೊಂದಿಗೆ ವ್ಯವಹರಿಸುವ ರೀತಿಯನ್ನು ನಿರೂಪಕರು ವಿವರಿಸುತ್ತಾರೆ. ಅವನು ತನ್ನ ನಾಯಿಗೆ ಎಂದೂ ಊಟವೇ ಹಾಕಿಲ್ಲವೇನೋ ಎಂಬಂತೆ ಅದು ಸವೆದುಹೋಗಿತ್ತು. ಅದು ಉತ್ತಮ ಬೇಟೆ ನಾಯಿಯೆಂದರೆ ಯಾರೂ ನಂಬದ ಸ್ಥಿತಿಯಲ್ಲಿತ್ತು. ನಾಯಿ ಸತ್ತಾಗಲೂ ಬೈರನಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಇದನ್ನು ಕಂಡ ನಿರೂಪಕರ ಮನಸ್ಸಿನಲ್ಲಿ ಬೈರನಿಗೆ ಮನುಷ್ಯತ್ವವಾಗಲಿ, ಅಂತಃಕರಣವಾಗಲೀ, ಮಾನವೀಯತೆಯ ಗುಣಗಳಿವೆಯೇ ಎಂಬ ಪ್ರಶ್ನೆಗಳೇಳುತ್ತದೆ.

ತೇಜಸ್ವಿಯವರ ಕತೆಗಳಲ್ಲಿ ಬರುವ ಮಾರನ ಪಾತ್ರ ಬಹಳ ಕುತೂಹಲಕಾರಿಯಾದುದಾಗಿದೆ. ಮಾರ ಹೇಳುವ ಪ್ರತಿಯೊಂದು ಕತೆಯು ಓದುಗರನ್ನು ಕುತೂಹಲದಲ್ಲಿ ಮುಳುಗಿಸುತ್ತದೆ. ಲೇಖಕರೇ ಹೇಳುವಂತೆ ಅವನ ಕತೆಯನ್ನು ಸಂಪೂರ್ಣವಾಗಿ ನಂಬಲು ಸಾಧ್ಯವಾಗದಿದ್ದರೂ ಅದನ್ನು ತಳ್ಳಿಹಾಕುವಂತೆಯೂ ಇಲ್ಲವೆನ್ನುತ್ತಾರೆ.

ನಿರೂಪಕರು ಮಾರನನ್ನು ಒಬ್ಬ ಹಳ್ಳಿ ಮುಕ್ಕ, ದಡ್ಡ ಶಿಖಾಮಣಿ ಎಂದು ತಿಳಿದಿದ್ದವರು ಅವನ ಮೂರ್ಖತನದ ಹಿಂದೆ ಇರುವ ಅಸಾಧಾರಣ ತಿಳಿವಳಿಕೆಯೊಂದು ಮೂರ್ಖತನದ ಮುಸುಗಿನೊಳಗೆ ಕೆಲಸ ಮಾಡುತ್ತಿತ್ತು ಎನ್ನುತ್ತಾರೆ.

ಮಾರ ತುಂಬಾ ವಯಸ್ಸಾಗಿದ್ದ ವ್ಯಕ್ತಿ. ಅವನ ವಿಚಾರಗಳಿಗೆ ಮಾತ್ರ ವಯಸ್ಸಾಗಿದ್ದ ಹಾಗೆ ಕಾಣುತ್ತಿರಲಿಲ್ಲ. ಮಾರನ ಬುದ್ಧಿಶಕ್ತಿ ಮತ್ತು ತರ್ಕ ಇವು ಸಂಬಳಕ್ಕೆ ಸಿಕ್ಕಿಕೊಂಡ ದೆವ್ವ ಕತೆಯಲ್ಲಿ ಕಿವಿಯು ಚಪ್ಪಲಿಗಳನ್ನು ಕದ್ದೊಯ್ಯುತ್ತಿದ್ದ ಹಾಗೂ ಅದಕ್ಕೆ ಮಾರನ ವಿಚಾರವನ್ನು ಕಂಡು ನಿರೂಪಕರಿಗೆ ಕೋಪ ತರಿಸಿದರೂ, ಅವನು ಚಪ್ಪಲಿ ಕಳುವಾಗದಂತೆ ತಡೆಯುವ ಮಾರ್ಗ ಮೌಢ್ಯದಂತೆ ಕಂಡರೂ ಅದು ಆ ಸಂದರ್ಭದಲ್ಲಿ ಸರಿಯಾದ ಮಾರ್ಗದಂತೆ ಕಂಡುಬರುತ್ತದೆ. ಇನ್ನು ಮಾರ ನಿರೂಪಕರ ತೋಟವನ್ನು ಕಾಯುವಾಗ ಅಲ್ಲಿಯೇ ಇದ್ದ ದೇವರಿಗೆ ಹರಕೆ ಹೊತ್ತ ಸಂದರ್ಭದಲ್ಲಿ ಕಳ್ಳತನ ಕಡಿಮೆಯಾಗುವ ವಿಚಾರ ಹಾಗೂ ಮೂಲಿಕೆ ಬಳ್ಳಿಯ ಸುತ್ತ ಕತೆಯಲ್ಲಿ ಮಾರನು ಹೇಳುವ ಪ್ರತಿಯೊಂದು ಕತೆಯಲ್ಲಿಯೂ ಮೌಢ್ಯ ಕಂಡು ಬಂದರೂ ಅವನ ಮಾತನ್ನು ಸಂಪೂರ್ಣವಾಗಿ ತಳ್ಳಿಹಾಕುವಂತೆಯೂ ಇಲ್ಲ. ಮಾರನ ಮಾತುಗಳು ಹಾಸ್ಯವನ್ನು ಉಂಟುಮಾಡಿದರೂ, ಆ ಮಾತುಗಳು ಜೀವನದ ಅನುಭವದಿಂದ ಬಂದ ಮಾತುಗಳಂತೆ ತೋರುತ್ತವೆ. ಆದ್ದರಿಂದ ಅದನ್ನು ಸಂಪೂರ್ಣವಾಗಿ ತಳ್ಳಿಹಾಕುವಂತೆಯೂ ಇಲ್ಲ.

ಇ) ನಾಗರಿಕರ ಪಾತ್ರ

ಪಶ್ಚಿಮದ ವೈಜ್ಞಾನಿಕ ನಾಗರಿಕತೆ ಪ್ರಭಾವಿಸಿದ ಚಿಂತನೆ ಮತ್ತು ಪೂರ್ವದ ಪರಂಪರಾಗತ ಸ್ಥಳೀಯ ಸಾಮಾನ್ಯ ಜ್ಞಾನವನ್ನು ಆಧರಿಸಿದ ನಂಬಿಕೆಗಳ ನಡುವೆ ತಮ್ಮ ಧೋರಣೆಗಳನ್ನು ಖಚಿತಪಡಿಸಿಕೊಳ್ಳಲು, ಇವೆರಡರ ಬಗ್ಗೆಯೂ ಏಕಮುಖ ಒಪ್ಪಿಗೆ – ತಿರಸ್ಕಾರಗಳಿಲ್ಲದ ಅನುಮಾನಗಳನ್ನು ತೇಜಸ್ವಿ ತಮ್ಮ ಕತೆಗಳಲ್ಲಿ ಮೂಡಿಸಿರುವುದನ್ನು ಗುರುತಿಸುತ್ತೇವೆ.

ಅಬಚೂರಿನ ಪೋಸ್ಟಾಫೀಸು ಕತೆಯಲ್ಲಿ ಅಬಚೂರಿನ ಪೋಸ್ಟಾಫೀಸು ಪ್ರಾರಂಭವಾದ ನಂತರ ಬೋಬಣ್ಣನ ಸಾಮಾಜಿಕ ಅಂತಸ್ತೇ ಒಂದು ಮೆಟ್ಟಿಲು ಮೇಲಕ್ಕೆ ಏರಿಬಿಡುತ್ತದೆ. ತೋಟ ವೊಂದರಲ್ಲಿ ರೈಟರ್ ಆಗಿದ್ದ ಬೋಬಣ್ಣ ಈಗ ಒಬ್ಬ ಪೋಸ್ಟ್ ಮಾಸ್ಟರ್. "ಎಲ್ಲರೂ ಬೋಬಣ್ಣ ನನ್ನು ಪೋಸ್ಟ್ ಮಾಸ್ಟರೇ" ಎಂದು ಗೌರವದಿಂದ ಕರೆಯುತ್ತಿದ್ದರು. ಬೋಬಣ್ಣನಿಗೆ ತಾನೊಬ್ಬ ದಿಲ್ಲಿಯೊಡನೆ ಸಂಪರ್ಕ ಹೊಂದಿರುವ ಭಾರತದ ಪ್ರಜೆ ಎಂಬ ಹೆಮ್ಮೆಯುಂಟಾಗತೊಡಗಿತು. ಬೋಬಣ್ಣನ ಎಸ್ಸೆಲ್ಸಿವರೆಗಿನ ಇಂಗ್ಲೀಷ್ ಅವನ ಎಷ್ಟೋ ಪೋಸ್ಟಾಫೀಸಿನ ಕೆಲಸ ಕಾರ್ಯಗಳಿಗೆ ಸಾಲದಾಗುತ್ತಿದ್ದಿತು. ಅದಕ್ಕಾಗಿ ಅವನು ಹಳೆ ಇಂಗ್ಲೀಷ್ – ಕನ್ನಡ ಡಿಕ್ಷನರಿಯನ್ನು ಇಟ್ಟುಕೊಂಡನು. ಆ ನಂತರ ಬೋಬಣ್ಣನಲ್ಲಾದ ವೈಯಕ್ತಿಕ ಪರಿವರ್ತನೆ ಅವನ ಕೌಂಟುಂಬಿಕ ಜೀವನದಲ್ಲಿ ಇದ್ದ ಹೊಸ ಸಮಸ್ಯೆಗಳ ಸುತ್ತ ಕತೆ ಬೆಳೆಯುತ್ತಾ ಒಂದು ಹಂತದಲ್ಲಿ, ಈ ರೀತಿಯಾಗಿ ಪೋಸ್ಟಾಫೀಸಿನ ವ್ಯವಹಾರಗಳು ಹೆಚ್ಚುತ್ತಾ ಬಂದಂತೆ ಬೋಬಣ್ಣನ ಮನಶ್ಶಾಂತಿ ನಶಿಸುತ್ತಾ ಬಂದಿತು. ಬೋಬಣ್ಣ ತನ್ನ ಮನಸ್ಸಿನ ಕಿರಿಕಿರಿ ಅಶಾಂತಿಗಳಿಗೆ ಏನು ಕಾರಣವೆಂದು ಅನೇಕ ಸಾರಿ ಆಲೋಚಿಸಿದ್ದನು. ಈ ಹಾಳು ಪೋಸ್ಟಾಫೀಸೇ ಅದಕ್ಕೆ ಕಾರಣವೋ ಅಥವಾ ಅಜೀಜನಿಗೆ ಬಂದ ಆ ನಗ್ನ ಚಿತ್ರವೋ?

ಮೊದಲು ಪೋಕರಿಯಾಗಿ, ಆಮೇಲೆ ಸಂಸಾರಿಯಾಗಿ 'ನೆಮ್ಮದಿಯಾಗಿ ಕಾಲಹಾಕಿದ್ದ' ಬೋಬಣ್ಣನ ಜೀವನದಲ್ಲಿ ಪೋಸ್ಟಾಫೀಸು ಒಂದು ಬದಲಾವಣೆ ತಂದಿತ್ತು. ಕ್ರಮೇಣ ಆ ಕೆಲಸವೂ ಯಾಂತ್ರಿಕವಾಯ್ತು. ಹಾಗಾಗಿ ಈ ಹೊಸ ಕೆಲಸವನ್ನು ಹೆಚ್ಚು ರಂಜನೀಯ ಮಾಡಿಕೊಳ್ಳುವ ಹೊಸ ಚೇಷ್ಟೆಗಳನ್ನು ಅವನು ಹೊಂಚಿಕೊಳ್ಳಬೇಕಾಯಿತು.

"ಬೋಬಣ್ಣನಿಗೆ ಈ ರೀತಿ ಅವರಿವರ ಕಾರ್ಡುಗಳನ್ನು ಓದುವುದು, ಯಾರಿಗಾದರೂ ಯಾವುದಾದರೂ ಪುಸ್ತಕ ಬಂದರೆ ಅದನ್ನು ಉಪಾಯವಾಗಿ ಬಿಚ್ಚಿ ಓದುವುದು, ಅನಂತರ ಅದನ್ನು ತಲುಪಿಸುವುದು ಮುಂತಾದ ಚೇಷ್ಟೆಗಳು ಸಪ್ಪೆಯಾದ ಪೋಸ್ಟಾಫೀಸಿನ ಕೆಲಸದಲ್ಲಿ ಒಂದು ಬಗೆಯ ಮನರಂಜನೆಯನ್ನು ಒದಗಿಸುತ್ತಿದ್ದವು. ಅಜೀಜನಿಗೆ ಬಂದ ನಗ್ನ ಚಿತ್ರ ನೋಡಿದ ಮೇಲಂತೂ ಕವರಿನೊಳಗೆ ಸುತ್ತಿ ಬಂದುದೆಲ್ಲಾ ನಗ್ನ ಚಿತ್ರವೇ ಎಂದು ತಿಳಿಯುತ್ತಿದ್ದನು. ಮಾಸಿಕಗಳೋ, ವಾರ ಪತ್ರಿಕೆಗಳೋ ಯಾರಿಗಾದರೂ ಬಂದರೆ ಅದರ ಮೂಲೆ ಮೂಲೆಗಳಲ್ಲೂ ನಗ್ನ ಚಿತ್ರಗಳಿಗಾಗಿ ಹುಡುಕುತ್ತಿದ್ದನು"[5].

ಇದರಿಂದಾಗಿ ಬೋಬಣ್ಣ ಅನೇಕ ಸಮಸ್ಯೆಗಳಿಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ಬೋಬಣ್ಣನ ಹೆಂಡತಿ ಕಾವೇರಿಗೂ, ಅತ್ತೆ ಮಾಚಮ್ಮನಿಗೂ ಇದರ ಬಿಸಿ ತಟ್ಟುತ್ತದೆ. ನನಗೇನೋ ನಮ್ಮ ಮನೆ ಪೋಸ್ಟಾಫೀಸು ಮಾಡಿದ್ದು ಸರಿಬರಲಿಲ್ಲ. ಇವರಿಗೆ ತಾನು ಭಾರಿ ದೊಡ್ಡ ಆಫೀಸರು ಎಂದು ಜಂಭ ಬಂದಿದೆ. ಈ ತಿಂಗಳ ಸಂಬಳದಲ್ಲಿ ಒಂದು ಕರಿ ಕನ್ನಡಕ ತರ್ತೀನಿ ಎಂದು ಹೇಳಿದ್ದರು. ಎಂದು ಕಾವೇರಿ ಬಯ್ಯುತ್ತಾಳೆ. ಮನೆಯನ್ನು ಪೋಸ್ಟಾಫೀಸು ಮಾಡಿದ ನಂತರ ಕಾಗದ ಬರೆಸಲು ಮತ್ತು ಓದಿಸಲು ಹಳ್ಳಿಯ ಅನಕ್ಷರಸ್ತರೆಲ್ಲ ಅಲ್ಲಿ ನೆರೆಯುತ್ತಿದ್ದರಷ್ಟೆ. ಈ ಗುಂಪುಗಳು ಕ್ರಮೇಣ ಕ್ಲಬ್ಬಿನಲ್ಲಿ ನೆರೆಯುವ ಮನರಂಜನೆಯ ಗುಂಪುಗಳಂತೆ ಪರಿವರ್ತಿತವಾಗುವುದನ್ನು ಮಾಚಮ್ಮ ಗಮನಿಸಿದಳು. ಬೋಬಣ್ಣನ ಅಶಾಂತಿ ಅವನ ಕುಟುಂಬದ ಅಶಾಂತಿಯ ಜೊತೆ ಊರಿನಲ್ಲಿಯೂ ಅಶಾಂತಿ ಬೆಳೆಯುತ್ತದೆ. ಕೊನೆಗೆ ಪೋಸ್ಟಾಫೀಸೇ ಮುಚ್ಚಿ ಹೋಗುತ್ತದೆ. ಕತೆಯು ಯಾವ ಸರಳ ಸಾಧಾರಣೀಕರಣಕ್ಕೂ ಕೈ ಹಾಕುವುದಿಲ್ಲ. ಯಾವ ಸುಲಭ ನೈತಿಕ ತೀರ್ಮಾನಗಳನ್ನೂ ತೆಗೆದುಕೊಳ್ಳುವುದಿಲ್ಲ. ಒಂದು ಪ್ರಕ್ರಿಯೆಗೆ ಕೇವಲ ಸಾಕ್ಷಿಯಾಗುತ್ತದೆ.

ಕುಬಿ ಮತ್ತು ಇಯಾಲದಲ್ಲಿ ದಟ್ಟವಾದ ರಾಜಕೀಯ ಪರಿಸರವೂ ಇದೆ. ನೌಕರಶಾಹಿಯ ಭೀಭತ್ಸ ಚಿತ್ರಗಳೂ ಇವೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಮ್ಮ ಗ್ರಾಮೀಣ ಜೀವನ ಸಾಗುತ್ತಿರುವ ಬಗೆಯ ಸಾಂಸ್ಕೃತಿಕ ಕಥನವಾಗಿಯೂ ಈ ಕಥೆಗಳನ್ನು ಅಭ್ಯಾಸ ಮಾಡಬಹುದಾಗಿದೆ. ನಮ್ಮ ಹಳ್ಳಿಗಳ ಬಗ್ಗೆ ತೇಜಸ್ವಿಯವರಿಗೆ ರಮ್ಯ ನಿಲುವುಗಳು ಇಲ್ಲ. ನಮ್ಮ ಗ್ರಾಮಗಳ ದುರವಸ್ಥೆಯ ನಿಷ್ಠುರ ಅವಲೋಕನ ಈ ಸಂಕಲನದ ಕತೆಗಳಲ್ಲಿ ಎದ್ದು ಕಾಣುತ್ತಿದೆ.

"ಕುಬಿಗೆ ಭೈರಾಪುರದ ರಾಜಕಾರಣದ ಹೃದಯ ವಿದ್ರಾವಕ ಸ್ವರೂಪ ನಿಧಾನವಾಗಿ ಅನುಭವಗಮ್ಯವಾಗುತ್ತಿದ್ದಿತು. ಪ್ರತಿಯೊಂದು ಕೂಡ ಈ ಮಧಾರಿ ರಾಜಕಾರಣದ ಪ್ರಭಾವವಲಯಕ್ಕೆ ಸಿಕ್ಕಿದೊಡನೆಯೇ ಅದರ ಸತ್ಯ, ನ್ಯಾಯ, ವಾಸ್ತವಗಳೆಲ್ಲಾ ತಲೆಕೆಳಕಾಗಿ ಹೋಗುತ್ತಿದ್ದವು. ಕೊಲೆ ಒಂದು ಕರುಣೆಯಾಗಿ, ಕಳ್ಳತನ ಒಂದು ಉತ್ತಮ ಕರ್ತವ್ಯವಾಗಿ ಅಸತ್ಯವೇ ಸತ್ಯವಾಗಿ ಹೋಗುತ್ತಿತ್ತು. ಒಕ್ಕಲಿಗರದೊಂದು ಲಿಂಗಯತರದೊಂದು ಗುಂಪು ಇತ್ತು. ಸೊಸೈಟಿಯಲ್ಲಿ ಸಹಕಾರಿ ಬ್ಯಾಂಕುಗಳಲ್ಲಿ ತಾಲ್ಲೂಕು ಬೋರ್ಡಿನಲ್ಲಿ ಎಲ್ಲೆಂದರಲ್ಲಿ ಇದರ ತಾಳಲಾರದ ಉಪಟಳ. ಹಲವು ಜನ ಪ್ರತಿಷ್ಠಿತ ಮುಸಲ್ಮಾನರೂ ಹಾಗೂ ಬ್ರಾಹ್ಮಣರೂ ಕುಯುಕ್ತಿಯಿಂದ ಯಾವ ಯಾವ ಎತ್ತು ಗೆಲ್ಲುತ್ತದೆಯೋ ಅದರದರ ಬಾಲವನ್ನು ಹಿಡಿಯುತ್ತಾ ಕಾಲ ಕಳೆಯುತ್ತಿದ್ದರು. ಭೈರಾಪುರ ಎಂದರೆ ಸರ್ವರೋಗಗಳ ಸಂಗ್ರಹಾಲಯದಂತಿತ್ತು".

ಇಂಥ ಭೈರಾಪುರಕ್ಕೆ ಕುಬಿ ವೈದ್ಯನಾಗಿ ಬಂದಾಗ ಅವನಿಗೆ ರೋಗಿಗಳ ಮೂಢನಂಬಿಕೆಗಳ ಜಗತ್ತಿನಲ್ಲಿ ವ್ಯವಹರಿಸುವುದು ಒಂದು ದೊಡ್ಡ ಸವಾಲೇ ಆಗುತ್ತದೆ. ಕ್ರಮೇಣ ರೋಗಗ್ರಸ್ತರಾಗಿರುವುದು ಕೇವಲ ತನ್ನ ಆಸ್ಪತ್ರೆಗೆ ಬರುವ ರೋಗಿಗಳಲ್ಲ. ಇಡೀ ವ್ಯವಸ್ಥೆಯೇ ರೋಗಗ್ರಸ್ಥವಾಗಿದೆ ಎನ್ನುವುದನ್ನು ಕುಬಿ ಕಂಡುಕೊಳ್ಳುತ್ತಾನೆ. ಇಡೀ ವ್ಯವಸ್ಥೆಗೆ ಚಿಕಿತ್ಸೆಯಾಗದೆ ಭೈರಾಪುರದ ರೋಗಗಳು ಗುಣಹೊಂದುವುದಿಲ್ಲವೆಂದು ಅವನಿಗೆ ಮನದಟ್ಟಾಗುತ್ತದೆ. ಈ ಕತೆ ವಾಸ್ತವವಾದಿ ನಿರೂಪಣೆಯಲ್ಲೇ ಇದ್ದರೂ ಬಹು ಬೇಗ ಇಲ್ಲಿನ ರೋಗ ಒಂದು ರೂಪಕವಾಗಿ ಬಿಡುತ್ತದೆ. ಅಲ್ಲಿನ ವರ್ಣಭೇದ, ಜಾತಿಬೇಧ, ಮೂಢನಂಬಿಕೆ, ಪೋಲೀಸ್ ಕ್ರೌರ್ಯ, ನೌಕರಶಾಹಿಯ ದಗಲ್ಬಾಜಿತನಗಳ ಮೂಲಕ ರೋಗ ಉಲ್ಬಣವಾಗುತ್ತಾ ಹೋಗುತ್ತದೆ. ಇಂಥ ಒಂದು ವ್ಯವಸ್ಥೆಯಲ್ಲಿ ಮುಗ್ಧ ಇಯಾಲ ನಾಶವಾಗುವುದು ಒಂದು ಸಹಜ ವ್ಯಾಪರವೇ ಆಗಿ ಬಿಡುತ್ತದೆ. ಈ ಕ್ರೌರ್ಯವನ್ನು ಪಾರಭೌತಿಕ ಆಯಾಮವೊಂದಕ್ಕೆ ಎತ್ತಿ ಬಿಡುವುದು ಈ ಕತೆಯ ಒಂದು ವಿಶೇಷ.

ಆಧುನಿಕ ಶಿಕ್ಷಣ ನಮ್ಮಲ್ಲಿ ಭಿತ್ತಿರುವ ಅಪನಂಬಿಕೆಗಳ, ಹೊಸ ನಂಬಿಕೆಗಳ, ಸಂದೇಹಗಳ ಪ್ರಭಾವ ತೀರ ಗಾಢವಾದುದಷ್ಟೆ. ಈ ಸಂಶಯಗಳಿಂದಾಗಿ ನಮ್ಮ ನಂಬಿಕೆಗಳಿಗಿಂತ ಭಿನ್ನವಾದ ನಂಬಿಕೆಗಳನ್ನು, ಮೌಲ್ಯಗಳನ್ನು, ವಿದ್ಯೆಗಳನ್ನು, ಒಟ್ಟಾರೆ ಜೀವನ ಕ್ರಮಗಳನ್ನು ನಾವು ಸಮಾಧಾನದಿಂದ ಗಮನಿಸುತ್ತಿಲ್ಲವೆ? ನಮ್ಮ ಜೀವನ ವಿಧಾನ, ನಂಬಿಕೆಗಳಿಗೆ ಹೊಸತಾದ ಪ್ರಪಂಚಗಳನ್ನೂ, ವ್ಯಕ್ತಿಗಳನ್ನೂ ಅರ್ಥ ಮಾಡಿಕೊಳ್ಳುವಷ್ಟು ಸಿನಿಕತನ, ಅಸಹನೆ, ಅಹಂಕಾರಗಳನ್ನು ಹೊಸ ನಾಗರಿಕತೆ ಕಲಿಸಿಬಿಟ್ಟಿದೆಯೇ ಎಂಬ ಪ್ರಶ್ನೆಗಳನ್ನು ತೇಜಸ್ವಿ ಕಥೆಗಳು ನಿಧಾನವಾಗಿ ಎತ್ತುತ್ತ ಹೋಗುತ್ತದೆ.

ಅಡಿಟಿಪ್ಪಣಿ

1. ಸರಹದ್ದುಗಳ ಆಚೆ-ಈಚೆ – ಡಾ॥ ಬಿ.ಎನ್.ಸುಮಿತ್ರಬಾಯಿ – ಪು.ಸಂ. – 71
2. ಕಿರಗೂರಿನ ಗಯ್ಯಾಳಿಗಳು – ತೇಜಸ್ವಿ ಪು.ಸಂ. – 06
3. ಅದೇ ಪು.ಸಂ. – 06
4. ಪರಿಸರದ ಕತೆ – ತೇಜಸ್ವಿ – ಪು.ಸಂ. – 57
5. ಅದೇ ಪು.ಸಂ. – 25
6. ಅಬಚೂರಿನ ಪೋಸ್ಟಾಫೀಸು – ತೇಜಸ್ವಿ – ಪು.ಸಂ. – 06
7. ಅದೇ ಪು.ಸಂ. – 49

ಅಧ್ಯಾಯ- 6

ತೇಜಸ್ವಿಯವರ ಕರ್ವಾಲೋ ಕಾದಂಬರಿಯಲ್ಲಿ ಪ್ರಕೃತಿ ಮತ್ತು ಪರಿಸರದ ಪ್ರಸ್ತಾಪ

ತೇಜಸ್ವಿಯವರ "ಕರ್ವಾಲೋ" ಕಾದಂಬರಿ ಬದುಕಿನ ವಿಸ್ಮಯವನ್ನು ಕುರಿತ ಕಾದಂಬರಿಯಾಗಿದೆ. ಇದು ಮನುಷ್ಯ-ಪ್ರಕೃತಿ, ಮನುಷ್ಯ-ಸಮಾಜ, ಮನುಷ್ಯ- ಮನುಷ್ಯರ ನಿಗೂಢತೆಯ ಬದುಕನ್ನು ವಿವರಿಸುತ್ತದೆ. ತೇಜಸ್ವಿಯವರು ಕರ್ವಾಲೋ ಕಾದಂಬರಿಯ ಮೂಲಕ ಪ್ರಕೃತಿಯ ಒಂದು ವೈಜ್ಞಾನಿಕ ಅಧ್ಯಯನಕ್ಕೆ ತೆರೆದುಕೊಂಡ ಕೃತಿಯೆಂಬುದನ್ನು ತೋರಿಸಿದ್ದಾರೆ.

ಕರ್ವಾಲೋ ಕಾದಂಬರಿಯ ಒಂದು ತುದಿ ವಿಜ್ಞಾನವಾದರೆ ಇನ್ನೊಂದು ತುದಿ ಪ್ರಕೃತಿ, 21ನೇ ಶತಮಾನಕ್ಕೆ ಕಾಲಿರಿಸುತ್ತಿರುವ ಮನುಷ್ಯನ ಮಹತ್ವದ ವೈಜ್ಞಾನಿಕ ಸಾಧನೆಯ ತುತ್ತ ತುದಿಯ ಘಟ್ಟದಿಂದ ಆರಂಭವಾಗುವ ಈ ಕಾದಂಬರಿ ಬಂದು ನಿಲ್ಲುವುದು ಈ ಸಾಧನೆಯ ಅಲ್ಪತೆಯನ್ನು ತೋರಿಸುವ ಹಂತದಲ್ಲಿ, ನಾಗರೀಕ ಬದುಕಿನ ಧಾವಂತದಲ್ಲಿ ತೀರ ಕ್ಷುಲ್ಲಕ ವಸ್ತು ಎನ್ನುವಂತೆ ಉಪೇಕ್ಷೆಗೆ, ಅವಜ್ಞೆಗೆ ಒಳಗಾಗಿರುವ ಪ್ರಕೃತಿ ಕಾದಂಬರಿ ಬೆಳೆದಂತೆ ತನ್ನ ನಿಗೂಢತೆಯ ಸ್ವರೂಪವನ್ನು ಎಳೆಎಳೆಯಾಗಿ ಬಿಚ್ಚುತ್ತ ನಿಗೂಢವೇ ಆಗಿ ಉಳಿಯುವುದು, ಅದ್ಭುತಗಳನ್ನು ತೋರುತ್ತಲೇ ವಿಸ್ಮಯವಾಗಿ ಉಳಿಯುವುದು, ಕೈಗೆಟುಕಿದಷ್ಟು ಹತ್ತಿರ ಬಂದಂತೆ ಮಾಡಿ ದೂರವೇ ಉಳಿದು ಬಿಡುವುದು, ಮನುಷ್ಯನ ಅಹಂಕಾರಕ್ಕೆ ಸವಾಲಾಗುವುದು ಈ ಕೃತಿಯ ವಿಶೇಷ.

ಈ ವಿಜ್ಞಾನ-ಪ್ರಕೃತಿ ಎರಡು ತುದಿಗಳ ನಡುವೆ ಕಾದಂಬರಿಯ ಪಾತ್ರಗಳು ಬಂದು ಹೋಗುತ್ತವೆ. ಅವುಗಳ ಬದುಕು ಅಸ್ತಿತ್ವ ಪಡೆದುಕೊಳ್ಳುತ್ತದೆ. ಈ ಪಾತ್ರಗಳಲ್ಲೂ ನಮಗೆ ಎರಡು ವಿರುದ್ಧವಾದ ತುದಿಗಳೇ ಕಂಡು ಬರುತ್ತವೆ. ವಿಜ್ಞಾನಿ ಕರ್ವಾಲೋ ಒಂದು ಕೊನೆಯಾದರೆ ಮಂದಣ್ಣ ಮತ್ತೊಂದು ಕೊನೆ. ಕರ್ವಾಲೋ ಅವರ ಅಸ್ತಿತ್ವದ ಬೇರುಗಳು ವಿಜ್ಞಾನ ಕ್ಷೇತ್ರದಲ್ಲಿ ನೆಲೆ ಪಡೆದುಕೊಂಡರೆ, ಮಂದಣ್ಣನ ಅಸ್ತಿತ್ವ ಇರುವುದು ಪ್ರಕೃತಿಯಲ್ಲಿ ವಿಜ್ಞಾನ- ಪ್ರಕೃತಿಗಳ ನಡುವಣಕೊಂಡಿಯಾಗಿ, ಜೀವ ತಂತುವಾಗಿ, ಜೀವ ವಿಕಾಸ ಪಥದ ಅವಶೇಷವಾಗಿ ಕರ್ವಾಲೋ ಮಂದಣ್ಣನ ನಡುವಣ ಸಂವಹನ ಕ್ರಿಯೆಯಾಗಿ, ಆಸಕ್ತಿಯ ಕೇಂದ್ರವಾಗಿ ಹಾರುವ ಓತಿ ಬರುತ್ತದೆ. ಹಾರುವ ಓತಿಯನ್ನು ಕೇಂದ್ರ ವಸ್ತುವಾಗಿಟ್ಟುಕೊಂಡ ತೇಜಸ್ವಿ ಜೀವ ವಿಜ್ಞಾನ, ಸಮಾಜ ವಿಜ್ಞಾನ, ಪ್ರಕೃತಿ ವಿಜ್ಞಾನ, ಮಾನವ ಶಾಸ್ತ್ರ ಮೊದಲಾದವುಗಳನ್ನು ತಮ್ಮ

ನಿರೂಪಣೆಯಲ್ಲಿ ಸೇರಿಸಿಕೊಂಡಿದ್ದಾರೆ. ಹೀಗೆ ಒಂದರೊಳಗೊಂದು ಬೆರೆಯುತ್ತ, ಇತಿಹಾಸ ವರ್ತಮಾನ- ಭವಿಷ್ಯತ್ತುಗಳನ್ನು ಬೆಸೆಯುತ್ತ, ವಿಜ್ಞಾನ ಆಧ್ಯಾತ್ಮವಾಗುತ್ತ, ವಾಸ್ತವ ವಿಸ್ಮಯವಾಗುತ್ತ ಓದುಗನನ್ನು ಆವರಿಸಿ ಬಿಡುವ ಈ ಕಾದಂಬರಿ ಪ್ರಬುದ್ಧ ಚಿಂತಕನೊಬ್ಬ ತೀವ್ರ ಕಾಳಜಿಯಿಂದ ನಡೆಸಿದ ತತ್ವ ಜಿಜ್ಞಾಸೆಯಾಗಿದೆ. ಜೀವಪರ ಧೋರಣೆಯ ಕಲಾಕಾರನೊಬ್ಬ ಹಿಡಿದಿಟ್ಟ ದಟ್ಟ ಜೀವನದ ವಿವರಣೆಯಾಗಿ, ವಿಸ್ಮಯಗಳ ಬೆನ್ನು ಹತ್ತಿದ ವಿಜ್ಞಾನಾಸಕ್ತನೊಬ್ಬ ಮಂಡಿಸಿದ ದಾಖಲೆಗಳ ಪುಸ್ತಕದಂತಿದೆ.

ಅರವತ್ತು ಕೋಟಿ ವರ್ಷಗಳ ಹಿಂದೆ ಜೀವಿಸಿದಂತಹ ಹಾರಾಡುವ ಓತಿಯೊಂದರ ಸಂಶೋಧನೆಗೆ ಹೊರಟ ಕೀಟಶಾಸ್ತ್ರಜ್ಞ ಮತ್ತು ಸಸ್ಯವಿಜ್ಞಾನಿ ಪ್ರೋ ಕರ್ವಾಲೋ, ಅವರನ್ನು ಹಿಂಬಾಲಿಸಿದ ಭಿನ್ನ ಭಿನ್ನ ಜೀವನಾಸಕ್ತಿಯುಳ್ಳ ವ್ಯಕ್ತಿಗಳ ತಂಡ ಪಡೆಯುವ ವಿಶಿಷ್ಟ ಅನುಭವಗಳೇ ಕರ್ವಾಲೋ ಕಾದಂಬರಿಯ ಕಥಾಹಂದರದಲ್ಲಿ ಕಂಡು ಬರುವ ಅಪೂರ್ವ ವಸ್ತು ವೈವಿಧ್ಯವಾಗಿದೆ. ಕರ್ವಾಲೋ ಹುಡುಕಲು ಹೊರಟಿರುವ ಓತಿಯೊಂದರ ಹುಟುಕಾಟದ ಅಂಗವಾಗಿ ಮನುಷ್ಯ ಜೀವಿಗಳ ಮನಸ್ಸುಗಳ ವಿಕಾಸ ಈ ಕಾದಂಬರಿಯಲ್ಲಿ ಚರ್ಚಿಸಲ್ಪಟ್ಟಿದೆ. ವಿಜ್ಞಾನದ ಚಕ್ಷುವಿನಿಂದ ವ್ಯಕ್ತಿಯನ್ನು ನೋಡುವ, ಪರಿಸರದ ಮಧ್ಯೆ ಬದುಕಿರುವ ವ್ಯಕ್ತಿಯ ಮನುಷ್ಯತ್ವವನ್ನು ಗುರುತಿಸಲು ವಿಶಿಷ್ಟ ದೃಷ್ಟಿ ಈ ಕಾದಂಬರಿಯಲ್ಲಿ ಒಡ ಮೂಡಿದೆ. ವೈಜ್ಞಾನಿಕತೆಯ ಕತಾ ನಿರೂಪಣೆ ಶ್ರೀ ಸಾಮಾನ್ಯನಿಗೂ ಅರ್ಥವಾಗುವಷ್ಟು ಸಹಜವಾಗಿ ಕರ್ವಾಲೋದಲ್ಲಿ ಸಂವಹನಗೊಂಡಿರುವುದು ಅದರ ಹೆಚ್ಚುಗಾರಿಕೆಯಾಗಿದೆ. ವೈಚಾರಿಕತೆಯನ್ನು ತನ್ನ ಸಮಕಾಲೀನ ಸಂದರ್ಭದ ಹಿನ್ನಲೆಯಲ್ಲಿ ವಿವರಿಸುವ ಪ್ರಯತ್ನ ಮಾಡಿರುವುದು ಈ ಕಾದಂಬರಿಯ ಹೆಚ್ಚುಗಾರಿಕೆಯಾಗಿದೆ.

ಕರ್ವಾಲೋ ಕಾದಂಬರಿಯ ನಿರೂಪಕ ಸಹ್ಯಾದ್ರಿ ಶ್ರೇಣಿಯ ದಟ್ಟ ಅರಣ್ಯದ ಪ್ರಾಕೃತಿಕ ಪರಿಸರದ ಮಧ್ಯೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ಸುತ್ತಮುತ್ತಲ ಪ್ರದೇಶವೊಂದರಲ್ಲಿ ಗದ್ದೆ- ತೋಟದ ವ್ಯವಸಾಯ ಮಾಡಿಕೊಂಡಿರುವ ವ್ಯಕ್ತಿ. ಕರ್ವಾಲೋದ ಕತೆ ನಡೆಯುವುದು ಅದೇ ಹಳ್ಳಿಯ ಪರಿಸರದಲ್ಲಿ, ಕತೆಯ ನಿರೂಪಕ, ಮಂದಣ್ಣ ಎಂಬ ಬಡ ಹಳ್ಳಿಗ, ಕರ್ವಾಲೋ ಎಂಬ ಸಂಶೋಧಕ- ಈ ಮೂವರೂ ತಮ್ಮ ಪರಿಸರದಲ್ಲಿ ಕಂಡುಕೊಂಡ ವಿಸ್ಮಯಕರ ಸಂಗತಿಗಳೇ ಕರ್ವಾಲೋ ಕಾದಂಬರಿಯ ವಸ್ತು. ಹಳ್ಳಿಗನಾದ ಮಂದಣ್ಣನಲ್ಲಿ ಹುದುಗಿರುವ ಪ್ರತಿಭೆಯೇ ಈ ಕಾದರಂಬರಿಯ ತಳಪಾಯ ಮಂದಣ್ಣನ ಗೆಳೆತನದಿಂದ ಮತ್ತು

ಕರ್ವಾಲೋರವರ ಮಾರ್ಗದರ್ಶನದಿಂದ ನಿರೂಪಕ ಕಂಡುಕೊಂಡ ಅರಣ್ಯ ಮಧ್ಯದ ಜೀವರಾಶಿಯ ನಿಗೂಢ ಬದುಕು ಈ ಕಾದಂಬರಿಯ ಇನ್ನೊಂದು ಸ್ತರ. ವಿಜ್ಞಾನಿಯಾದ ಕರ್ವಾಲೋ ಮಂದಣ್ಣ ಪ್ರಭಾಕರ, ಬಿರಿಯಾನಿ ಕರಿಯಪ್ಪ, ಹಾವುಗೊಲ್ಲರ ಎಂಗ್ಟ ಮುಂತಾದವರೊಡನೆ ಸೇರಿಕೊಂಡು ಕಾಲ ಜ್ಞಾನದಂತೆ ರೂಪುಗೊಳ್ಳುವ ಅಚ್ಚರಿಯ ಕತೆ ಇಲ್ಲಿ ಸ್ವಾರಸ್ಯಕರವಾಗಿ ಮೂಡಿ ಬಂದಿದೆ. ಕರ್ವಾಲೋರವರ ವಿಶಿಷ್ಟ ಜ್ಞಾನದ ಬೆಳಕಿನಲ್ಲಿ ನಿರೂಪಕ, ಮಂದಣ್ಣ, ಕರಿಯಪ್ಪ, ಕಾಲದೇಶಗಳ ಪರಿಧಿಯ ಗೆರೆಯನ್ನು ಮೀರಿ ಹಾರುವ ಓತಿಯ ಮಿಂಚು ನೋಟವನ್ನು ವಿವರಿಸುವ ಕಾತುರದ ಘಟನೆ ಈ ಕಾದರಂಬರಿಯಲ್ಲಿ ಮೂಡಿ ಬಂದಿದೆ.

ಕರ್ವಾಲೋ ಕೇವಲ ಬದುಕಿನ ವೈದೃಶ್ಯಗಳ ದಾಖಲೆಯಲ್ಲಿ ಒಂದು ಸಮಾಜದ ಬದುಕಿನ ಪ್ರಕ್ರಿಯೆಯಲ್ಲಿ ಹೊರಹೊಮ್ಮುವ ವಿವಿಧ ಧ್ವನಿಗಳಿಗೆ ಸದಾ ತೆರೆದುಕೊಂಡು ಒಟ್ಟು ಬದುಕಿನ ಅರ್ಥವನ್ನು ಶೋಧಿಸಿ ಹೊರಡುವ ಪ್ರಾಮಾಣಿಕ ಪ್ರಯತ್ನ. ಹೀಗಾಗಿ ಈ ಕಾದಂಬರಿಯಲ್ಲಿ ಮುಖ್ಯ, ಅಮುಖ್ಯಗಳ, ಸಾಮಾನ್ಯ – ಅಸಮಾನ್ಯಗಳ, ಲೌಕಿಕ – ಅಲೌಕಿಕಗಳ ಸರಳ ವರ್ಗೀಕರಣ ಇಲ್ಲ. ಎಲ್ಲಾ ಪಾತ್ರಗಳಿಗೂ, ಎಲ್ಲಾ ಘಟನೆಗಳಿಗೂ ತಮ್ಮದೇ ಆದ ಅಸ್ತಿತ್ವವಿದೆ. ಆದ್ದರಿಂದಲೇ ಮೇಲು ನೋಟಕ್ಕೆ ಕಾದಂಬರಿಯ ಬಹಳಷ್ಟು ಘಟನೆಗಳು ಹಾರುವ ಓತಿಕ್ಯಾತವನ್ನು ಹಿಡಿಯ ಹೋಗುವ ಯಾತ್ರೆಗೆ ಕೇವಲ ಪೂರಕವಾಗಿದೆ ಎಂದು ಭಾಸವಾದರೂ ಈ ಯಾತ್ರೆಗಿಂತ ಅದು ಸೃಷ್ಟಿಸುವ ಮಾನವೀಯ ಸಂಬಂಧಗಳೇ ತೇಜಸ್ವಿಯವರಿಗೆ ಹೆಚ್ಚಿನ ಆಸಕ್ತಿ ಹುಟ್ಟಿರುತ್ತದೆ. ಏಕೆಂದರೆ ಒಟ್ಟು ಬದುಕಿನ ಸಂದರ್ಭದಲ್ಲಿ ಈ ಯಾತ್ರೆಯೂ ಕೇವಲ ಒಂದು ಅನುಭವ. "ಎಷ್ಟೊಂದನ್ನು ನಾವು ಕಣ್ಣಿಗೆ ಕಂಡೂ ನೋಡದೇ ಬಿಟ್ಟಿದ್ದೀವೋ ಏನೋ"[9] ಎಂಬ ನಿರೂಪಕನ ಮಾತು ಈ ಕಾರಣದಿಂದಲೇ ತುಂಬ ಮುಖ್ಯವಾಗುತ್ತದೆ.

ಮಂದಣ್ಣ ಹಾರುವ ಓತಿಕ್ಯಾತದ ವಿಷಯವನ್ನು ಕರ್ವಾಲೋರಿಗೆ ತಿಳಿಸುವಾಗ "ಇಡಿಯ ಜಗತ್ತೇ ಬೆಚ್ಚಿ ಬೀಳುವಂತ ಸಮಾಚಾರ ಹೇಳುತ್ತಿದ್ದೇವೆನ್ನುವುದರ ಅರಿವೇ ಅವನಿಗೆ ಇರಲಿಲ್ಲ"[10]. ಹೀಗಾಗಿ ಅದನ್ನು ಹಿಡಿಯುವ ಪ್ರಯತ್ನ ಕರ್ವಾಲೋ, ನಿರೂಪಕ, ಪ್ರಭಾಕರರಿಗೆ ಗಂಭೀರವಾದಷ್ಟು ಅವನಿಗೆ ಆಗುವುದಿಲ್ಲ. ಊರಿನ ಇತರರಿಗೂ ಇದೊಂದು ನಗೆಪಾಟಲಿನ ಸುದ್ದಿಯೇ ಆಗಿಬಿಡಬಹುದಿತ್ತು.

ಕರ್ವಾಲೋ ಕಾದಂಬರಿಯ ನಿರೂಪಕ ಮಹತ್ವದ ಪಾತ್ರವಹಿಸಿದ್ದಾನೆ. ಅವನು ಸಾಮಾನ್ಯ ಜನರೊಡನೆ ಹಾಗೂ ವಿಜ್ಞಾನಿಯಿಂದ ಕರ್ವಾಲೋ ರೊಡನೆಯೂ ಸಹಜವಾಗಿ ಸಂವಾದಕ್ಕೆ ಇಳಿಯುವ ವಿಶಿಷ್ಟ ವ್ಯಕ್ತಿತ್ವ ಬೆಳೆಸಿಕೊಂಡಿದ್ದಾನೆ. ತತ್ವಜ್ಞಾನಿ ಹಾಗೂ ಸಮಾಜಶಾಸ್ತ್ರ ವಿಷಯಗಳಲ್ಲಿ ಎಂ.ಎ. ಪದವಿ ಪಡೆದಿರುವ ಅವನು ಕೃಷಿಕನಾಗಿರುವುದರಿಂದ ಕ್ಷುದ್ರ ಜಗತ್ತಿನೊಡನೆಯೂ ಹಾಗು ಮಹತ್ತರ ಜಗತ್ತಿನೊಡನೆಯೂ ಸಮನಾಗಿ ಬೆರೆಯಬಲ್ಲಂಥ ವ್ಯಕ್ತಿತ್ವದವನಾಗಿದ್ದಾನೆ. ನಿರೂಪಕ ಸಹ್ಯಾದ್ರಿ ಶ್ರೇಣಿಯ ದಟ್ಟ ಮಲೆನಾಡಿನ ಪ್ರಾಕೃತಿಕ ಪರಿಸರದಲ್ಲಿ ಗದ್ದೆ ಹಾಗೂ ತೋಟದ ವ್ಯವಸಾಯ ಮಾಡಿಕೊಂಡಿದ್ದು, ಹದಗೆಡುತ್ತಿರುವ ಮಲೆನಾಡಿನ ವಾತಾವರಣ ಹಾಗೂ ವ್ಯವಸಾಯದಲ್ಲಿ ಉಂಟಾಗುತ್ತಿರುವ ಹಾನಿಗೆ ಬೇಸತ್ತು ಮನೆ, ತೋಟ, ಗದ್ದೆಗಳನ್ನು ಮಾರಿ ನಗರಕ್ಕೆ ವಲಸೆ ಹೋಗಬೇಕೆಂದು ಮನಸ್ಸು ಮಾಡುತ್ತಾನೆ. ಇಂತಹ ಸಂದರ್ಭದಲ್ಲಿ ನಿರೂಪಕನಿಗೆ ಸಸ್ಯ ವಿಜ್ಞಾನಿ ಹಾಗೂ ಕೀಟ ಶಾಸ್ತ್ರಜ್ಞನಾದ ಕರ್ವಾಲೋರ ಪರಿಚಯದಿಂದ ತನ್ನ ಬೆಳೆಗಾಗುತ್ತಿರುವ ಹಾನಿಯನ್ನು ತಡೆಯುವ ವಿಧಾನವನ್ನು ತಿಳಿಯುತ್ತಾನೆ. ಆ ನಂತರ ಇಬ್ಬರಲ್ಲಿಯೂ ಆತ್ಮೀಯತೆ ಬೆಳೆಯುತ್ತದೆ. ಕರ್ವಾಲೋ ಯಾರ ಬಳಿಯಾದರೂ ಯಾವುದರ ವಿಚಾರವನ್ನು ಮಾತನಾಡಿದರೂ ಅದರಲ್ಲಿ ಜ್ಞಾನವನ್ನು ವಿಸ್ತರಿಸುವ ವಸ್ತು ವೈವಿಧ್ಯಗಳು ಇದ್ದುದ್ದರಿಂದ ನಿರೂಪಕನಿಗೆ ಅವರೊಂದಿಗೆ ಆತ್ಮೀಯತೆ ಬೆಳೆಯುತ್ತದೆ. ಮಂದಣ್ಣ ಜೇನು ಸಾಕಣೆಯಲ್ಲಿ ವಿಶೇಷ ಪರಿಣತಿ ಪಡೆದ ವ್ಯಕ್ತಿ, ಕಾಡಿನಲ್ಲಿ ಅಲೆದಾಡಿ ಹುಳಹುಪ್ಪಡಿಗಳನ್ನು ಹಿಸಿಯುತ್ತ, ಪಶುಪಕ್ಷಿಗಳನ್ನು ನೋಡುತ್ತ ಅಲೆದಾಡುವ ಮಂದಣ್ಣ ಕರ್ವಾಲೋರ ದೃಷ್ಟಿಯಲ್ಲಿ ಸೃಷ್ಟಿಯ ರಹಸ್ಯವನ್ನು ಬಲ್ಲ ಒಬ್ಬ ಬುದ್ಧಿವಂತನಂತೆ ಕಂಡರೆ ಸಾಮಾನ್ಯರಿಗೆ ಕೆಲಸವಿಲ್ಲದ ನಿರುಪಯುಕ್ತ ಅಲೆಮಾರಿ. ಮಂದಣ್ಣನನ್ನು ದೇಶೀಯ ಜ್ಞಾನವುಳ್ಳ ಶ್ರೇಷ್ಠ ಪ್ರಕೃತಿಶಾಸ್ತ್ರನೆಂಬುದು ಕರ್ಲಾಲೋರ ಅಭಿಮತ. ಮಂದಣ್ಣನೊಂದಿಗೆ ಸೇರಿ ಕಾಡು ಮೇಡುಗಳನ್ನು ಅಲೆದಾಡುತ್ತಾರೆ. ಮಂದಣ್ಣನ ವಿವಾಹವಾದ ನಂತರ ಅವನ ಮಾವ ಹಾಗೂ ಭಾವ ಮೈದುನರು ಅವನ ಮೇಲಿನ ಸಿಟ್ಟಿನಿಂದ ತಾವು ಸೇರೆ ಕುಡಿದು ಕಳ್ಳಬಟ್ಟಿಯ ತಯಾರಿಕೆಯ ಆರೋಪವನ್ನು ಮಂದಣ್ಣನ ಮೇಲೆ ಹೊರಿಸಿ ಜೈಲಿಗೆ ಕಳುಹಿಸಿದಾಗ ಕರ್ವಾಲೋ ಮಂದಣ್ಣನಿಗೆ ಜಾಮೀನನ್ನು ನೀಡಿ ಕರೆತರುವ ಗುರುತರ ಜವಾಬ್ದಾರಿಯನ್ನು ನಿರೂಪಕರಿಗೆ ವಹಿಸುತ್ತಾರೆ. ಮಂದಣ್ಣನ ಬಗ್ಗೆ ಕರ್ವಾಲೋ ವಹಿಸುವ ಮುತುವರ್ಜಿಯ ಬಗ್ಗೆ ಗುಮಾನಿಗೆ ಒಳಗಾದ ನಿರೂಪಕನಿಗೆ ಕರ್ವಾಲೋ ಮಂದಣ್ಣನ ಅನನ್ಯ ಜ್ಞಾನದ ಬಗ್ಗೆ, ಅವನಿಂದ ತಮಗೆ ಆಗಬೇಕಾದ ಸಹಾಯದ ಬಗ್ಗೆ ವಿವರಿಸುತ್ತಾರೆ. ಅರವತ್ತು ಕೋಟಿ ವರ್ಷಗಳಿಂದ ಈ ಜೀವಜಗತ್ತಿನಿಲ್ಲಿದ್ದ ಹಾರುವ ಓತಿಯಿದ್ದು, ಅದಕ್ಕೆ ರೆಕ್ಕೆಗಳಿದ್ದವು. ಜೀವ ವಿಕಾಸದ ಮುನ್ನಡೆಯಲ್ಲಿ ಈ ಹಾರುವ ಓತಿ ಮೆದುಳನ್ನು ಮೀರಿ ಮೈ

ಬೆಳೆಸಿಕೊಂಡಿತು. ಮುಂದೆ ಭೌಗೋಳಿಕ ಪರಿಸರದಲ್ಲಿ ವ್ಯತ್ಯಾಸವುಂಟಾದಾಗ ಬದಲಾದ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಹಾರು ಓತಿಯ ವಂಶ ಅಳಿಯಿತು. ಈ ಓತಿಯ ಒಂದೋ ಎರಡೋ ಮಾದರಿ ಪ್ರಾಣಿಗಳು ಅದು ಹೇಗೋ ವಿನಾಶದ ಅಪಾಯದಿಂದ ತಪ್ಪಿಸಿಕೊಂಡು ಹೇಗೋ ಬದುಕಿ ಉಳಿದಿವೆ. ಅವಕ್ಕೆ ರೆಕ್ಕೆಗಳು ಹಕ್ಕಿಯಂತಿವೆಯೋ ಅಥವಾ ಅವು ಅಳಿಲಿನಂತಿವೆಯೋ ಎಂಬುದು ಸ್ಪಷ್ಟವಿಲ್ಲ. ಅಂತೂ ಕೋಟಿಗಟ್ಟಲೆ ವರ್ಷದ ಹಿಂದಿನ ಗುಟ್ಟನ್ನೆಲ್ಲ ಹೊಟ್ಟೆಯೊಳಗೆ ಅಡಗಿಸಿಕೊಂಡಿರುವ ಅಪೂರ್ವ ಜೀವಿ ಇದು. ಈ ಹಾರುವ ಓತಿಯ ಅನ್ವೇಷಣೆಗಾಗಿ ಹಲವಾರು ವಿಜ್ಞಾನಿಗಳು ಓಡಾಡುತ್ತಿದ್ದು ಅದರ ಸುಳಿವು ಸಿಕ್ಕರೂ ಸಾಕ ಎಂಬ ಧನ್ಯತಾಭಾವನೆ ಎಲ್ಲರಲ್ಲೂ ಇದೆ. ಅದೃಷ್ಟವಶಾತ್ ಅಂತಹ ಓತಿ ಇದೇ ಮಲೆನಾಡಿನಲ್ಲಿ ಕಾಡಿನಲ್ಲಿ ಮಂದಣ್ಣನ ಕಣ್ಣಿಗೆ ಕಾಣಿಸಿಕೊಂಡಿದೆ. ಅದನ್ನು ತೋರಿಸಬಲ್ಲ ಎರಮೇವ ಮಾರ್ಗದರ್ಶಿ ಮಂದಣ್ಣ ಎಂದು ಕರ್ವಾಲೋ ನಿರೂಪಕರಿಗೆ ವಿವರಿಸುತ್ತಾರೆ. ಹಾರುವ ಓತಿಯ ಅನ್ವೇಷಣೆಗೆ ಒಂದು ತಂಡವೇ ಸಿದ್ಧಗೊಂಡು ಆದಷ್ಟು ಶೀಘ್ರವಾಗಿ ಅದನ್ನು ಪತ್ತೆಹಚ್ಚಿ ಅದರ ಛಾಯಾಚಿತ್ರ ತೆಗೆದು, ಪ್ರಯೋಗ ಶಾಲೆಯಲ್ಲಿ ವಿವರವಾಗಿ ಪರೀಕ್ಷಿಸಿ, ಸಂಶೋಧನಾ ಲೇಖನವೊಂದನ್ನು ಬರೆಯಲು ಕರ್ವಾಲೋ ಒಂದು ತಂಡವೇ ಸಿದ್ಧವಾಯಿತು. ನಿರೂಪಕನಿಗೂ ಹಾರುವ ಓತಿಯನ್ನು ನೋಡಬೇಕೆಂಬ ಕುತೂಹಲದಿಂದ ಕರ್ವಾಲೋರವರ ತಂಡವನ್ನು ಸೇರಿಕೊಂಡನು. ಬಿರಿಯಾನಿ ಕರಿಯಪ್ಪ, ಪ್ರಭಾಕರ, ಅಡುಗೆಯವ ಹಾಗೂ ಕಿವಿಯೊಂದಿಗೆ ಇವರೆಲ್ಲರ ಪ್ರಯಾಣ ಓತಿಯನ್ನು ಹುಡುಕುವತ್ತ ಸಾಗಿತು. ಅನ್ವೇಷಣ ತಂಡ ಐದಾರು ದಿನ ಕಾಡುಮೇಡು ಅಲೆಯುತ್ತಾ ಕಾಡಿನ ಚಿತ್ರವಿಚಿತ್ರ ಗಿಡಮರಗಳನ್ನು, ಪಶುಪಕ್ಷಿಗಳನ್ನು, ಪ್ರಕೃತಿಯ ಸೌಂದರ್ಯವನ್ನು ನೋಡಿ ಸವಿಯುತ್ತಾ ಅಸಾಧಾರಣ ಅನುಭವ ಪಡೆಯುತ್ತಾ ಸಾಗಿತ್ತು. ನಿರೂಪಕನಿಗೆ ದಣಿವು ಮತ್ತು ಬೇಸರ ಆರಂಭವಾಗುವ ವೇಳೆಗೆ ಕರ್ವಾಲೋರವರು ಈ ಮೊದಲು ರೇಖಾ ಚಿತ್ರದಲ್ಲಿ ತೋರಿಸಿದ್ದ ಆ ಹಾರುವ ಓತಿಯ ದರ್ಶನ ಅದು ದೊಡ್ಡಮರವೊಂದರ ಮೇಲೆ ಕುಳಿತಿದ್ದಾಗ ಆಗುತ್ತದೆ. ಅದನ್ನು ಹಿಡಿಯುವ ಪ್ರಯತ್ನದಲ್ಲಿ ಓಲೆಯು ತಪ್ಪಿಸಿಕೊಂಡು ಮತ್ತೆ ಹಾರು ದಿಗಂತದಲ್ಲಿ ಕಣ್ಮರೆಯಾಗುತ್ತದೆ. ಕೊನೆಗೆ ಎಲ್ಲರೂ ಬೇಸರದಿಂದ, ಆಶ್ಚರ್ಯದಿಂದ ನಿಂತು ನೋಡುತ್ತಿರುವಾ ಕರ್ವಾಲೋ ನಿಟ್ಟುಸಿರು ಬಿಟ್ಟು "ಹೋಗಲಿ ಬಿಡಿ ಬ್ಯಾಡ್ ಲ್, ಆದರೆ ಏನು ಬೇಸರವಿಲ್ಲ" ಎನ್ನುವುದರೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಕರ್ವಾಲೋ ಕಾದಂಬರಿಯ ಮಹತ್ವವಿರುವುದು ಅದು ಬದುಕನ್ನು ಗ್ರಹಿಸುವ ಕ್ರಮದಲ್ಲಿ. ಅದು ಕಟ್ಟಿಕೊಡುವ ಸಣ್ಣ ಸಣ್ಣ ವಿವರಗಳಲ್ಲಿ ಅದು ಸೃಷ್ಟಿಸುವ ಅಥೆಂಟಿಕ್ ಪ್ರಪಂಚದಲ್ಲಿ ಇಲ್ಲಿನ ಮಂದಣ್ಣನನ್ನು ನೋಡಿ ಅವನ ನಾರ್ವೆ ರಾಮಯ್ಯನನ್ನು ನೋಡಿ, ಅವರ ಕಳ್ಳಬಟ್ಟಿಯ ವ್ಯವಹಾರ, ಪೋಲೀಸು, ಕೋರ್ಟು – ಜೈಲು – ಲಾಯರು, ಮಂದಣ್ಣನ ಕಾಡು – ಮೇಡು , ಹುಳು – ಹುಪ್ಪಟೆ, ಬಿರ್ಯಾನಿ ಕರಿಯಪ್ಪ, ಅವನ ಅಡಿಗೆಯ ವಿದ್ಯೆ, ಶಿಕಾರಿಯ ಜಾಣ್ಮೆ, ಮರಹತ್ತುವ ಚಾಕಚಕ್ಯತೆ, ಅವನ ಗರ್ಮ ಸಾಮಾನುಗಳು, ಅದರ ಪರಿಣಾಮಗಳು, ಹಾವು ಗೊಲ್ಲರ ಎಂಗ್ಟ ಹಾವನ್ನು ಹಿಡಿದು ವಿಷ ತೆಗೆಯುವ, ಚರ್ಮ ಸುಲಿಯುವ ಅವರ ವಿದ್ಯೆ, ಕಾಡು ಪ್ರಾಣಿಗಳ ಚರ್ಮ ಮಾರಿ ಬದುಕುವ ಅವನ ಜೀವನ ಶೈಲಿ, ಫಾರೆಸ್ಟ್ ಗಾರ್ಡುಗಳೊಂದಿಗೆ ವ್ಯವಹರಿಸುವ ಎಂಗ್ಟರ ಹೆಂಡತಿಯ ಜೀವನಧರ್ಮ ಮತ್ತು ನೀತಿ, ಅವರ ಕಾಡಿನ ಗಾಢ ಸಂಬಂಧ ಕರ್ವಾಲೋ ಅವರ ಸಂಶೋಧನೆಗಳು, ಅಷ್ಟೇಕೆ ಈ ಕಾದಂಬರಿಯ ಮುಖ್ಯ ಪಾತ್ರದಂತೆ ಚಿತ್ರಿತವಾಗಿರುವ ಕಿವಿ, ಅದರ ನಡವಳಿಕೆಗಳು, ಆಹಾರ ಕ್ರಮ, ರೋಗ–ರುಜಿನಗಳು ಯಾವುದನ್ನಾದರೂ ನೋಡಿ, ಒಂದೊಂದು ಒಂದೊಂದು ಪ್ರಪಂಚದಂತೆ ಗೋಚಕರವಾಗುತ್ತದೆ.

ಇಷ್ಟೇ ಮುಖ್ಯವಾಗಿ ನಮಗೆ ವೇದ್ಯವಾಗುವುದು ಕಾದಂಬರಿಯ **"ಅಂಥೆಂಟಿಸಿಟಿ"** ಇದು ಕಾಣುವುದು ಪುಟ್ಟ ಪುಟ್ಟ ಸಂಗತಿಗಳಲ್ಲಿ, ಅವುಗಳ ಸೂಕ್ಷ್ಮ ವಿವರಗಳಲ್ಲಿ ಅಂದರೆ ಕಾದಂಬರಿ ನಿಜವಾಗುವುದು, ಇಂಥ ಸಂಗತಿಗಳಲ್ಲಿ, ಜೇನು ಸಾಕಣೆಯನ್ನೇ ತೆಗೆದುಕೊಳ್ಳಿ ಸುರಗಿ ಹೂ, ಅದು ಎಂಟು ವರ್ಷಗಳಿಗೊಮ್ಮೆ ಹೂ ಬಿಡುವ ಸಂಗತಿ, ಸಿಹಿ ಹೆಚ್ಚಾಗಿ ಅದರ ತುಪ್ಪ ಹರಳುಕಟ್ಟುವ ಸಂಗತಿ, ಮಡಕೆ ಜೇನಿನ ವಿವರ, ಪೆಟ್ಟಿಗೆಗೆ ಜೇನನ್ನು ಕೂರಿಸುವ ವಿಧಾನ, ರಾಣಿ ಜೇನಿನ ಮಾರ್ಗದರ್ಶನ ಇತ್ಯಾದಿ, ಹಾಗೆಯೆ ಗದ್ದೆ ನಾಟಿಯ ವಿಚಾರ, ಭತ್ತದ ಗದ್ದೆಗೆ ಬೀಳುವ ಹುಳುವಿನ ವಿವರ ಇವೆಲ್ಲಾ ಎಷ್ಟು ನಿಖರವಾಗಿವೆ ಎಂದರೆ ಈ ಉದ್ಯಮಗಳಲ್ಲಿ ತೊಡಗುವವರಿಗೆ ತಿಳುವಳಿಕೆ ನೀಡುವ ಪಾಠಗಳಂತಿವೆ.

ಒಟ್ಟಾರೆಯಾಗಿ ಇಡೀ ಕಾದಂಬರಿಯನ್ನು ಆವರಿಸಿಕೊಂಡಿರುವುದು ಈ ಹಾರುವ ಓತಿ, ಈ ಓತಿಯ ಹುಡುಕಾಟವೇ ಈ ಕಾದಂಬರಿಯಲ್ಲಿ ಪ್ರಸ್ತಾಪಗೊಳ್ಳುವ ಕತೆಯ ಹಂದರ ಕರ್ವಾಲೋ ನೇತೃತ್ವದ ಇಡೀ ಗುಂಪು ಬೆನ್ನು ಹತ್ತಿರುವುದು ಈ ಓತಿಯನ್ನೆ, ಇದು ಎಲ್ಲರನ್ನೂ ನಿಯಂತ್ರಿಸುತ್ತದೆ. ಕಾದಂಬರಿಗೆ ನಾಟಕೀಯ ತಿರುವನ್ನು ತಂದುಕೊಡುತ್ತದೆ. ಇದು ಪ್ರಾಚೀನತೆಯ

ಪಳೆಯುಳಿಕೆ, ಕಾಲ ಪ್ರವಾಹದಲ್ಲಿ ಉಳಿದು ಬಂದ ಜೀವಜಂತುವಿನ ಸಂಕೇತವೂ ಹೌದು. ಹಲವು ರಹಸ್ಯಗಳ ಕೇಂದ್ರದಂತೆ, ವಿಜ್ಞಾನದ ಅನೇಕ ವರ್ಷಗಳ ಸಾಧನೆಯನ್ನು ತಟಕ್ಕನೆ ಏರುಪೇರು ಮಾಡಬಲ್ಲ ಶಕ್ತಿಯನ್ನು, ರಹಸ್ಯಗಳನ್ನು, ಸಂಗತಿಗಳನ್ನು ಪಡೆದುಕೊಂಡಿರುವ ಜೀವಚರ. ಇದು ನಮ್ಮ ಪ್ರಜ್ಞೆ, ನಮ್ಮ ಕುತೂಹಲ, ನಮ್ಮ ದಿಗ್ಭ್ರಮೆಯೂ ಹೌದು. ನಮ್ಮ ತಿಳುವಳಿಕೆಯ ದಿಕ್ಸೂಚಿಯೂ ಹೌದು. ನಮ್ಮನ್ನು ಒಂದೇ ಜಿಗಿತಕ್ಕೆ ಕೋಟ್ಯಂತರ ವರುಷಗಳ ಹಿಂದಕ್ಕೆ ಒಯ್ಯುವ ಸಾಧನವೂ ಹೌದು. ಅದು ಜೀವ ವಿಕಾಸದ ಹಾದಿಯಲ್ಲಿನ ಅನೇಕ ಸಂಗತಿಗಳನ್ನು ಬಿಚ್ಚುವ ಕಾಲಕೋಶವೂ ಹೌದು ನಮ್ಮ ವಿಜ್ಞಾನ ಹಾಗು ಆಧ್ಯಾತ್ಮ ಕೂಡಾ. ಕುತೂಹಲವಾಗಿ ಕಾಣಿಸಿಕೊಂಡು ಬಿಡಿಸಲಾಗದ, ನಿಗೂಢವಾಗಿ ಸಂಕೇತವಾಗುತ್ತ. ಪ್ರತಿಮೆಯಾಗುತ್ತ ನಮ್ಮ ಪ್ರಜ್ಞೆಯೇ ಆಗುತ್ತ ನಮ್ಮ ವ್ಯಕ್ತಿತ್ವವನ್ನೇ ಆವರಿಸಿ ಬಿಡುವ, ನಿಯಂತ್ರಿಸಿ ಬಿಡುವ ಈ ಹಾರುವ ಓತಿ ಯಾವುದು ಹೌದು, ಯಾವುದು ಅಲ್ಲ ಎಂಬ ಸಂದಿಗ್ಧಕ್ಕೆ ನಮ್ಮನ್ನು ತಳ್ಳಿ, ಸಹ್ಯಾದ್ರಿಯ ಕೊಟ್ಟ ಕೊನೆಯ ಅಂಚಿನಿಂದ ಪ್ರಪಾತದ ಕಡೆಗೆ ಕುಪ್ಪಳಿಸಿ ನೀಲಿನ ಅಸ್ಪಷ್ಟ ಶೂನ್ಯದಲ್ಲಿ ಲೀನವಾಗಿ ಬಿಡುತ್ತದೆ.

ಹೀಗೆ ತೇಜಸ್ವಿಯವರ ಕಾದಂಬರಿ ಬದುಕಿನ ಹಲವು ಸ್ಥರಗಳಿಗೆ ಏಕಕಾಲಿಕವಾಗಿ ಪ್ರತಿಕ್ರಿಯಿಸುವ ಮಹತ್ವಪೂರ್ಣ ರಚನೆಯಾಗಿದೆ. ಹಾಸ್ಯ, ಗಾಂಭೀರ್ಯ, ಬೆರಗು, ವಿಚಾರ, ಆಧ್ಯಾತ್ಮ ಬದುಕಿನ ಎಲ್ಲ ಬಿಕ್ಕಟ್ಟುಗಳು ಮುಖಾಮುಖಿಯಾಗಿ ಘರ್ಷಿಸುತ್ತ ಸಂಕೀರ್ಣ ಸಂದರ್ಭವೊಂದನ್ನು ನಮ್ಮ ಮುಂದಿಟ್ಟಿದೆ. ನಮ್ಮ ಅರಿವನ್ನು ವಿಕಾಸಗೊಳಿಸಿದೆ.

ಅಡಿಟಿಪ್ಪಣಿ

1. ಕರ್ವಾಲೋ ಕಾದಂಬರಿ ಪು.ಸಂ. 165

2. ಅದೇ ಪು.ಸಂ. – 96

ಅಧ್ಯಾಯ-7

ತೇಜಸ್ವಿ ಕತೆಗಳಲ್ಲಿ ಪ್ರಕೃತಿ ಸಂಸ್ಕೃತಿಗಳ ಸಂಘರ್ಷ

ಮನುಷ್ಯ ಇತರ ಪ್ರಾಣಿಗಳಿಗಿಂತ ಭಿನ್ನವಾಗಿ ಪರಿಸರಕ್ಕೆ ತಾನು ಹೊಂದಿಕೊಳ್ಳದೆ ತನ್ನ ಸುತ್ತಲಿನ ಪರಿಸರವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವತ್ತ ಮುಖ ಮಾಡಿದ, ಬೆಂಕಿ, ಬಟ್ಟೆ, ಆಯುಧೋಪಕರಣಗಳು ಇವುಗಳ ಸಹಾಯದಿಂದ ಈತ ಪರಿಸರವನ್ನೇ ತನಗೆ ಹೊಂದಿಸಿಕೊಳ್ಳಲು ಪ್ರಯತ್ನ ಮಾಡಿ ಅದರಲ್ಲಿ ಸಫಲನೂ ಆದ.

ಕೋಟ್ಯಾಂತರ ವರ್ಷಗಳಿಂದ ಪರಸ್ಪರ ಸಂಬಂಧಗಳೊಡನೆ, ಪರಸ್ಪರ ಹೊಂದಿಕೆಯಿಂದ ವಿಕಾಸಗೊಳ್ಳುತ್ತ ಬಂದಿದ್ದ ಪರಿಸರವನ್ನು ಹಠಾತ್ತಾಗಿ ತನ್ನ ಈರ್ಷ್ಯೆಗೆ ಒಗ್ಗುವಂತೆ ಮಾಡುವುದರ ಅಪಾಯ 20ನೇ ಶತಮಾನದಲ್ಲಿ ಮಾನವನಿಗೆ ಕಂಡಿದೆ.

ಭೂಮಂಡಲದ ಮೇಲೆ ಈವರೆಗೆ ಬದುಕಿ ಬಾಳಿದ ಎಲ್ಲ ಪ್ರಾಣಿಗಳಿಗಿಂತ ಈ ಮನುಷ್ಯ ಪ್ರಾಣಿಯಲ್ಲಿರುವ ವಿಶೇಷ ಏನೆಂದರೆ ಆಧುನಿಕ ಮಾನವ ಬಳಸುತ್ತಿರುವ ತಂತ್ರಜ್ಞಾನ.

ಪ್ರಕೃತಿ ಮತ್ತು ಪರಿಸರ ಹದಗೆಟ್ಟಿರುವುದು ಸರ್ವವೇದ್ಯವಾಗಿದ್ದರೂ, ಎಲ್ಲರೂ ಅದಕ್ಕೆ ಕಾರಣಗಳನ್ನು ಪಟ್ಟಿ ಮಾಡುತ್ತ ಕಾಲಹರಣ ಮಾಡುತ್ತಿದ್ದೇವೆಯೇ ಹೊರತು ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ತೊಡಗಿಲ್ಲ. ಪರಿಸರ ಸಂಬಂಧೀ ಸಮಸ್ಯೆಗಳು ನಾವೇ ಸೃಷ್ಟಿಸಿಕೊಂಡಿರುವಂತವು. ಪ್ರಕೃತಿಗೆ ಸಂಬಂಧಿಸಿದ ತೊಂದರೆಗಳು ನಮ್ಮ ಸ್ವಾರ್ಥ, ಅಜ್ಞಾನ, ಅಲಕ್ಷ್ಯಗಳ ಪರಿಣಾಮವಾಗಿ ಕಾಣಿಸಿಕೊಳ್ಳುತ್ತಿರುವಂತವು, ಪ್ರಕೃತಿಯನ್ನು ಮೂಲ ಸ್ವರೂಪದಲ್ಲಿ ಕಾಯುವಂತ ಹೋರಾಟವೇ ಬದುಕು. ಮಿಲಿಯಾಂತರದ ವರ್ಷಗಳಿಂದ ವನ್ಯಜೀವಿಗಳು ಪ್ರಕೃತಿಯನ್ನು ಹೀಗೆಯೇ ಕಾಯ್ದುಕೊಂಡು ಬಂದವು. ಅವೆಲ್ಲಾ ಜೀವಿಗಳಿಗಿಂತ ತಡವಾಗಿ ಭೂಮಿಗೆ ಅವತರಿಸಿದ ಮಾನವ ಪ್ರಾಣಿ ಪ್ರಕೃತಿಯನ್ನು ಅದರ ಅವಿಭಾಜ್ಯ ಅಂಗಗಳಾದ ವನ್ಯಜೀವಿಗಳನ್ನೂ ನಾಶಮಾಡುತ್ತಿರುವ ಗತಿಯ ವೇಗವನ್ನು ಗಮನಿಸಿದರೆ ಅದನ್ನು ತಡೆಯ ಹೊರಟವರ ಪ್ರಯತ್ನ ತಡವಾಗಿ ಬಿಟ್ಟಿತೇನೋ ಎನಿಸುತ್ತದೆ. ಮಾನವ ಸಮಾಜದ ಉಳಿವು ಕಾಡುಗಳ, ಕಾಡು ಪ್ರಾಣಿಗಳ ಉಳಿವನ್ನೇ ಅವಲಂಬಿಸಿದೆ.

ತೇಜಸ್ವಿಯವರು ತಮ್ಮ ಕತೆಗಳಲ್ಲಿ ಪ್ರಕೃತಿ ಹಾಗು ಅದರಲ್ಲಿನ ಪ್ರಾಣಿ ಪಕ್ಷಿಗಳ ಅಳಿವನ್ನು ಕುರಿತಾಗಿ ಜನರಿಗೆ ಸೂಕ್ಷ್ಮವಾಗಿ ತಿಳಿಸುವ ಪ್ರಯತ್ನ ಮಾಡುತ್ತಾರೆ. ಸುಸ್ಮಿತ ಮತ್ತು ಹಕ್ಕಿಮರಿ ಕಥೆಯಲ್ಲಿ ಪಕ್ಷಿಗಳನ್ನು ತಾವೇ ಸಾಕಿ ತಮಗೆ ಬೇಕಾದ ಹಾಗೆ ಅವುಗಳ ವರ್ಣಚಿತ್ರಗಳನ್ನು ತೆಗೆದುಕೊಳ್ಳುವ ಹಂಬಲವನ್ನು ನಿರೂಪಕ ವ್ಯಕ್ತಪಡಿಸುತ್ತಾರೆ. ಅಂತಹ ಅವಕಾಶ ಸಿಕ್ಕಾಗ ಅವರು ಪ್ರಾಣಿ ಪಕ್ಷಿಗಳು ಮನುಷ್ಯನ ಸ್ನೇಹವನ್ನು ಮಾಡಿದರೆ ಅಥವಾ ಅವುಗಳನ್ನು ಮನುಷ್ಯ ಸಾಕುವ ಪ್ರಯತ್ನ ಮಾಡಿದರೆ ಎಂತಹ ಸಮಸ್ಯೆಗಳಿಗೆ ಈಡಾಗುತ್ತಾನೆಂಬುದನ್ನು ತಿಳಿಸುತ್ತಾರೆ.

" ನಾನು ಇನ್ನು ಈ ಕಾಡಿನ ಜೀವಿಗಳ ತಂಟೆಗೇ ಹೋಗಬಾರದೆಂದು ಅಖೈರಾಗಿ ನಿರ್ಧರಿಸಿದೆ. ಕಾಡಿನ ಜೀವಸಂಕುಲದೊಳಗೆ ನಾವು ಕೈ ಹಾಕಿದರೆ ಸಾಕು, ಅದು ಸಹಾಯ ಹಸ್ತವಾದರೂ ಅವುಗಳ ನಾಶ ತಪ್ಪಿದ್ದಲ್ಲವೆಂದು ನನಗೆ ಮನದಟ್ಟಾಯ್ತು. ಅವುಗಳಲ್ಲಿ ತೊಂದರೆಗೆ ಸಿಕ್ಕಿದವುಗಳನ್ನೂ, ತಬ್ಬಲಿಗಳಾದುವನ್ನೂ ರಕ್ಷಿಸುವುದು ನಮ್ಮ ನೈತಿಕ ಜವಾಬ್ದಾರಿ ಎಂದು ಭಾವಿಸುವುದು, ಕಾಡಿನಲ್ಲಿರುವುದನ್ನೆಲ್ಲಾ ತಾನು ತಿನ್ನುವುದಕ್ಕೇ ದೇವರು ಸೃಷ್ಟಿಮಾಡಿದ್ದಾನೆಂದು ತಿಳಿದಿರುವ ಮಾರನ ಮೂರ್ಖತನಕ್ಕಿಂತ ದೊಡ್ಡ ಮೂರ್ಖತನವೆಂದು ಖಂಡಿತವಾಗಿ ಅನ್ನಿಸಿತು"[7].

ಪ್ರಕೃತಿ ಮನುಷ್ಯನ ಊಹೆಗೂ ನಿಲುಕದ ಎಂಥ ಜಟಿಲವಾದ ಜಾಲ ಎಂದು ಅಚ್ಚರಿಯಾಗುತ್ತದೆ. ಇಂತಹ ಜಟಿಲವಾದ ಜಾಲವನ್ನು ಮನುಷ್ಯ ಬೇಧಿಸುತ್ತಾ ಬರುತ್ತಿದ್ದಾನೆ. ಇಂದು ಪ್ರಕೃತಿ ಆಧುನಿಕತೆ, ನವನಾಗರೀಕತೆ, ಸಂಸ್ಕೃತಿಗಳಡಿಯಲ್ಲಿ ಸಂಘರ್ಷಕ್ಕಿಡಾಗಿರುವುದನ್ನು ಕಾಣುತ್ತೇವೆ. ಪ್ರಕೃತಿ ಹಾಗೂ ಮನುಷ್ಯನ ನಡುವಿನ ಸಂಘರ್ಷದಲ್ಲಿ ಮನುಷ್ಯ ತನ್ನದೇ ಮೇಲುಗೈ ಎಂದು ಮೆರೆಯುತ್ತಿದ್ದರೂ ಪ್ರಕೃತಿಯ ಅಳಿವಿನಿಂದಾಗಿ ಮುಂದೊಂದು ದಿನ ಎದುರಿಸಲುಬಹುದಾದ ಸಮಸ್ಯೆಗಳ ಅರಿವೂ ಮನುಷ್ಯನಿಗಿದೆ. ಆದರೂ ಅದನ್ನು ಅರಿಯದೆ ಅಟ್ಟಹಾಸದಿಂದ ಮೆರೆಯುತ್ತಿದ್ದಾನೆ. ತೇಜಸ್ವಿಯವರ ಕತೆಗಳಲ್ಲಿ ಮನುಷ್ಯ ಮತ್ತು ಪ್ರಕೃತಿಯ ಸಂಘರ್ಷಗಳ ವಿಚಾರಗಳನ್ನು ಕಾಣುತ್ತೇವೆ. ತೇಜಸ್ವಿಯವರು ತಾವು ಮೈಸೂರನ್ನು ಬಿಟ್ಟು ಮೂಡಿಗೆರೆಗೆ ಬಂದ ಹೊಸದರಲ್ಲಿ ಕಾಡಿನಲ್ಲಿ ಅಲೆಯುವಾಗ ಆದ ಅನುಭವವನ್ನು ಈ ರೀತಿ ವ್ಯಕ್ತಪಡಿಸುತ್ತಾರೆ.

"ನನ್ನ ಕೈಗೆ ಕೋವಿ ಬರುವ ವೇಳೆಗೆ ಕಾಡು ಪ್ರಾಣಿಗಳೆಲ್ಲಾ, ಅವನತಿಯ ಹಾದಿ ಹಿಡಿದಿದ್ದರೂ ಈಗಿನಂತೆ ನಾಮಾವಶೇಷವಾಗುವ ಸ್ಥಿತಿಗೆ ಇಳಿದಿರಲಿಲ್ಲ. ಕಾಡು ಮೃಗಗಳನ್ನು ಜೂಗಳಲ್ಲೂ, ಪುಸ್ತಕದ ಚಿತ್ರಗಳಲ್ಲೂ ಹೆಚ್ಚಾಗಿ ನೋಡಿದ್ದ ನನಗೆ ಮೊದಲ ಬಾರಿಗೆ ಅವು ಕಾಡಿನ ನಿಶ್ಚಲ ಮೌನದಲ್ಲಿ ಕಾಲ ಬಳಿಯ ಪೊದೆಗಳಿಂದಲೇ ಧಿಗ್ಗನೆ ಮಿಂಚಿ ಮಾಯವಾದಾಗ ಆದ ಅನುಭವ ಅಸಾಧಾರಣವಾದುದು. ಅವುಗಳ ಈ ಗೌಪ್ಯತೆಯೇ ನಮಗೆ ಅವುಗಳ ಬಗ್ಗೆ ಅಸಾಧಾರಣ ಕುತೂಹಲ ಹುಟ್ಟಿಸುತ್ತದೆ"[3].

ತೇಜಸ್ವಿಯವರ ಈ ಮಾತುಗಳಲ್ಲಿ ಮುಂಬರುವ ಪೀಳಿಗೆಗಳು ಕಾಡು ಹಾಗು ಕಾಡುಮೃಗಗಳನ್ನು ಜೂ ಅಥವಾ ಪುಸ್ತಕದ ಚಿತ್ರಗಳಲ್ಲಿ ನಮ್ಮ ಪ್ರಕೃತಿಯ ವೈಭವ ಹಾಗು ವನ್ಯಮೃಗಗಳನ್ನು ಕಂಡು ಆನಂದಪಡಬೇಕಾಗುತ್ತದೆಂಬುದರ ನೋವಿರುವುದನ್ನು ಗುರುತಿಸುತ್ತೇವೆ. ಇಂದು ಅರಣ್ಯಗಳು ನಾಶವಾಗುತ್ತಿರುವುದರ ಹಾಗೂ ಅದರೊಂದಿಗೆ ಅನೇಕ ಪ್ರಾಣಿಗಳ ಅವಸಾನದ ಬಗೆಗೆ ತೇಜಸ್ವಿಯವರಿಗೆ ಕಾಳಜಿ ಇರುವುದರಿಂದ ಅವರು ತಮ್ಮ ಕತೆಗಳಲ್ಲಿ ಓದುಗರಿಗೆ ಪರಿಸರ ಸಂರಕ್ಷಣೆಯು ಇಂದು ಅಗತ್ಯವಾಗಿರುವುದರ ವಿಚಾರವನ್ನು ತಿಳಿಸುವ ಪ್ರಯತ್ನ ಮಾಡುತ್ತಾರೆ. ಈಗ ಕಾಡುಗಳಿಲ್ಲದೆ, ಕಾಡು ಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತಿದೆ. ತೇಜಸ್ವಿ ಕಾಡು ಹಾಗೂ ಪ್ರಾಣಿಗಳನ್ನು ಸಂರಕ್ಷಿಸುವಂತೆ ಹೇಳಲು ಮುಖ್ಯ ಕಾರಣ ಅವರು ಪ್ರಕೃತಿಯೊಂದಿಗೆ ಹೊಂದಿದ್ದಂತಹ ವ್ಯಕ್ತಿನಿಷ್ಠ ಸಂಬಂಧವೇ ಆಗಿದೆ. ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನೂ, ಅವುಗಳ ಪರಿಸರವನ್ನು ಧ್ವಂಸ ಮಾಡಿದಾಗ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದುಕೊಂಡಂತಾಗಿ ಮನಸ್ಸು ಖಿನ್ನವಾಗುತ್ತದೆ. ತೇಜಸ್ವಿ ಪರಿಸರ ಸಂರಕ್ಷಣೆಯ ಬಗ್ಗೆ ಜನಗಳಿಗೆ ಹೇಳಲು ಮನಸ್ಸೇ ಬರುವುದಿಲ್ಲವೆನ್ನುತ್ತಾರೆ. ಏಕೆಂದರೆ ಅವರೇ ಹೇಳುವಂತೆ.

" ನಾನು ಕಂಡಂತೆ ಕಾಡನ್ನು ಕಂಡಿಲ್ಲದ, ಅನುಭವಿಸಿಲ್ಲದ ಮನಸ್ಸುಗಳಿಗೆ ನನ್ನ ಮನಸ್ಸಿನ ದುಗುಡವನ್ನು ನಿರ್ಜೀವ ಅಂಕಿ ಸಂಖ್ಯೆಗಳ ವಿಶ್ಲೇಷಣೆ ಮುಖಾಂತರ ಹೇಳಿ ಹೇಗೆ ತಾನೆ ಪ್ರತಿಸ್ಪಂದನ ಉಂಟು ಮಾಡಲಿ?"[4]

ನಿಸರ್ಗದಿಂದ ವ್ಯಕ್ತಿತ್ವಕ್ಕೆ ಒದಗುವ ತುಷ್ಟಿ ಪುಷ್ಟಿಗಳು ವ್ಯಕ್ತಿತ್ವದ ಬೆಳವಣಿಗೆಗೆ ಎಷ್ಟು ಅಗತ್ಯ ಅನ್ನುವುದನ್ನು ಪರಿಸರ ನಾಶದ ತಲ್ಲಣದ ಇಂದಿನ ದಿನಗಳಲ್ಲಿ ನಾವು ಕ್ರಮೇಣ ಕಂಡುಕೊಳ್ಳುತ್ತಿದ್ದೇವೆ.

ತೇಜಸ್ವಿ ತಮ್ಮ ಕಥನಗಳಲ್ಲಿ ವಿಧಿ, ಕರ್ಮಜಾಲ, ಬ್ರಹ್ಮಾಂಡ, ಹಣೆ ಬರಹ, ಗ್ರಹಗತಿ ಮುಂತಾದ ಪದಗಳನ್ನು ಮತ್ತೆ ಮತ್ತೆ ಬಳಸುತ್ತಾರೆ. ಆದರೆ ಈ ಪದಗಳಿಗೆ ಯಾವುದೇ ನಿರ್ದಿಷ್ಟ ಮತಧರ್ಮದ ಸೋಂಕು ಇಲ್ಲದಿರುವುದನ್ನು ಅವಶ್ಯ ಗಮನಿಸಬೇಕು. ಬದುಕಿನ ಅಗಾಧತೆ, ವೈಶಾಲ್ಯ, ನಿಗೂಡತೆ, ರಹಸ್ಯಮಯತೆ, ನಮ್ಮ ಗ್ರಹಿಕೆಗಳಿಗೆ ಸುಲಭವಾಗಿ ಸಿಕ್ಕದ ವಿಶ್ವ ವ್ಯವಸ್ಥೆಯ ವಿಸ್ಮಯಗಳನ್ನು ಸೂಚಿಸಲು ತೇಜಸ್ವಿ ಇಂಥ ಪದಗಳನ್ನು ಬಳಸುತ್ತಾರೆ. ಈ ದೃಷ್ಟಿಯಿಂದ ನೋಡಿದಾಗ ತೇಜಸ್ವಿ ಬರವಣಿಗೆ ಕೇವಲ ಮನುಷ್ಯ ಕೇಂದ್ರಿತವಲ್ಲ ಎನಿಸುತ್ತದೆ. ಅವರು ಮನುಷ್ಯನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಆರ್ಥಿಕ ಚಟುವಟಿಕೆಗಳನ್ನು ತುಂಬ ಸೂಕ್ಷ್ಮವಾಗಿ, ಸಂಕೀರ್ಣವಾಗಿ ವಿಶ್ಲೇಷಿಸುತ್ತಾರೆ ನಿಜ. ಆದರೆ ಮನುಷ್ಯನನ್ನೇ ಸೃಷ್ಟಿಯ ಕೇಂದ್ರವೆಂಬಂತೆ ನೋಡುವುದಿಲ್ಲ. ಅಥವಾ ಸೃಷ್ಟಿಯನ್ನು ಕೇವಲ ಮನುಷ್ಯನ ದೃಷ್ಟಿಕೋನದಿಂದ ನೋಡುವುದಿಲ್ಲ. ಅವರ ಕೃತಿಗಳಲ್ಲಿ ಮನುಷ್ಯ ಒಟ್ಟಾರೆ ಜೀವ ಜಾಲ ವ್ಯವಸ್ಥೆಯ ಒಂದು ಅಂಗವಾಗಿ ಮಾತ್ರ ಮೂಡಿಬರುತ್ತಾರೆ.

ಮನುಷ್ಯ ನಿರ್ಮಿತ ಇಂಥ ವ್ಯವಸ್ಥೆಗಳ ಚಿತ್ರ ತೇಜಸ್ವಿಯವರ ಕತೆ ಕಾದಂಬರಿಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ " ಕೃಷ್ಣೇಗೌಡನ ಆನೆ" ಯಲ್ಲಿ ಕಂಡು ಬರುವ ಮೂಡಿಗೆರೆಯ ಚಿತ್ರವನ್ನು ನೋಡಿ.

"ಎಲ್ಲೆಂದರಲ್ಲಿ ಎಳೆದಿರುವ ತರತರದ ನೂರಾರು ತಂತಿಗಳು ಮೂಡಿಗೆರೆ ಆಧುನಿಕವಾಗುತ್ತಿರುವುದಕ್ಕೆ ಸಾಕ್ಷಿಯಾಗಿದ್ದವು. ಮಲ್ಯರ ನಾಲ್ಕಂತಸ್ತಿನ ಲಾಡ್ಜಿಂಗ್ ಹತ್ತಿ, ಕೆಳಗೆ ನೋಡಿದರೆ, ಈ ತಂತಿಗಳ ಜಾಲದೊಳಗೆ ಇಡೀ ಮೂಡಿಗೆರೆ ಬಲೆಗೆ ಬಿದ್ದು ಮಿಸುಕಾಡುವ ಮೃಗದಂತೆ ಕಾಣುತ್ತದೆ"[1].

ಕೃಷ್ಣೇಗೌಡನ ಆನೆ ಕಥೆ ಪ್ರಸ್ತುತ ಭಾರತದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಅಧಿಕಾರಶಾಹಿ ವ್ಯವಸ್ಥೆಯ ಸಹಜ ವಾಸ್ತವ ಚಿತ್ರಣಗಳು ಕಟ್ಟಿಕೊಡುವ

ಅನನ್ಯ ಕೃತಿಯಾಗಿದೆ. ಈ ಎಲ್ಲ ವ್ಯವಸ್ಥೆಗಳ ಭ್ರಷ್ಟತೆ, ನಿಷ್ಕ್ರಿಯತೆ, ಲಂಪಟತನ, ದ್ವೇಷ, ಅಸೂಯೆಗಳು ಅಂತಹವುಗಳಿಂದ ಎದುರಾಗುವ ದುರಂತಗಳನ್ನು ಏಕ ಕಾಲಕ್ಕೆ ಧ್ವನಿಸುವ ಕತೆಯಾಗಿದೆ. ಅಂತೆಯೇ ಆಧುನಿಕ ಸಮಾಜದ ಎಲ್ಲ ರೀತಿಯ ವಿಕೃತಿಗಳು, ಕುತರ್ಕಗಳು, ಅಪಾಯಕಾರಿ ಸನ್ನಿವೇಶಗಳು, ಭ್ರಷ್ಟ ಹಾಗು ನಿಷ್ಕ್ರಿಯತೆಯ ಚರಿತ್ರೆಯೂ ಆಗಿ ಈ ಕತೆ ಮೈದಾಳುತ್ತದೆ.

ಮನುಷ್ಯ ಸೃಷ್ಟಿಸಿಕೊಂಡಿರುವ ವ್ಯವಸ್ಥೆಯ ದ್ವೇಷ ಅಸೂಯೆಗಳು ತನ್ನ ಬೇಜವಾಬ್ದಾರಿತನದಿಂದ ಆಗಬಹುದಾದ ದುರಂತಗಳು, ಅಧಿಕಾರ ಶಾಹಿ- ವ್ಯವಸ್ಥೆಯ ಒಳ ಜಗಳಗಳು, ಜಾತಿ ಜಾತಿಗಳು ಮಧ್ಯೆ, ಧರ್ಮ ಧರ್ಮಗಳ ನಡುವೆ ಏರ್ಪಟ್ಟಿರುವ ವೈರುಧ್ಯಗಳಿಗೆ, ದರುಂತಗಳಿಗೆ ಸಾಮಾನ್ಯನು ಬಲಿಯಾಗಲೇ ಬೇಕಾದ ಸನ್ನಿವೇಶ ಹೇಗೆ ನಿರ್ಮಾಣವಾಗಿದೆ ಎಂಬುದನ್ನು ಸೂಕ್ಷ್ಮವಾಗಿ ತೆರೆದಿಡುತ್ತದೆ. ಇಂತಹ ಸನ್ನಿವೇಶ ನಿರ್ಮಾಣಕ್ಕೆ ಮನುಷ್ಯನ ಅಹಂಕಾರ, ಸ್ವಾರ್ಥ, ವಿಲಾಸೀ ಬದುಕೇ ಕಾರಣ ಎಂದು ಗೊತ್ತಿದ್ದರೂ ಕತೆಯಲ್ಲಿ ನಡೆಯುವ ಅನೇಕ ಘಟನೆಗಳಿಗೆ ಆನೆ ಅಪರಾಧಿಯಾಗುವುದು ದುರಂತವೇ ಸರಿ, ಕುಡಿದು ಲಾರಿ ನಡೆಸಿ ಸಾವನ್ನಪ್ಪುವ ಕ್ರಿಯೆಗೆ ಮತೀಯ ಗಲಭೆಗಳಿಂದ ಭಿನ್ನ ಧರ್ಮೀಯರಿಗೆ ಕೊಡುವ ಹಿಂಸೆಗೆ, ಕರೆಂಟಿಗೆ ಸಿಕ್ಕಿ ಸಾಯುವ ಲೈನ್‌ಮೆನ್ ಸಾವಿಗೆ "ಕೃಷ್ಣೇಗೌಡನ ಆನೆ" ಅಪರಾಧಿಯಾಗುತ್ತದೆ. ಅಂತೆಯೇ ಒಬ್ಬರು ಮತ್ತೊಬ್ಬರ ಮೇಲೆ ಸಾಧಿಸುವ ದ್ವೇಷ ಅಸೂಯೆಗಳೇ ಕಡೆಗೆ ಮನುಷ್ಯನ ಅಸ್ಥಿತ್ವವನ್ನು ದುರಂತದ ಕಡೆಗೆ ಕರೆದೊಯ್ಯುವ ವಾಸ್ತವ ಚಿತ್ರ ಕತೆಯ ಉದ್ದಕ್ಕೂ ಭಿತ್ತಿಯಾಗಿ ಹರಡಿಕೊಂಡಿದೆ. ಹಾಗೆಯೇ ಮನುಷ್ಯ ಮಾಡುವ ಅಪರಾಧಗಳನ್ನು ಮತ್ತೊಬ್ಬರ ಮೇಲೆ ಹೊರಸಿ ಬಚಾವಾಗಲು ಪ್ರಯತ್ನಿಸುತ್ತಿರುವ ಆಧುನಿಕ ಮನುಷ್ಯನ ದುರಂತವೂ ಈ ಕತೆಯ ಹಿನ್ನಲೆಯಾಗಿದೆ.

ಕಥೆಯಲ್ಲಿ ಬರುವ ಆನೆ ಕಾಡಿನ ಪ್ರಾಣಿಯಾದರೂ ಮನುಷ್ಯನ ಹಲವು ಅಗತ್ಯಗಳಿಗೆ ಬೇಕಾಗಿರುವ ಶ್ರಮಜೀವಿ ಹಾಗು ಶಕ್ತಿಶಾಲಿ ಪ್ರಾಣಿಯಿಂದಲೇ, ವಿದ್ಯುತ್ ಫಾರೆಸ್ಟ್, ಟೆಲಿಪೋನ್ ಹಾಗು ಪಿ.ಡಬ್ಲ್ಯೂ.ಡಿ. ಇಲಾಖೆಗಳಂತಹ ಏನನ್ನೂ ಸೃಷ್ಟಿಸಲಾರದ ಆಧುನಿಕ ಜಗತ್ತಿನ ಬೇಜವಾಬ್ದಾರಿತನದ ವ್ಯವಸ್ಥೆಯ ಒಳಗಿನಿಂದಲೇ ಎಂಬ ಪ್ರಶ್ನೆ ಮುಖ್ಯವಾಗುತ್ತದೆ.

"ಪರಿಸರದ ಕತೆ" ಸಂಕಲನದ 'ಎಂಗ್ಟನ ಪುಂಗಿ' ಎಂಬ ಕತೆ ಇವತ್ತಿನ ನಮ್ಮ ಎಲ್ಲ ಸಂದಿಗ್ಧತೆ, ದ್ವಂದ್ವಗಳಿಗೆ ಒಡ್ಡಿದ ಸಂಕೀರ್ಣ ರೂಪಕವಾಗಿದೆ. ಪೂರ್ವ ಪಶ್ಚಿಮ, ಪರಂಪರೆ, ಆಧುನಿಕತೆ, ಮೂಢನಂಬಿಕೆ– ವಿಚಾರವಾದ ಇತ್ಯಾದಿಗಳ ಇಕ್ಕಟ್ಟುಗಳಿಗೆ ಸಿಕ್ಕಿರುವ ನಮ್ಮ ಇಂದಿನ ಮನಸ್ಥಿತಿಗೆ ಹಿಡಿದ ಕನ್ನಡಿಯಂತಿದೆ ಈ ಕತೆ. ಆಧುನಿಕರ ಕಣ್ಣಿಗೆ ತೇಜಸ್ವಿಯವರ ಹಾವುಗೊಲ್ಲರ ಎಂಗ್ಟ ಮೋಸಗಾರ, ವಂಚಕ, ಕೊಲೆಪಾತಕ, ಕಣ್ಕಟ್ ಸೂಳೆ ಮಗ. ಪುಂಗಿ ಊದಿ ಹಾವು ಹಿಡಿಯುತ್ತೇನೆ ಎನ್ನುವ ಗೊಲ್ಲರ ಎಂಗ್ಟ ಮತ್ತು ಇದನ್ನು ನಂಬದ, ಇದೆಲ್ಲ ಢೋಂಗಿ ಎಂದು ಖಚಿತವಾಗಿ ನಂಬಿರುವ ಸಂಶೋಧನ ಕೇಂದ್ರದ ವಿಜ್ಞಾನಿಗಳ ಗುಂಪು ಎರಡೂ ತದ್ವಿರುದ್ಧ ಬಿಂದುಗಳಲ್ಲಿ ಇದ್ದಾರೆ. ಈ ಕತೆಯ ನಿರೂಪಕನೂ ಮೊದಲು ಎರಡನೇ ಗುಂಪಿಗೆ ಸೇರಿದವನೇ ಆಗಿರುತ್ತಾನೆ. ಕ್ರಮೇಣ ನಿರೂಪಕನ ಈ ಖಚಿತ 'ತರ್ಕ' ಸಡಿಲಾಗುತ್ತ ಗೊಲ್ಲರ ಎಂಗ್ಟನ ಬಗ್ಗೆ ಹೆಚ್ಚಿನ ಕುತೂಹಲ, ಆಶ್ಚರ್ಯ ಮೊಳೆಯಲಾರಂಭಿಸುತ್ತದೆ. ಎಂಗ್ಟನ ಕಸುಬು ಒಂದು ಚಮತ್ಕಾರವೇ? ಪವಾಡವೇ? ತಾತ್ಕಾಲಿಕ ಮತಿಭ್ರಮಣೆ ಮಾಡುವ ಕಣ್ಕಟ್ಟೆ? ಮುಂತಾಗಿ ಆಶ್ಚರ್ಯ ಅನುಮಾನಗಳ ಅಲೆಗಳೇ ಏಳಲಾರಂಭಿಸುತ್ತವೆ. ಎಂಗ್ಟನ ವಿಧ್ಯೆಯ ಸತ್ಯಾಸತ್ಯತೆಗಳನ್ನು ಪರೀಕ್ಷಿಸಲು ನಿರೂಪಕ ಹಲವು ಪ್ರಯತ್ನಗಳನ್ನು ಮಾಡುತ್ತಾನೆ. ಎಂಗ್ಟನನ್ನೂ ಚರ್ಚೆಗೆ ಎಳೆಯುತ್ತಾನೆ. ತನಗೆ ಮಂಕುಬೂದಿ ಎರಚಿ ಎಂಗ್ಟ ಮೋಸ ಮಾಡಿರಬಹುದೆ ಎಂದು ತಬ್ಬಿಬ್ಬಾಗುವ ನಿರೂಪಕ ಎಂಗ್ಟನ ಮೋಸವನ್ನು ಬಯಲಿಗೆಳೆಯುವ ಹಲವು ಉಪಾಯಗಳನ್ನು ಯೋಚಿಸುತ್ತಾನೆ. ನಿರೂಪಕನ ಸಂದೇಹ ಅನುಮಾನಗಳಿಂದ ಎಂಗ್ಟ ಸ್ವಲ್ಪವೂ ವಿಚಲಿತನಾಗುವುದಿಲ್ಲ. ಆಧುನಿಕ ಶಿಕ್ಷಣ ನಮ್ಮಲ್ಲಿ ಬಿತ್ತಿರುವ ಅಪನಂಬಿಕೆಗಳ, ಹೊಸ ನಂಬಿಕೆಗಳ, ಸಂದೇಹಗಳ, ಪ್ರಭಾವ ತೀರ ಗಾಢವಾದುದಷ್ಟೆ. ಈ ಸಂಶಯಗಳಿಂದಾಗಿ ನಮ್ಮ ನಂಬಿಕೆಗಳಿಗಿಂತ ಭಿನ್ನವಾದ ನಂಬಿಕೆಗಳನ್ನು, ಮೌಲ್ಯಗಳನ್ನು, ವಿದ್ಯೆಗಳನ್ನು, ಒಟ್ಟಾರೆ ಜೀವನ ಕ್ರಮಗಳನ್ನು ನಾವು ಸಮಾಧಾನದಿಂದ ಗಮನಿಸುತ್ತಿಲ್ಲವೇ? ನಮ್ಮ ಜೀವನ ವಿಧಾನ, ನಂಬಿಕೆಗಳಿಗೆ ಹೊರತಾದ ಪ್ರಪಂಚಗಳನ್ನೂ, ವ್ಯಕ್ತಿಗಳನ್ನೂ ಅರ್ಥಮಾಡಿಕೊಳ್ಳದಷ್ಟು ಸಿನಿಕತನ, ಅಸಹನೆ, ಅಹಂಕಾರಗಳನ್ನು ಹೊಸ ನಾಗರೀಕತೆ ಕಲಿಸಿಬಿಟ್ಟಿದೆಯೇ ಎಂಬ ಪ್ರಶ್ನೆಗಳನ್ನು ತೇಜಸ್ವಿಯವರ ಕತೆಗಳು ನಿಧಾನವಾಗಿ ಎತ್ತುತ್ತ ಹೋಗುತ್ತವೆ.

ಎಂಗ್ಟನನ್ನು ಕೇವಲ ಒಬ್ಬ ವಿಶಿಷ್ಟ ವ್ಯಕ್ತಿ ಎಂದು ಚಿತ್ರಿಸದೆ ಜೀವನ ಕ್ರಮವೊಂದರ ಪ್ರತಿನಿಧಿ ಎಂದು ಪರಿಭಾವಿಸುವುದರಿಂದ ತೇಜಸ್ವಿ ಕತೆಗೆ ತಾನಾತಿ ಒಂದು ಸಾಂಸ್ಕೃತಿಕ ಮಹತ್ವ ಬಂದು ಬಿಡುತ್ತದೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಎಲ್ಲ ಬಹುತ್ವವನ್ನೂ ನಾಶಗೊಳಿಸಿ

ಒಂದೇ ಪಡಿಯಚ್ಚಿನ ಏಕಾಕರಗಳನ್ನು ಸೃಷ್ಟಿಸುವ ಧಾವಂತದ ಈ ದಿನಗಳಲ್ಲಿ –ತೇಜಸ್ವಿ ಬರವಣಿಗೆ ತುಂಬಾ ಪ್ರಸ್ತುತವಾಗುವುದು ಈ ಕಾರಣಕ್ಕೆ ಭೂತವನ್ನು ಕುರಿತ ಹಳಹಳಿಕೆಯಾಗಲೀ, ಭವಿಷ್ಯವನ್ನು ಕುರಿತ ರಮ್ಯ ಕನಸುಗಾರಿಕೆಯಾಗಲೀ ಜಾಗತೀಕರಣಕ್ಕೆ ಸರಿಯಾದ ಪ್ರತಿಸ್ಪಂದನವಾಗುವುದಿಲ್ಲ. ಅಲ್ಲದೆ ತೇಜಸ್ವಿ ಜಾಗತೀಕರಣವನ್ನು ಪರಿಸರದ ಒಟ್ಟಾರೆ ಪರಿವರ್ತನ ಶೀಲ ಲಯದಲ್ಲೇ ಕಾಣುವುದರಿಂದ ಅವರು ಯಾವುದನ್ನೂ ನಿರಾಕರಿಸುವುದೂ ಇಲ್ಲ. ಆರಾಧಿಸುವುದೂ ಇಲ್ಲ. ಎಂಗ್ಟನ ಜೀವನ ಕ್ರಮದ ಅವಸಾನವನ್ನು ತೇಜಸ್ವಿ ವಿಷಾದದಿಂದ ಚಿತ್ರಿಸುತ್ತಾರೆ ನಿಜ. ಆದರೆ ಈ ಅವನತಿಯ ಹಿಂದಿನ ಕಠೋರ ಐತಿಹಾಸಿಕ ಸತ್ಯಗಳನ್ನು ಅವರು ಮರೆಮಾಚುವುದಿಲ್ಲ.

'ಪರಿಸರದ ಕತೆ' ಸಂಕಲನದ ಇನ್ನೊಂದು ಪ್ರಮುಖ ಬರಹವೆಂದರೆ "ಮೂಲಿಕೆ ಬಳ್ಳಿಯ ಸುತ್ತ" ಎಂಗ್ಟನ ಸಂತತಿ ಕ್ರಮೇಣ ಕಣ್ಮರೆಯಾಗುವ ವಿದ್ಯಮಾನಗಳನ್ನು "ಎಂಗ್ಟನ ಪುಂಗಿ" ಕತೆಯಲ್ಲಿ ಗಮನಿಸುವ ತೇಜಸ್ವಿ "ಮೂಲಕೆ ಬಳ್ಳಿಯ ಸುತ್ತ" ದಲ್ಲಿ ಗಿಡ ಮೂಲಿಕೆಗಳ ಸುತ್ತ ಬೆಳೆದ ಭಾರತೀಯ ನಾಟಿ ವೈದ್ಯ ಪದ್ದತಿಯ ಇಂದಿನ ಅವಸ್ಥೆಯನ್ನು ಕುರಿತು ಮಾರ್ಮಿಕವಾಗಿ ಚಿಂಚಿಸಿದ್ದಾರೆ. ಸ್ಥಳೀಯ ಜ್ಞಾನ ಮಾರ್ಗಗಳು ವಿಸ್ಮೃತಿಯ ಅಂಚಿಗೆ ಸರಿಯಲು ಆಧುನಿಕ ಜ್ಞಾನ ಮಾರ್ಗಗಳ ಧಾಳಿ ಮಾತ್ರ ಕಾರಣವಲ್ಲ ಎಂಬುದು ತೇಜಸ್ವಿಯವರ ಇಂಗಿತವೆಂದು ತೋರುತ್ತದೆ.

ಒಂದು ಜೀವನ ಕ್ರಮ ಬದಲಾದಂತೆ ಅದರ ಗ್ರಹಿಕೆಯ ಅನೂಹ್ಯವೂ ಆದ್ದರಿಂದ ಅಪರಿಚಿತವೂ ಅಪ್ರಸ್ತುತವೂ ಆಗಿ ಬಿಡಬಹುದು. ಒಂದು ಪದ್ದತಿ ಐತಿಹಾಸಿಕ ಕಾರಣಗಳಿಂದಾಗಿ ಇನ್ನೊಂದು ಅನ್ಯ ಪದ್ದತಿಯಿಂದ ಸ್ಥಳಾಂತರಿಸಲ್ಪಟ್ಟಾಗ ಸ್ಥಳೀಯವಾದದ್ದು ಸಂಪೂರ್ಣವಾಗಿ ಕಣ್ಮರೆಯಾಗಲೂಬಹುದು. ಪ್ರಾಚೀನವಾದದ್ದನ್ನೂ ಸ್ಥಳೀಯವಾದದ್ದನ್ನೂ ಇಂದು ಮರಳಿ ಪಡೆಯುವ, ಪ್ರಸ್ತುತಗೊಳಿಸಿಕೊಳ್ಳುವ ಬಗೆ ಹೇಗೆ ಎಂಬುದು ಇಲ್ಲಿನ ವ್ಯಾಕುಲಕ್ಕೆ ಕಾರಣವಾಗಿದೆ. ಹಳತು ಹೊಸತು, ಪೂರ್ವ ಪಶ್ಚಿಮ, ಪ್ರಾಚೀನ– ನವೀನಗಳ ಸೃಜನಾತ್ಮಕ ಅನುಸಂಧಾನದ ಸರಳ ಸಮನ್ವಯ ಅಲ್ಲ ಬಹುಮುಖ್ಯ ಸಮಾಜಿಕ, ಸಾಂಸ್ಕೃತಿಕ, ರಾಜಕೀಯ ಪ್ರಶ್ನೆ ಇಲ್ಲೂ ಎದುರಾಗಿದೆ. ಲೇಖನದ ಪ್ರಾರಂಭದಲ್ಲಿ ನಿರೂಪಕ ಹೀಗೆ ಹೇಳುತ್ತಾನೆ.

"ಇಂದೊಂದು ವಿಚಿತ್ರವಾದ ಔಷಧಿ ಬೀಳಿನ ಕತೆ. ಇದರ ಬಗ್ಗೆಯ ಸುಳ್ಳು ನಿಜ, ಕಲ್ಪನೆಯ ಕತೆಗಳು ಇವೆಲ್ಲವನ್ನೂ ಮೀರಿ ಈ ಬೀಳಿನ ಬಗ್ಗೆಯ ಸತ್ಯಾಂಶದ ಕೆಲವು ಪಾಲನ್ನು ತಿಳಿದುಕೊಳ್ಳಲು ನನಗೆ ಇಪ್ಪತ್ತು ವರ್ಷಗಳು ಹಿಡಿಯಿತೆಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಆದರೂ ನಿಜ"".

ಒಮ್ಮೆ ಒಂದು ಬಳ್ಳಿಯ ಬೀಳನ್ನು ಕಂಡೊಡನೆ ಮಾರ ಅದನ್ನು ತೆಗೆದು ಲಗು ಬಗೆಯಿಂದ ಪಕ್ಕದಲ್ಲಿದ್ದ ಚಿಕ್ಕ ಮರ ಒಂದಕ್ಕೆ ಸುತ್ತಿಕಟ್ಟಿಬಿಡುತ್ತಾನೆ. ಏಕೆಂದು ನಿರೂಪಕ ಕೇಳಿದರೆ ಆ ಬೀಳಿಗೆ ಋಷಿಯ ಶಾಪವಿರುವುದಾಗಿ, ಬೇಕೂಂತ ಹುಡುಕಿದರೆ ತಲೆ ತಪ್ಪಿಸಿಕೊಂಡು ಬಿಡುತ್ತದೆ. ಆ ಮೇಲೆ ಪ್ರಾಣ ಹೋದರೂ ಸಿಗುವುದಿಲ್ಲವಾದ್ದರಿಂದ ಅದು ಕಣ್ಣಿಗೆ ಕಂಡ ಕೂಡಲೇ ಯಾವುದಾದರೂ ಗಿಡಕ್ಕೆ ಕಟ್ಟಿ ಹಾಕಬೇಕೆಂದು ವಿವರಿಸುತ್ತಾನೆ. ಮಾರನ ಈ ಕಟ್ಟುಕತೆಗಳ ದೆಸೆಯಿಂದ ಅವನು ಹೇಳುವುದರಲ್ಲಿ ಯಾವುದು ಸುಳ್ಳೋ ಯಾವುದು ನಿಜವೋ ತಿಳಿಯುವುದಿಲ್ಲವಾದ್ದರಿಂದ ನಿರೂಪಕ ಗೊಂದಲಗೊಳಗಾಗುತ್ತಾರೆ. ಈ ಪರಿಸ್ಥಿತಿ ಇವತ್ತು ಮಾರನ ಹೇಳಿಕೆಗಳಿಗೆ ಮಾತ್ರವಲ್ಲ. ಇಡೀ ಭಾರತೀಯ ನಾಟಿ ವೈದ್ಯ ಪದ್ದತಿಗೆ ಹಿಡಿದಿರುವ ಪೀಡೆ ಎನ್ನುತ್ತಾರೆ.

ಮಾರ ನಿರೂಪಕರಿಗೆ ತನ್ನ ಅನುಭವದ ಹಲವಾರು ಸಂಗತಿಗಳನ್ನು ವಿವರಿಸುತ್ತಾನೆ. ಒಮ್ಮೆ ಮಾರ ಹಳ್ಳದ ಪಕ್ಕದಲ್ಲಿದ್ದ ಗಿಡ ಒಂದರಿಂದ ಕಡ್ಡಿ ಮುರಿದು ಅದನ್ನು ಜಗಿದು ಬ್ರಷ್‌ನಂತೆ ಮಾಡಿ ಬಲಗಡೆಯಿಂದ ತಿಕ್ಕಲು ಪ್ರಾರಂಭ ಮಾಡಿದೊಡನೆ ಉಜ್ಜಿದ ಹಲ್ಲುಗಳಷ್ಟೂ ಕಳಚಿ ಬಿದ್ದವೆಂದೂ, ಕಾಡಿಗೆ ಕಳಲೆ ಕಡೆಯಲು ಹೋಗಿದ್ದಾಗ ಕಳಲೆ ಕಡಿಯುತ್ತಿರಬೇಕಾದರೆ ಕೈಗೆ ಕತ್ತಿ ತಗುಲಿ ಬಲವಾದ ಗಾಯವಾಗಿ ರಕ್ತನಾಳವೇ ಕತ್ತರಿಸಿ ಹೋಗಿ ರಕ್ತ ಚಿಲುಮೆಯಂತೆ ನುಗ್ಗಿತು. ಆಗ ಆ ರಕ್ತವನ್ನು ನಿಲ್ಲಿಸಲು ಪಕ್ಕದಲ್ಲಿರುವರು ಯಾವುದೋ ಎಲೆ ತಂದು ಗಾಯದ ಮೇಲಿಟ್ಟು ಮಾರನಿಗೆ ಇಲಾಜು ಮಾಡಿಸಲು ಹುಲಿಹಂದಲು ದೊರೆ ಬಳಿಗೆ ಕರೆದೊಯ್ದಾಗ ಆತನ ಗಾಯ ಗುರತೇ ಸಿಗದಂತೆ ಮಾಯವಾದದ್ದನ್ನೂ, ಇದನ್ನು ಕೇಳಿದ ದೊರೆ ಮಾರನಿಗೆ ಆ ಎಲೆಯನ್ನು ತೋರಿದರೆ ತನ್ನ ಸಂಪೂರ್ಣ ಆಸ್ತಿಯನ್ನು ಬರೆದುಕೊಡುವುದಾಗಿ ಹೇಳಿ ಮತ್ತೆ ಕಾಡಿನ ಅದೇ ಸ್ಥಳಕ್ಕೆ ಬಂದು ನೋಡಿದರೆ ಆ ಎಲೆಯ ಪತ್ತೆಯೇ ಸಿಗಲಿಲ್ಲವೆಂಬ ವಿಚಾರ ಹಾಗು ಒಮ್ಮೆ ಮಾರ ಮತ್ತು ಅವನ ಜೊತೆಗಾರ ಕಾಡುಕುರಿಯನ್ನು ಅರ್ಧ ಅರ್ಧ ಪಾಲು ಮಾಡಿಕೊಂಡು ಒಂದು ಎಲೆಯಲ್ಲಿ ಸುತ್ತಿ ಮನೆಗೆ ತಂದು ಅದನ್ನು ಬೇಯಿಸಲು ಹೋಗುವಷ್ಟರಲ್ಲಿ ಅದಕ್ಕೆ ಜೀವ

ಬಂದಿತೆಂಬ ವಿಚಾರಗಳನ್ನು ನಿರೂಪಕರಿಗೆ ತಿಳಿಸುತ್ತಾನೆ. ಮಾರನ ಇಂತಹ ವಿಚಾರಗಳನ್ನು ಹೇಗೆ ನಂಬಲಾಗುವುದಿಲ್ಲವೋ ಅದರಂತೆ ಅದನ್ನು ಸಂಪೂರ್ಣವಾಗಿ ತಳ್ಳಿ ಹಾಕಲೂ ಸಾಧ್ಯವಿಲ್ಲವೆನ್ನುತ್ತಾರೆ ನಿರೂಪಕರು.

ಕುತೂಹಲ, ಅನುಮಾನ, ಸಿನಿಕವಲ್ಲದ ಆರೋಗ್ಯಕರ ಧೋರಣೆ ಈ ಕತೆಯಲ್ಲಿದೆ. ಆಧುನಿಕ ವೈದ್ಯಶಾಸ್ತ್ರದ ಮಿತಿ, ನಾಟಿ ಪದ್ಧತಿಯೊಳಗೆ ನುಸುಳಿರುವ ಮೌಢ್ಯ, ಗುಟ್ಟುಗಳನ್ನು ಸ್ಪಷ್ಟಪಡಿಸುವ ಕ್ರಮ, ಅನ್ವೇಷಣಾ ಪದ್ಧತಿಯು ಗಮನ ಸೆಳೆಯುತ್ತದೆ.

ಸಾಮಾನ್ಯ ಜನರು ಒಂದು ಮೂಲಿಕೆಯ ಉಪಯುಕ್ತತೆ, ಮಹತ್ವ ತಿಳಿದಿದ್ದರು ಅದನ್ನು ಅನಗತ್ಯವಾಗಿ ನಿಗೂಢಗೊಳಿಸುವುದರಿಂದ ಅಪಾರವಾದ ಪಾರಂಪರಿಕ ಜ್ಞಾನ ನಷ್ಟವಾಗುತ್ತಿರುವ ವಿಚಾರವನ್ನು ತಿಳಿಯಬಹುದು.

ಈ ಕತೆಯ ಕೊನೆಯಲ್ಲಿ ನಿರೂಪಕರು ಗಡ್ಡೆಯೊಂದನ್ನು ತಿಂದು ತನ್ನದೊಂದು ಸಮಸ್ಯೆಗೆ ಪರಿಹಾರ ಕಂಡುಕೊಂಡುದ್ದನ್ನು ತಿಳಿಸುತ್ತಾರೆ. ಆದರೆ ನಿರೂಪಕರು ತಮ್ಮ ಸಮಸ್ಯೆಗೆ ಪರಿಹಾರ ದೊರೆತದ್ದು ಆ ಗಡ್ಡೆಯನ್ನು ತಿಂದದ್ದರಿಂದಲೇ ಎಂದು ಖಚಿತವಾದ ನಿರ್ಣಯಕ್ಕೆ ಬರುವುದಿಲ್ಲ. ಅದನ್ನು ಆಕಸ್ಮಿಕವೆಂದು ಗುರುತಿಸುತ್ತಾರೆ. ಇಲ್ಲಿ ನಿರೂಪಕರಿಗೆ ನಾಟಿ ವೈದ್ಯರು ಬಲವಾಗಿ ನಂಬಿಕೊಂಡಿರುವ ನಂಬಿಕೆಯ ಬಗೆಗೆ ವಿಶಾದವಿದೆ. ಔಷಧಿ ಯಾವುದೆಂದು ಹೇಳಿ ಬಿಟ್ಟರೆ ಔಷಧದ ಗುಣ ನಾಶವಾಗಿ ಬಿಡುತ್ತದೆ ಎನ್ನುವ ನಂಬಿಕೆ ಇದು ಭಾರತದ ನಾಟಿ ವೈದ್ಯ ಪದ್ಧತಿಯನ್ನೇ ವಿನಾಶದ ಅಂಚಿಗೆ ತಳ್ಳಿದೆ.

"ಕಾಳಪ್ಪನ ಕೋಬ್ರ" ಕತೆಯಲ್ಲಿ ಕಾಳಪ್ಪ ತನ್ನ ಅಪ್ಪನಿಗೆ ನಾಲ್ಕೆಕರೆ ಜಮೀನು ಇದ್ದರೂ ಮುಂಬಯಿಗೆ ಹೋಗಿ ಟೆನಿಸ್‌ಕ್ಲಬ್ ಒಂದರಲ್ಲಿ ಬಾಲ್‌ಬಾಯ್ ಆದ ಕತೆಯನ್ನು ತೀವ್ರ ವಿಷಾದದಿಂದ ಆದರೆ ತಮ್ಮ ಎಂದಿನ ವಿನೋದ ಬಿಟ್ಟುಕೊಡದೆ ವರ್ಣಿಸುತ್ತಾರೆ. ಕತೆಯ ಒಂದು ಘಟ್ಟದಲ್ಲಿ ಕಾಳಪ್ಪ ಹೇಳುತ್ತಾನೆ. "ಕ್ಲಬ್ಬಿನ ಜವಾನಿಕೆ ಅಂತ ನೀವು ಉದಾಸ್ನದಲ್ಲಿ ನೋಡಬೇಡಿ ಸಾರ್!. ಎಂತೆಂಥ ದೊಡ್ಡ ದೊಡ್ಡ ಆಫೀಸರುಗಳೆಲ್ಲ ಅಲ್ಲಿ ಆಟಕ್ಕೆ ಬರ್ತಾರೆ. ಪರಿಚಯ ಆಗ್ತಾರೆ ಗೊತ್ತಾ. ಛೀಫ್ ಮಿನಿಸ್ಟರು, ಡೆಪ್ಟಿಕಮೀಷನರು ಎಲ್ಲ ಬಂದು ಆಟ ಆಡ್ತಾರೆ. ಬಾಲು ಎತ್ತಿ ಕೊಟ್ಟದ್ದಕ್ಕೆ ತಗಾ ಹಿಡಿ ಅಂತ ಎಷ್ಟೋ ಸಾರಿ ನನಗೆ ಇನಾಮು ಕೊಟಿದ್ದಾರೆ ಸಾರ್! ಇಲ್ಲಿ ಗದ್ದೆ ಮಾಡಿ ಮೈ ಕೈ ಎಲ್ಲ ಕೆಸರು ಮಾಡಿಕೊಳ್ಳೋದಷ್ಟೆ. ಬೊಂಬಾಯಿಯಲ್ಲಿ ಬೀಡಾ ಮಾಡೋವನ

ಇಷ್ಟಗಲ ಹರಿವಾಣದಲ್ಲಿ ಬರೋ ಉತ್ಪತ್ತಿ ನಮ್ಮಪ್ಪನ ನಾಲ್ಕು ಎಕರೆ ಗದ್ದೆಯಲ್ಲಿ ಬರೋದಿಲ್ಲ. ಇಲ್ಲಿ ವರ್ಷ ಎಲ್ಲ ದುಡಿದರೂ ಅಲ್ಲಿ ನನಗೆ ಒಂದು ತಿಂಗಳಿಗೆ ಸಿಗೋ ದುಡ್ಡು ಇಲ್ಲಿ ಸಿಗೋಲ್ಲ ಎಂದ.

" ಪೇಟೆಯಿಂದ ಹಳ್ಳಿಗೆ ಬಂದು ವ್ಯವಸಾಯ ಆರಂಭಿಸಿದ್ದ ನನಗೆ ಅವನು ಈ ರೀತಿ ವ್ಯವಸಾಯವನ್ನು ಬಾಲ್‌ಬಾಯ್ ಕೆಲಸಕ್ಕಿಂತ ಕೀಳಾದುದೆಂದು ಹೇಳಿದ್ದು ಹಿಡಿಸಲಿಲ್ಲ. ಆದರೂ ನನಗೆ ದಿಗಿಲಾಗುವಂತೆ ಅವನು ಭಾರತದ ಯಾವುದೋ ದಾರುಣ ಸತ್ಯ ತಿಳಿಸುತ್ತಿರುವಂತೆನಿಸಿತು".

ಸಾಮಾನ್ಯ ರೈತರಿಗೂ ತಮ್ಮ ಪರಂಪರಾಗತ ಬದುಕಿನ ಬಗ್ಗೆ ಆಸಕ್ತಿ ಹೋಗುತ್ತದೆ. ಈ ಜೀವನ ಕ್ರಮ ತಮ್ಮ ಆಸೆಗಳನ್ನು, ಅವಶ್ಯಕತೆಗಳನ್ನು ಪೂರೈಸಲಾರದೆಂದು ಅವರು ಪಟ್ಟಣಕ್ಕೆ ವಲಸೆ ಬರುತ್ತಾರೆ. ಸಣ್ಣ ಸಣ್ಣ ಭೂ ಮಾಲೀಕರೂ ತಮ್ಮ ಜಮೀನು ಮಾರಿ ಪಟ್ಟಣಕ್ಕೆ ಹೋಗಿ ಜವಾನರಾಗಲು ಇಷ್ಟ ಪಡುತ್ತಾರೆ. ಏಕೆಂದರೆ ಆರ್ಥಿಕವಾಗಿ ಅದೇ ಹೆಚ್ಚು ಲಾಭದಾಯಕ! ಪರಿಸ್ಥಿತಿ ಇಷ್ಟು ಭೀಕರವಾಗಿರುವಾಗ ಮರಗಿಡಗಳನ್ನು ಪ್ರೀತಿಸಿ ಎಂಬ ಭಾವುಕ ಹೇಳಿಕೆಗಳೇ ಅಸಂಬದ್ಧವೆನಿಸಿಬಿಡಬಹುದು.

ಮನುಷ್ಯ ತನ್ನ ಅನುಕೂಲಕ್ಕೆ ಮತ್ತು ತನ್ನ ಲಾಭ ಹಾಗು ಸ್ವಾರ್ಥಗಳಿಗೆ ತನ್ನ ಪರಿಸರದಲ್ಲಿ ಅನೇಕ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಾನೆ. ಅಂತಹುಗಳಲ್ಲಿ ಅಣೆಕಟ್ಟುಗಳು ಒಂದು ಗೊರೂರು ಅಣೆಕಟ್ಟನ್ನು ಕಟ್ಟಿದ ಮೇಲೆ ಹೇಮಾವತಿ ನದಿಯಲ್ಲಿ ಮರಳು ತುಂಬುತ್ತಾ ಆಳವಾದ ಮಡುಗಳೆಲ್ಲ ಹೂಳು ತುಂಬಿ ಮುಚ್ಚಿಕೊಳ್ಳುತ್ತಾ ಬಂದು. ಈಗ ಹೇಮಾವತಿ ನದಿಯಲ್ಲಿ ಆಳವಾದ ಗುಂಡಿಗಳೇ ಇಲ್ಲ. ಬೇಸಗೆಯಲ್ಲಿ ನೀರು ಎಷ್ಟು ತೆಳ್ಳಗೆ ಹರಿಯುತ್ತದೆಯೆಂದರೆ ಯಾರು ಬೇಕಾದರೂ ಪಂಚೆ ನೆನೆಯದ ಹಾಗೆ ಎಲ್ಲಿ ಬೇಕಾದರೂ ದಾಟಬಹುದು. ಅಲ್ಲಿ ಈಗ ಯಾವ ಗುಂಡಿಯಾಗಲಿ, ಮಡುವಾಗಲಿ ಇಲ್ಲ. ಹಾಗೆ (ಗಿಡಮೂಲಿಕೆಗಳ ಬಗ್ಗೆ, ಭಾರತೀಯ ನಾಟಿ ವೈದ್ಯ ಪದ್ಧತಿಯ ಬಗ್ಗೆ ಪ್ರಸ್ತಾಪಿಸುವಾಗ ಸ್ಥಳೀಯ ಜ್ಞಾನಕ್ಕೆ ಮೂಢನಂಬಿಕೆಯ ಮುಸುಗು ಕವಿದು ಅಮೂರ್ತವಾಗಿರುವ ಪಶ್ಚಿಮದ ಮೂರ್ತತೆಗೆ ಈ ಅಮೂರ್ತವನ್ನು ಭೇದಿಸುವಷ್ಟು ಸಹನೆಯೂ ಇಲ್ಲ. ಸಹಾನುಭೂತಿಯೂ ಇಲ್ಲ. ಈ ಅಮೂರ್ತವನ್ನು ಭೇದಿಸುವಷ್ಟು ಸಹನೆಯೂ ಇಲ್ಲ. ಸಹಾನುಭೂತಿಯೂ ಇಲ್ಲ. ಈ ದುಗುಡದಲ್ಲಿ ತೃತೀಯ ಜಗತ್ತು ತನ್ನ ಹೆಜ್ಜೆಗಳನ್ನು ಇಡಬೇಕಾಗಿದೆ. ತನ್ನ ಆಯ್ಕೆಗಳನ್ನು ಮಾಡಿಕೊಳ್ಳಬೇಕಾಗಿದೆ).

ಮರಳು ತುಂಬುತ್ತಾ ಬಂದರೆ ಬೇಸಗೆಯಲ್ಲಿ ಹೇಮಾವತಿ ನದಿಯಲ್ಲಿ ನೀರು ಹರಿಯುವುದೇ ನಿಲ್ಲಬಹುದು. ಬಯಲು ಸೀಮೆಯ ನದಿಗಳ ಹಾಗೆ ಮಳೆ ಬಂದಾಗ ಮಾತ್ರ ಕೆಲವು ಕಾಲ ಹರಿಯುವ ನದಿಗಳ ದಾರಿಯಲ್ಲಿ ಮಲೆನಾಡಿನ ಈ ಜೀವನದಿಗಳೂ ಇರುವ ಹಾಗೆ ಕಾಣುತ್ತೆ. ಸಮಾಜದ, ದೇಶದ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಈ ಕಾರ್ಯಗಳು ಪ್ರಕೃತಿಗೆ ಮಾರಕವಾಗುತ್ತಿರುವುದನ್ನು ಗುರುತಿಸಬಹುದು.

ಆಧುನಿಕತೆಯ ಆಕ್ರಮಣದಿಂದ ಹಳ್ಳಿಯ ಪರಿಸರದಲ್ಲಿ ಉಂಟಾಗುವ ಬದಲಾವಣೆಗಳ ಪರಿಯನ್ನು ವರ್ಣಿಸುವ ಕತೆಯೇ ತುಕ್ಕೋಜಿ ಹಳ್ಳಿಯಲ್ಲಿ ಕೆಲಸ ಮಾಡುವ ತುಕ್ಕೋಜಿಯ ವೈಯಕ್ತಿಕ ಜೀವನದಲ್ಲಿ ಉಂಟಾದ ಕೆಲವು ವೈಪರಿತ್ಯಗಳು ಹಾಗು ರೈಲ್ವೆ ನಿಲ್ದಾಣದ ಆಗಮನದಿಂದ ಊರಿನ ಮೇಲೆ ಆಗುವ ಪರಿಣಾಮವನ್ನು ಬಹಳ ಸ್ವಾರಸ್ಯಕರವಾಗಿ ಈ ಕತೆಯಲ್ಲಿ ಚಿತ್ರಿಸಿದ್ದಾರೆ. ತುಕ್ಕೋಜಿ ತಂದೆಗೆ ವಿರುದ್ಧವಾಗಿ ಸರೋಜಳನ್ನು ವಿವಾಹವಾಗಿ ಗುರುಗಳ್ಳಿಯಲ್ಲಿ ತನ್ನ ಕುಲಕಸುಬಾದ ಟೈಲರಿಂಗನ್ನು ಪ್ರಾರಂಭಿಸುತ್ತಾನೆ. ಇದರಿಂದಾಗಿ ಜನರ ಪ್ರಶಂಸೆಗೆ ಗುರಿಯಾಗುತ್ತಾನೆ. ಇವನ ಕೆಲಸದಲ್ಲಿ ಮೊದಲು ಸರೋಜಳೂ ಸಹಾಯ ಮಾಡುತ್ತಿದ್ದರೂ ಮಗುವಾದ ಮೇಲೆ ಅವಳಿಗೆ ತನ್ನ ಗಂಡನ ಕೆಲಸದಲ್ಲಿ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ಇವರಿಬ್ಬರ ದಾಂಪತ್ಯ ಹಾಗೂ ತುಕ್ಕೋಜಿಯ ಕಸುಬಿನ ಮೇಲೆ ತೀವ್ರ ಪರಿಣಾಮವುಂಟಾಗುತ್ತದೆ. ಅವರಿಬ್ಬರಲ್ಲಿ ಪ್ರೀತಿ ಕಡಿಮೆಯಾಗುವುದರೊಂದಿಗೆ ತುಕ್ಕೋಜಿಯ ಗಿರಾಕಿಗಳೂ ಕಡಿಮೆಯಾಗುತ್ತಾ ಬರುತ್ತಾರೆ. ಕೊನೆಯಲ್ಲಿ ಮಗುವನ್ನು ಸೇತುವೆ ನಿರ್ಮಾಣ ಕಾರ್ಯಕ್ಕೆಂದು ಬಂದಿದ್ದ ಬೃಹತ್ ಯಂತ್ರವೊಂದರ ಡ್ರೈವರ್ ಮಗುವನ್ನು ಹೆದರಿಸಲು ತನ್ನೊಂದಿಗೆ ಕರೆದುಕೊಂಡು ಹೋಗುತ್ತಾನೆ. ಎಷ್ಟೋ ಸಮಯದವರೆಗೂ ಬಾರದಿದ್ದಾಗ ತುಕ್ಕೋಜಿ ದಂಪತಿಗಳಲ್ಲಿ ಆತಂಕ ಮತ್ತು ಅರಿವು ಮೂಡುತ್ತದೆ. ತಾವು ಮಗುವನ್ನು ತಮ್ಮ ಜಗಳಕ್ಕಾಗಿ ಬಳಸಿಕೊಂಡದ್ದನ್ನು ಕಂಡು ಪಶ್ಚಾತ್ತಾಪ ಉಂಟಾಗುತ್ತದೆ. ಅದೇ ಸಮಯದಲ್ಲಿ ಮಗುವನ್ನು ಡ್ರೈವರ್ ಹಿಂದಿರುಗಿಸುತ್ತಾನೆ.

ಈ ಕತೆಯು ನಾಗರೀಕತೆ ಮತ್ತು ವೃತ್ತಿ ಸಮಸ್ಯೆಗಳ ನಡುವಿನ ತಾಕಲಾಟವನ್ನು ಚಿತ್ರಿಸುತ್ತದೆ. ನಾಗರಿಕತೆಯ ಬೆಳವಣಿಗೆಯೊಂದಿಗೆ ವ್ಯಕ್ತಿಯ ವೈಯಕ್ತಿಕ ಬದುಕಿನ ಸಂಬಂಧಗಳು ದುರ್ಬಲಗೊಳ್ಳುತ್ತಾ ಹೋಗುವುದನ್ನು ಈ ಕತೆ ಚಿತ್ರಿಸುತ್ತದೆ.

ಒಟ್ಟಾರೆಯಾಗಿ ತೇಜಸ್ವಿಯವರು ತಮ್ಮ ಕತೆಗಳ ಮೂಲಕ ಪ್ರಕೃತಿಯು ಇಂದು ಮನುಷ್ಯನ ನವ ನಾಗರಿಕತೆಯ ಹಂಬಲದಿಂದ, ಹೊಸ ಹೊಸ ಬದಲಾವಣೆಗಳಿಂದ, ಆಧುನಿಕತೆಯ ಕಾತರತೆಯಿಂದ ಸಂಘರ್ಷಕ್ಕೀಡಾಗಿರುವುದನ್ನು ಗುರುತಿಸುತ್ತೇವೆ. ತಮ್ಮ ಕತೆಗಳು ಮೂಲಕ ತೇಜಸ್ವಿ ಮನುಷ್ಯನ ಅಟ್ಟಹಾಸ ಹೀಗೆ ಮುಂದುವರಿದರೆ ಮುಂದೊಂದು ದಿನ ಇದರಿಂದುಂಟಾಗುವ ಪರಿಣಾಮಗಳನ್ನು ಎದುರಿಸಬೇಕಾದವನು, ತಾನು ತೋಡಿದ ಹಳ್ಳದಲ್ಲಿ ತಾನೇ ಬೀಳುವವನು ಮನುಷ್ಯನೇ ಎಂಬುದನ್ನು ಸೂಚಿಸುತ್ತಾರೆ.

ಅಡಿಟಿಪ್ಪಣಿ

1. ಪರಿಸರದ ಕತೆ ತೇಜಸ್ವಿ ಪು.ಸಂ. – 46
2. ಅದೇ, ಪು.ಸಂ. – 02
3. ಅದೇ, ಪು.ಸಂ. – 02
4. ಕಿರಗೂರಿನ ಗಯ್ಯಾಳಿಗಳು – ತೇಜಸ್ವಿ – ಪು.ಸಂ. – 77
5. ಪರಿಸರದ ಕತೆ – ಪು.ಸಂ. – 115
6. ಅದೇ ಪು.ಸಂ. 88

ಅಧ್ಯಾಯ– 8

ಉಪಸಂಹಾರ:

ನವ್ಯ, ನವ್ಯೋತ್ತರ ಕಾಲ ಘಟ್ಟಗಳ ನಡುವೆ ತಮ್ಮದೇ ಆದ ವಿಶಿಷ್ಟ ಅಭಿವ್ಯಕ್ತಿ ಕ್ರಮವನ್ನು ರೂಢಿಸಿಕೊಂಡು ಬರೆಯುತ್ತಿರುವ ತೇಜಸ್ವಿ ನವೋದಯದ ಸರಳ ಕಥಾನಕ ಶೈಲಿ, ನವ್ಯದ ಮನೋವಿಶ್ಲೇಷಣಾತ್ಮಕತೆ ಹಾಗು ದಲಿತ ಬಂಡಾಯದ ಸಾಮಾಜಿಕ ಕಳಕಳಿಯನ್ನು ರೂಢಿಸಿಕೊಂಡಿದ್ದಾರೆ. ಇವರ ನಡೆ, ನುಡಿ, ಚಿಂತನೆ ಹಾಗು ಕಾರ್ಯಗಳಲ್ಲಿ ಪರಿಸರವೇ ಕೇಂದ್ರ ಹಾಗು ಸ್ಥಾಯಿಯಾಗಿರುತ್ತದೆ. ಇವರಂತೆ ವಿಜ್ಞಾನವನ್ನು ಕನ್ನಡದಲ್ಲಿ ಆಪ್ಯಾಯ ಮಾನವಾಗಿ ಬರೆಯಬಲ್ಲ ಲೇಖಕರು ವಿರಳವೆಂದೇ ಹೇಳಬೇಕು. ನಿಸರ್ಗ ಹಾಗೂ ಮನುಷ್ಯನ ಸಂಬಂಧವನ್ನು ವಿವರಿಸುವಲ್ಲಿ ಲಘು ಹಾಸ್ಯವನ್ನು ಬಳಸಿಕೊಂಡಂತಹ ತೇಜಸ್ವಿಯವರು ಮನುಷ್ಯನ ಅಸ್ಥಿತ್ವದ ಹಾಗು ಪ್ರಕೃತಿಯ ಅವಸಾನದ ಪ್ರಶ್ನೆಯನ್ನು ನಮ್ಮ ಮುಂದೆ ತೆರೆದಿಡುತ್ತಾರೆ. ತೇಜಸ್ವಿಯವರಿಗೆ ನಿಸರ್ಗದ ಬಗ್ಗೆ ಇರುವ ಗಾಢ ಪ್ರೇಮ, ಅದರ ನಿಗೂಢತೆಯ ಬಗೆಗಿನ ವಿಸ್ಮಯ ಅವರ ಕತೆಗಳಲ್ಲಿ ಸೇರ್ಪಡೆಯಾಗುತ್ತವೆ ಮಾತ್ರವಲ್ಲ ಅನೇಕ ಸಂದರ್ಭಗಳಲ್ಲಿ ತೇಜಸ್ವಿಯವರು ಕತೆಯ ನಿರೂಪಕನಾಗಿಯೇ ಪಾಲ್ಗೊಳ್ಳುತ್ತಾರೆ.

ತೇಜಸ್ವಿ ಬರೆದ ಕತೆ, ಕಾದಂಬರಿ, ಕಾವ್ಯ, ನಾಟಕ, ಪ್ರವಾಸ ಕಥನ ವೈಜ್ಞಾನಿಕ ಬರಹ, ಅನುವಾದ ಹಾಗೂ ಪ್ರಾಣಿ ಪಕ್ಷಿಗಳನ್ನು ಕುರಿತು ಬರೆದ ನುಡಿಚಿತ್ರಗಳಲ್ಲಿ ತನ್ನದೇ ವೈಶಿಷ್ಟ್ಯ ಇದೆ. ಸದಾ ಎಚ್ಚರದಿಂದಿದ್ದು ಎದುರಿನ ಆಗು ಹೋಗುಗಳಿಗೆ ಸ್ಪಂದಿಸುತ್ತಲೇ ಸಮಾಜವಾದಿ, ವಾಸ್ತವವಾದಿ ಬರಹಗಾರರಾಗಿ ರೂಪುಗೊಂಡಿರುವ ತೇಜಸ್ವಿ ಪರಿಸರದೊಂದಿಗೆ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡಿದ್ದಾರೆ. ಪರಿಸರ ನಾಶವನ್ನು ಸಹಿಸದ ಅವರು ಪರಿಸರ ನಾಶದ ಹಿಂದೆ ಇರುವ ಕ್ರೂರ, ಭೂಗತ ಮುಖಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಅವರ ಅಭಿವ್ಯಕ್ತಿ ತೀರ ಸರಳ ಹಾಗೂ ನೇರವೆನಸಿದರೂ ಅದರಲ್ಲಿ ಅಡಕವಾಗಿರುವ ಧ್ವನಿಪೂರ್ಣತೆ ವಿಶಿಷ್ಟವಾಗಿರುತ್ತದೆ. ಹೀಗಾಗಿ ಅವರ ಎಲ್ಲಾ ಬರಹಗಳು ಓದುಗರನ್ನು ತಲುಪುವಲ್ಲಿ ಯಶಸ್ವಿಯಾಗಿವೆ.

<u>ಗ್ರಂಥಋಣ</u>

1. ಪೂರ್ಣಚಂದ್ರ ತೇಜಸ್ವಿ ಕೆ.ಪಿ.
   ಅ. ಪರಿಸರದ ಕತೆಗಳು
   ಪುಸ್ತಕ ಪ್ರಕಾಶನ, ಮೈಸೂರು – 1991
   ಆ. ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು
   ಪುಸ್ತಕ ಪ್ರಕಾಶನ, ಮೈಸೂರು – 1993
   ಇ. ಕಿರಗೂರಿನ ಗಯ್ಯಾಳಿಗಳು
   ಪುಸ್ತಕ ಪ್ರಕಾಶನ, ಮೈಸೂರು – 1991
   ಈ. ಅಬಚೂರಿನ ಪೋಸ್ಟಾಫೀಸು
   ಪುಸ್ತಕ ಪ್ರಕಾಶನ, ಮೈಸೂರು – 1973
   ಉ. ಪಾಕಕ್ರಾಂತಿ ಮತ್ತು ಇತರ ಕತೆಗಳು
   ಪುಸ್ತಕ ಪ್ರಕಾಶನ, ಮೈಸೂರು – 2008

2. ಟಿ.ಪಿ. ಅಶೋಕ : ತೇಜಸ್ವಿ ಕಥನ
   ಅಕ್ಷರ ಪ್ರಕಾಶನ, ಸಾಗರ – 2004

3. ಎಚ್.ಶಶಿಕಲಾ : ಏಕ – ಅನೇಕ
   ಸಿ.ವಿ.ಜಿ.ಪಬ್ಲಿಕೇಷನ್, ಬೆಂಗಳೂರು– 2005

4. ಬಿ.ಎನ್.ಸುಮಿತ್ರಾಬಾಯಿ : ಸರಹದ್ದುಗಳ ಆಚೆ – ಈಚೆ
   ಇಳಾ ಪ್ರಕಾಶನ – 2009

5. ಸಂ.ಬಿ.ಚಂದ್ರೇಗೌಡ ಬಿ.ಎಲ್.ರಾಜು : ತೇಜಸ್ವಿ ನೆನಪು

6. ವಿಮರ್ಶೆಯ ವಿಮರ್ಶೆ : ಕೆ.ಪಿ. ಪೂರ್ಣಚಂದ್ರ ತೇಜಸ್ವಿ
   ಪುಸ್ತಕ ಪ್ರಕಾಶನ, ಮೈಸೂರು – 2009

7. ಡಾ॥ ಎಚ್.ಎಂ.ಮಹೇಶ್ವರಯ್ಯ ಸಂ. ಡಾ॥ ಪ್ರಧಾನಗುರುದತ್ತ : ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು
   ಪೂರ್ಣಚಂದ್ರ ತೇಜಸ್ವಿ ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು – 2008

8. ಪ್ರಹ್ಲಾದ : ತೇಜಸ್ವಿ ಲೋಕ